# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮೇ 29 ಗುರುವಾರ 2025


ಸಂಪುಟ: 46 | ಸಂಚಿಕೆ: 43 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





## ಮಿಲಿಟರಿ ಕ್ಯಾಂಟೀನ್‌ಗೆ ಅಬಕಾರಿ ಶುಲ್ಕ ಹಾಕಲ್ಲ

ಬೆಂಗಳೂರು, ಮೇ 28(ಕೆಎಂಶಿ)– ರಾಜ್ಯದಲ್ಲಿನ ಯೋಧರ ಕ್ಯಾಂಟೀನ್‌ಗಳಿಗೆ ಅಬಕಾರಿ ಸುಂಕ ಹಾಕುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಭರವಸೆ ನೀಡಿದ್ದಾರೆ.

ನಗರದ ಟೌನ್‌ಹಾಲ್‌ನಲ್ಲಿ ನಡೆದ 'ಜೈ ಹಿಂದ್ ಸಭಾ'ದಲ್ಲಿ ನಿವೃತ್ತ ಭಾರತೀಯ ಯೋಧರು ಹಾಗೂ ಹುತಾತ್ಮ ಯೋಧರ ಕುಟುಂಬ ಸದಸ್ಯರನ್ನು ಸನ್ಮಾನಿಸಿ ಮಾತನಾಡಿದ ಅವರು, ಯೋಧರ ಕ್ಯಾಂಟೀನ್‌ಗೆ ಅಬಕಾರಿ ಸುಂಕ ಹಾಕದಿರುವ ಘೋಷಣೆ ಮಾಡಿದರು.

ಸೈನಿಕರು, ರೈತರು, ವೈದ್ಯರು, ಶಿಕ್ಷಕರು ತಂದೆ ತಾಯಿಯಷ್ಟೇ ಸ್ಮರಣೀಯರು. ತ್ಯಾಗ ಮನೋಭಾವದಿಂದ ಯೋಧರು ದೇಶ ರಕ್ಷಣೆಯಲ್ಲಿ ತೊಡಗಿದ್ದಾರೆ. ದೇಶದ ರಕ್ಷಣೆ 140 ಕೋಟಿ ಭಾರತೀಯರ ಜವಾಬ್ದಾರಿ. ಶಿಷ್ಟ ರಕ್ಷಣೆ, ದುಷ್ಟರ ಸಂಹಾರ ಕಾರ್ಯದಲ್ಲಿ ಭಾರತ ಎಂದೂ ರಾಜೀ ಮಾಡಿಕೊಂಡಿಲ್ಲ. ಮುಂದೆಯೂ ಮಾಡಿಕೊಳ್ಳುವುದಿಲ್ಲ. ಇದು ಪ್ರತಿಯೊಬ್ಬ ಭಾರತೀಯನ ಬದ್ಧತೆಯಾಗಿದೆ. ನಿವೃತ್ತ ಯೋಧರ ಕಲ್ಯಾಣಕ್ಕೆ ಸರ್ಕಾರ ಅಗತ್ಯ ಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದರು.

## ಕೆಪಿಟಿಸಿಎಲ್ ಎಂಜಿನಿಯರ್ಸ್ ಆಯ್ಕೆ ಪಟ್ಟಿ ರದ್ದು: ಮರು ಪರೀಕ್ಷೆಗೆ ಹೈಕೋರ್ಟ್ ಸೂಚನೆ

**ಬೆಂಗಳೂರು:** ಕರ್ನಾಟಕ ರಾಜ್ಯ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿನ (ಕೆಪಿಟಿಸಿಎಲ್) 404 ಸಹಾಯಕ ಎಂಜಿನಿಯರ್ (ಎಇ) ಮತ್ತು ಕಿರಿಯ ಎಂಜಿನಿಯರ್‌ಗಳ (ಜೆಇ) ನೇಮಕ ಸಂಬಂಧ 2024ರ ಮೇ 8ರಂದು ಪ್ರಕಟಿಸಿದ್ದ ಆಯ್ಕೆ ಪಟ್ಟಿಯನ್ನು ಹೈಕೋರ್ಟ್ ರದ್ದುಗೊಳಿಸಿದೆ. ಅಲ್ಲದೆ, ಆದಷ್ಟು ಬೇಗ ಮರು ಪರೀಕ್ಷೆ ನಡೆಸುವಂತೆ ಕೆಪಿಟಿಸಿಎಲ್ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ನ್ಯಾಯಾಲಯ ನಿರ್ದೇಶನ ನೀಡಿದೆ. ಪರೀಕ್ಷೆಗೆ ಕೆಲವೇ ದಿನಗಳ ಮುನ್ನ ನೆಗೆಟಿವ್ ಅಂಕಗಳ ಕುರಿತು ಆದೇಶ ಹೊರಡಿಸಿದ್ದನ್ನು ಪ್ರಶ್ನಿಸಿ ಬೆಂಗಳೂರಿನ ನವೀನ್ ಕುಮಾರ್ ಹಾಗೂ ಇನ್ನಿತರೆ ಅಭ್ಯರ್ಥಿಗಳು ಸಲ್ಲಿಸಿದ್ದ ಮೇಲ್ಮನವಿಯನ್ನು ಆಲಿಸಿ ಕಾಯ್ದಿರಿಸಿದ್ದ ತೀರ್ಪನ್ನು ಸಿಜೆ ಎನ್.ವಿ. ಅಂಜಾರಿಯಾ ಮತ್ತು ನ್ಯಾ.ಕೆ.ವಿ.ಅರವಿಂದ್ ಅವರಿದ್ದ ವಿಭಾಗೀಯ ಪೀಠ ಈ ಮಹತ್ವದ ಆದೇಶ ನೀಡಿದೆ.

# ನನ್ನನ್ನ CM ಮಾಡಿ

● ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಬಳಿ ಡಿ.ಕೆ.ಶಿವಕುಮಾರ್ ಹಕ್ಕೊತ್ತಾಯ ● ದುಡುಕಬೇಡಿ, ನವೆಂಬರ್ ವೇಳೆಗೆ ನಿಮಗೆ ದಕ್ಕಬೇಕಾದ ಸ್ಥಾನ ದೊರೆಯಲಿದೆ; ಕೆಸಿವಿ ಸಲಹೆ



'ಜೈ ಹಿಂದ್ ಸಭಾ' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಕರ್ನಾಟಕಕ್ಕೆ ಆಗಮಿಸಿದ್ದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಮಂಗಳವಾರ ರಾತ್ರಿ ಬೆಂಗಳೂರಿನ ಪಂಚತಾರಾ ಹೋಟೆಲೊಂದರಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಭೇಟಿ ಮಾಡಿದರು.

**ಬೆಂಗಳೂರು, ಮೇ 28(ಕೆಎಂಶಿ)– ಅಧಿಕಾರ ಹಂಚಿಕೆ ವೇಳೆ ನಡೆದ ಒಪ್ಪಂದದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಡಳಿತಾವಧಿ ಮುಗಿದಿದ್ದು, ನನಗೆ ಅಧಿಕಾರ ಹಸ್ತಾಂತರಿಸಿ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ವರಿಷ್ಠರ ಮುಂದೆ ಪಟ್ಟು ಹಿಡಿದಿದ್ದಾರೆ.**

'ಜೈ ಹಿಂದ್ ಸಭಾ' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಕರ್ನಾಟಕಕ್ಕೆ ಆಗಮಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ನಿನ್ನೆ ರಾತ್ರಿ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಪಂಚತಾರಾ ಹೋಟೆಲೊಂದರಲ್ಲಿ ಭೇಟಿ ಮಾಡಿದ ಶಿವಕುಮಾರ್, ಈ ಹಕ್ಕೊತ್ತಾಯ ಮಂಡಿಸಿದ್ದಾರೆ.

ಅಧಿಕಾರ ಬಿಟ್ಟುಕೊಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನೂ ಕೋರಿದ್ದೇನೆ. ಅಲ್ಲದೆ, ಈ ಸಂಬಂಧ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಗಮನಕ್ಕೂ ತಂದಿರುವ ವಿಚಾರ ನಿಮಗೂ ತಿಳಿದಿದೆ. ಅಂದು ಆಗಿರುವ ಒಪ್ಪಂದದಂತೆ ಮೊದಲ ಎರಡು ವರ್ಷ ಸಿದ್ದರಾಮಯ್ಯ, ನಂತರದ ಸಮಯದಲ್ಲಿ ನನಗೆ ಅಧಿಕಾರ ಎಂಬುದಾಗಿ ನೀವುಗಳೇ ಸೂತ್ರ ರೂಪಿಸಿದ್ದಿರಿ. ಆದರೆ, ಇದೀಗ ತಲಾ ಎರಡೂವರೆ ವರ್ಷ ಅಧಿಕಾರ ಹಂಚಿಕೆ ಎಂಬ ಮಾತುಗಳು ಕೇಳಿಬರುತ್ತಿವೆ. ನಿಮ್ಮ ಸೂತ್ರದ ಪ್ರಕಾರ ನನಗೆ ಅಧಿಕಾರ ಕೊಡಿಸಬೇಕು, ಈಗ ಬಿಟ್ಟರೆ ಮುಂದೆ ಮುಖ್ಯಮಂತ್ರಿ ಆಗುವುದಕ್ಕೆ ಅಡೆ–ತಡೆಗಳು ಹೆಚ್ಚಾಗುವ ಸಾಧ್ಯತೆ ಇದೆ. ಪಕ್ಷ ಸಂಘಟನೆ ವಿಚಾರದಲ್ಲಿ ನನ್ನ ಬಗ್ಗೆ ನಿಮಗೆ ಎಲ್ಲವೂ ತಿಳಿದಿದೆ. ಅದೇ ರೀತಿ ಉತ್ತಮ ಆಡಳಿತ ನೀಡಿ, ಕಾಂಗ್ರೆಸ್ ಅನ್ನು ರಾಜ್ಯದಲ್ಲಿ ಪುನಃ ಅಧಿಕಾರಕ್ಕೆ ತರುವ ಭರವಸೆ ನೀಡುತ್ತೇನೆ ಎಂದಿದ್ದಾರೆ. ಜೊತೆಗೆ ಕರ್ನಾಟಕ ಹಾಲು ಒಕ್ಕೂಟದ ▶ 6ನೇ ಪುಟಕ್ಕೆ

### ಸೂಕ್ತ ಸಮಯದಲ್ಲಿ ಸ್ಥಾನ ಸಿಗುತ್ತೆ...

ಬೆಂಗಳೂರು, ಮೇ 28– ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರವಾಗಿ ನೀವು ಯಾವ ಗುಂಪುಗಾರಿಕೆ ಮಾಡಕೂಡದು. ಯಾವ ಸಭೆ, ಔತಣಕೂಟಗಳನ್ನು ಏರ್ಪಡಿಸಬಾರದು. ಇದರಿಂದ ಗೊಂದಲ ಸೃಷ್ಟಿಯಾಗುತ್ತದೆ. ಅದು ವಿಪಕ್ಷ ಬಿಜೆಪಿ ಹಾಗೂ ಜೆಡಿಎಸ್‌ಗೆ ಆಹಾರವಾಗುತ್ತದೆ ಎಂದು ಕಾಂಗ್ರೆಸ್ ವರಿಷ್ಠರು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಕಿವಿಮಾತು ಹೇಳಿದ್ದಾರೆ.

ಇಂದು ಬೆಳಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ನಿವಾಸದಲ್ಲಿ ಖರ್ಗೆ ಅವರ ಸಮ್ಮುಖದಲ್ಲೇ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲ, ಡಿ.ಕೆ.ಶಿವಕುಮಾರ್ ಅವರೊಂದಿಗೆ ಸಮಾಲೋಚನೆ ನಡೆಸಿದರು. ಈ ವೇಳೆ ನಿಮಗೆ ಸಲ್ಲಬೇಕಾದ ಸ್ಥಾನವನ್ನು ಕಲ್ಪಿಸುವುದರಲ್ಲಿ ಅನುಮಾನ ಬೇಡ. ಅಲ್ಲಿಯವರೆಗೆ ನೀವು ಮೌನವಾಗಿರಿ.

ಪಕ್ಷದ ವರಿಷ್ಠರು ಸೂಕ್ತ ಸಮಯದಲ್ಲಿ ನಿರ್ಧಾರವನ್ನು ಕೈಗೊಳ್ಳುತ್ತಾರೆ. ಯಾವುದೇ ಗುಂಪುಗಾರಿಕೆ ಬೇಡ. ಹೇಳಿಕೆಗಳನ್ನು ನೀಡುವ ಮೂಲಕ ಗೊಂದಲ ಸೃಷ್ಟಿಸಬೇಡಿ ಎಂದು ಡಿ.ಕೆ.ಶಿವಕುಮಾರ್‌ಗೆ ಸಲಹೆ ನೀಡಿದ್ದಾರೆ. ಈ ವೇಳೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷ ಹಿಂದೆ ಮಾತು ಕೊಟ್ಟಂತೆ ನಡೆದುಕೊಳ್ಳುವುದರಲ್ಲಿ ಯಾವುದೇ ಅನುಮಾನ ಬೇಡ. ಸಿದ್ದರಾಮಯ್ಯ ಅವರಿಗೆ ರಾಷ್ಟ್ರೀಯ ಮಟ್ಟದಲ್ಲಿ ಉನ್ನತ ಸ್ಥಾನ ಲಭಿಸಲಿದೆ. ಇದೆಲ್ಲವೂ ಸರಿಯಾದ ಸಮಯಕ್ಕೆ ನೆರವೇರಲಿದ್ದು, ಅನಗತ್ಯ ಗೊಂದಲ ಸೃಷ್ಟಿಸಿ ಬಿಜೆಪಿಗೆ ಅವಕಾಶ ಮಾಡಿಕೊಡದಂತೆ ಸೂಚನೆ ನೀಡಿದ್ದಾರೆ.


# 14 ಬೆಳೆಗಳ ಕನಿಷ್ಠ ಬೆಂಬಲ ಬೆಲೆ ಹೆಚ್ಚಳಕ್ಕೆ ಕೇಂದ್ರ ಸಂಪುಟ ಒಪ್ಪಿಗೆ



ನವದೆಹಲಿ, ಮೇ 28– ಕೇಂದ್ರದ ಪ್ರಧಾನಿ ಮೋದಿ ಸರ್ಕಾರ ಕೃಷಿ ಮತ್ತು ಮೂಲಸೌಕರ್ಯ ಕ್ಷೇತ್ರದಲ್ಲಿ ಪ್ರಮುಖ ನಿರ್ಧಾರಗಳನ್ನು ಅಂಗೀಕರಿಸಿದೆ. 2025–26ರ ಋತುವಿನ ಖಾರಿಫ್ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಗಳನ್ನು ಸರ್ಕಾರ ಅನುಮೋದಿಸಿದೆ. ಮಾರುಕಟ್ಟೆ ಬೆಲೆಗಳು ಕಡಿಮೆಯಾಗಿದ್ದರೂ ಸಹ, ರೈತರಿಂದ ಬೆಳೆಗಳನ್ನು ಖರೀದಿಸಲು ಸರ್ಕಾರ ಭರವಸೆ ನೀಡುವ ಕನಿಷ್ಠ ಬೆಲೆಯೇ ಎಂಎಸ್‌ಪಿ. ರೈತರು ನ್ಯಾಯಯುತ ಬೆಲೆಯನ್ನು ಪಡೆಯಲು ಪ್ರತಿ ವರ್ಷ ವಿವಿಧ ಬೆಳೆಗಳಿಗೆ ಎಂಎಸ್‌ಪಿ ನಿಗದಿಪಡಿಸಲಾಗುತ್ತದೆ. ಖಾರಿಫ್ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಗಳಲ್ಲಿ ಹೆಚ್ಚಳ, ರೈತರಿಗೆ ಬಡ್ಡಿ ರಿಯಾಯಿತಿ ಯೋಜನೆಯ ಮುಂದುವರಿಕೆ ಮತ್ತು ಆಂಧ್ರಪ್ರದೇಶ, ಮಧ್ಯಪ್ರದೇಶ, ▶ 6ನೇ ಪುಟಕ್ಕೆ

**ಬೆಳೆಗಳು**
ಭತ್ತ, ಜೋಳ, ಸಜ್ಜೆ, ರಾಗಿ, ಮೆಕ್ಕೆಜೋಳ, ತೊಗರಿ, ಹೆಸರು ಕಾಳು, ಉದ್ದಿನ ಕಾಳು, ನೆಲಗಡಲೆ, ಸೂರ್ಯ ಕಾಂತಿ ಬೀಜ, ಸೋಯಾ ಬೀನ್ಸ್, ಎಳ್ಳು, ಹುಚ್ಚೆಳ್ಳು, ಹತ್ತಿ.

### ಪ್ರತಿ ತಾಲೂಕಲ್ಲೂ ಖರೀದಿ ಕೇಂದ್ರ ಸ್ಥಾಪಿಸಿ



**ಬೆಂಗಳೂರು:** ಪ್ರತಿ ತಾಲೂಕಿನಲ್ಲೂ ಖರೀದಿ ಕೇಂದ್ರ ಸ್ಥಾಪಿಸಲು ಕರ್ನಾಟಕ ಹೈಕೋರ್ಟ್ ಆದೇಶ ಹೊರಡಿಸಿದೆ. ರೈತ ಸೇನೆ ಸಲ್ಲಿಸಿದ್ದ ಪಿಐಎಲ್ ಅರ್ಜಿ ವಿಚಾರಣೆ ಮಾಡಿದ ಹೈಕೋರ್ಟ್, ಕನಿಷ್ಠ ಬೆಂಬಲ ಬೆಲೆಯ ಖರೀದಿ ಕೇಂದ್ರ ಆರಂಭಿಸಲು ಸಿಜೆ ಎನ್.ವಿ.ಅಂಜಾರಿಯಾ ಮತ್ತು ನ್ಯಾ.ಕೆ.ವಿ.ಅರವಿಂದ್ ಅವರಿದ್ದ ಪೀಠ ಆದೇಶ ನೀಡಿದೆ. ಪ್ರತಿ ಜಿಲ್ಲೆಗಳ ಬೆಳೆಗಳ ಲಭ್ಯತೆಯ ವೈಜ್ಞಾನಿಕ ಅಧ್ಯಯನ ನಡೆಸಬೇಕು. ಅಗತ್ಯವಿದ್ದಷ್ಟು ಕನಿಷ್ಠ ಬೆಂಬಲ ಬೆಲೆಯ ಖರೀದಿ ಕೇಂದ್ರ ಸ್ಥಾಪಿಸಬೇಕು. ನಿಗದಿತ ಅವಧಿಗಿಂತ ಕನಿಷ್ಠ 2 ತಿಂಗಳು ಖರೀದಿ ಕೇಂದ್ರದ ಅವಧಿ ವಿಸ್ತರಿಸಬೇಕು ಎಂದು ಪೀಠ ನಿರ್ದೇಶನ ನೀಡಿದೆ. ಕರ್ನಾಟಕದಲ್ಲಿ ಕನಿಷ್ಠ ಬೆಂಬಲ ಬೆಲೆಯ ಖರೀದಿ ಕೇಂದ್ರ ಆರಂಭಿಸಲು ರೈತರು ಸಾಕಷ್ಟು ಬಾರಿ ಸರ್ಕಾರಕ್ಕೆ ಆಗ್ರಹಿಸಿದ್ದಾರೆ. ಬೆಳೆಗಳ ಕಟಾವು ಮಾಡಿ ದಲ್ಲಾಳಿಗಳಿಗೆ ಮಾರಾಟ ಮಾಡಿದ ನಂತರ ಸರ್ಕಾರ ಖರೀದಿ ಕೇಂದ್ರಗಳನ್ನು ಆರಂಭಿಸುತ್ತದೆ. ಈ ನಿಟ್ಟಿನಲ್ಲಿ ಬೆಳೆಗಳ ಕಟಾವಿಗೂ ಮುಂಚೆಯೇ ಖರೀದಿ ಕೇಂದ್ರಗಳನ್ನು ಆರಂಭಿಸುವಂತೆ ರೈತರು ಆಗ್ರಹಿಸಿದ್ದರು.

# ನಾಳೆಯಿಂದ ಶಾಲೆಗಳು ಆರಂಭ: ಮಕ್ಕಳನ್ನು ಸಂಭ್ರಮದಿಂದ ಸ್ವಾಗತಿಸಿ

● ಶಾಲಾ ಮುಖ್ಯಸ್ಥರಿಗೆ ಡಿಡಿಪಿಐ ಸೂಚನೆ ● ಇಂದು ಶಾಲೆಗಳಲ್ಲಿ ಸ್ವಚ್ಛತಾ ಕಾರ್ಯ



ಸಂಗ್ರಹ ಚಿತ್ರ

> **"ಪ್ರಸಕ್ತ ಶೈಕ್ಷಣಿಕ ಸಾಲಿನ ಶಾಲಾ ಚಟುವಟಿಕೆಗಳು ಮೇ 30ರಿಂದ ಆರಂಭಗೊಳ್ಳಲಿವೆ. ಮೇ 27ರಿಂದ 31ರವರೆಗೆ ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ವಿಶೇಷ ದಾಖಲಾತಿ ಆಂದೋಲನ ಮತ್ತು ಜೂನ್ 2ರಿಂದ 30ರವರೆಗೆ ಸಾಮಾನ್ಯ ದಾಖಲಾತಿ ಆಂದೋಲನ ಹಮ್ಮಿಕೊಂಡು, ಇದರ ವರದಿಯನ್ನು ಭಾವಚಿತ್ರ ಸಮೇತ ಆಯಾಯ ಬಿಇಓ ಕಚೇರಿಗಳಿಗೆ ತಲುಪಿಸಬೇಕು. ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಿಸಲು ಶಾಲಾ ಆರಂಭದ ದಿನದಿಂದಲೇ ಕ್ರಿಯಾ ಯೋಜನೆ ರೂಪಿಸಿ, ವಿಶೇಷ ತರಗತಿಗಳನ್ನು ನಡೆಸಬೇಕು.** –ಎಸ್.ಟಿ.ಜವರೇಗೌಡ, ಡಿಡಿಪಿಐ

ಮೈಸೂರು, ಮೇ 28(ಎಸ್‌ಪಿಎನ್) – ಬೇಸಿಗೆ ರಜೆ ಮುಗಿದು ಶಾಲೆಗಳಿಗೆ ಚಿಣ್ಣರು ಆಗಮಿಸಲು ಕ್ಷಣಗಣನೆ ಆರಂಭವಾಗಿದ್ದು, ಮೇ 30ರಂದು ಶಾಲಾ ಪ್ರಾರಂಭೋತ್ಸವದ ಮೂಲಕ ವಿದ್ಯಾರ್ಥಿಗಳನ್ನು ಸ್ವಾಗತಿಸಲು ಮೈಸೂರು ಜಿಲ್ಲಾ ಶಾಲಾ ಶಿಕ್ಷಣ ಇಲಾಖೆ ಸಕಲ ಸಿದ್ಧತೆ ಮಾಡಿಕೊಂಡಿದೆ.

ಪ್ರತಿ ವರ್ಷದಂತೆ ಈ ಶೈಕ್ಷಣಿಕ ವರ್ಷದ ಆರಂಭದಲ್ಲಿ ವಿದ್ಯಾರ್ಥಿಗಳನ್ನು ವಿನೂತನವಾಗಿ ಸ್ವಾಗತಿಸುವ ಕಾರ್ಯಕ್ರಮಕ್ಕೆ ಜಿಲ್ಲೆಯ ಎಲ್ಲಾ ಶಾಲೆಗಳು, ಶಿಕ್ಷಕರಿಗೆ ಶಾಲಾ ಇಲಾಖೆ ಮಾರ್ಗಸೂಚಿ ಬಿಡುಗಡೆಗೊಳಿಸಿದೆ.

ಇಲಾಖೆ ಸೂಚನೆಯಂತೆ ಶುಕ್ರವಾರ (ಮೇ30)ದಿಂದ ಶಾಲೆಗಳು ಆರಂಭಗೊಳ್ಳುವುದರಿಂದ ಗುರುವಾರವೇ ಶಾಲೆಗಳಲ್ಲಿ ಸ್ವಚ್ಛತಾ ಕಾರ್ಯಗಳ ಹಮ್ಮಿಕೊಳ್ಳುವಂತೆ ಡಿಡಿಪಿಐ ಎಸ್.ಟಿ. ಜವರೇಗೌಡ, ಆಯಾಯ ಶಾಲಾ ಮುಖ್ಯ ಶಿಕ್ಷಕರಿಗೆ ಸೂಚಿಸಿದ್ದಾರೆ.

ಈ ಕಾರ್ಯಕ್ಕೆ ಶಾಲಾ ಶಿಕ್ಷಕರು ಕೈಜೋಡಿಸಿ, ಶಾಲಾ ಆವರಣ, ತರಗತಿ ಕೋಣೆ, ಅಡುಗೆ ಕೋಣೆ, ಶೌಚಾಲಯ ಹಾಗೂ ನೀರಿನ ಸಿಂಟೆಕ್ಸ್, ಅಡುಗೆ ಪರಿಕರ ಸ್ವಚ್ಛತೆ ಹಾಗೂ ಶಾಲೆಗಳ ಮೇಲ್ಛಾವಣಿ ಮೇಲಿರುವ ಕಸತೆಗೆದು ಸ್ವಚ್ಛವಾಗಿಡಬೇಕು. ಜಿಲ್ಲೆಯ ವಿವಿಧೆಡೆಯ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ಶಾಲಾ ಪ್ರಾರಂಭಕ್ಕೆ ಸಕಲ ಸಿದ್ಧತೆಗಳು ನಡೆದಿವೆ. ಈಗಾಗಲೇ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳು ▶ 6ನೇ ಪುಟಕ್ಕೆ

# ಕನ್ನಡಿಗರ ಕ್ಷಮೆ ಕೇಳಲ್ಲ; ಕಮಲ್ ಹಾಸನ್



ಬೆಂಗಳೂರು, ಮೇ 28– ತಮಿಳಿನಿಂದ ಕನ್ನಡ ಹುಟ್ಟಿದೆ ಎಂದು ಹೇಳಿಕೆಗೆ ನೀಡಿದ್ದ ಕಮಲ್ ಹಾಸನ್ ಮತ್ತೆ ಉದ್ಧಟತನ ಮೆರೆದಿದ್ದಾರೆ. ಈಗಾಗಲೇ ರಾಜ್ಯದಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ. ಕನ್ನಡಪರ ಸಂಘಟನೆಗಳು ಸೇರಿದಂತೆ ಅನೇಕ ರಾಜಕೀಯ ನಾಯಕರು ಕಮಲ್ ಹಾಸನ್ ಕ್ಷಮೆಯಾಚಿಸಬೇಕೆಂದು ಆಗ್ರಹಿಸುತ್ತಿದ್ದಾರೆ. ಈ ನಡುವೆ ಘಟನೆಗೆ ಸಂಬಂಧಿಸಿದಂತೆ ನಾನು ಕ್ಷಮೆ ಕೇಳಲ್ಲ ಎಂದು ಉದ್ಧಟತನ ಪ್ರದರ್ಶಿಸಿದ್ದಾರೆ.

ಈ ಕುರಿತು ಮಾಧ್ಯಮದ ಜೊತೆ ಮಾತನಾಡಿರುವ ಕಮಲ್, ನನ್ನ ಮಾತುಗಳನ್ನು ತಪ್ಪಾಗಿ ಅರ್ಥೈಸಲಾಗಿದೆ. ನಾನು ಪ್ರೀತಿಯಿಂದ ಹಾಗೆ ಹೇಳಿದ್ದೇನೆ. ಯಾರನ್ನೂ ನೋಯಿಸುವ ಉದ್ದೇಶ ಇರಲಿಲ್ಲ. ನನ್ನ ಮಾತಿಗೆ ನಾನು ಬದ್ಧನಾಗಿದ್ದೇನೆ. ಬಹಳಷ್ಟು ಇತಿಹಾಸಕಾರರು ಭಾಷೆಯ ಇತಿಹಾಸ ತಿಳಿಸಿರುವಂತೆ ಮಾತನಾಡಿದ್ದೇನೆ. ನಾನು ಪ್ರೀತಿಯಿಂದ ಹೇಳಿದ್ದಕ್ಕೆ ಕ್ಷಮೆಯಾಚಿಸುವುದಿಲ್ಲ ಎಂದಿದ್ದಾರೆ. ಭಾಷೆಯ ಬಗ್ಗೆ ಮಾತನಾಡಲು ರಾಜಕಾರಣಿಗಳು ಅರ್ಹರಲ್ಲ, ಅದರ ಬಗ್ಗೆ ಮಾತನಾಡುವ ಅರ್ಹತೆ ಅವರಿಗೂ ಇಲ್ಲ, ನನಗೂ ಇಲ್ಲ. ಈ ಬಗ್ಗೆ ಇತಿಹಾಸಕಾರರು, ಪುರಾತತ್ವ ಶಾಸ್ತ್ರಜ್ಞರು ಚರ್ಚೆ ಮಾಡಲಿ. ಇದೆಲ್ಲವನ್ನು ಇಲ್ಲಿಗೆ ಬಿಟ್ಟುಬಿಡೋಣ. ಶಿವಣ್ಣ ನನ್ನ ತಮ್ಮನಂತೆ, ಅವರ ತಂದೆ ನನ್ನ ತಂದೆ ಸಮಾನರು. ನಾವೆಲ್ಲರೂ ಒಂದೇ ಕುಟುಂಬದಂತೆ. ಭಾಷೆಯು ಕೂಡ ಇದು ನಾನು ನೀಡುತ್ತಿರುವ ಉತ್ತರವಲ್ಲ, ವಿವರಣೆ. ಪ್ರೀತಿ ಯಾವತ್ತು ಕ್ಷಮೆಯನ್ನು ಬೇಡಲ್ಲ ಎಂದಿದ್ದಾರೆ.

### ಕನ್ನಡದ ಇತಿಹಾಸ ಗೊತ್ತಿಲ್ಲ



**ಬೆಂಗಳೂರು:** ಕನ್ನಡ ಭಾಷೆಗೆ ಬಹಳ ದೀರ್ಘ ಇತಿಹಾಸವಿದೆ. ಆದರೆ ನಟ ಕಮಲ್ ಹಾಸನ್ ಅವರಿಗೆ ಕನ್ನಡದ ಇತಿಹಾಸ ಗೊತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ನಟ ಕಮಲ್ ಹಾಸನ್, ಚೆನ್ನೈನಲ್ಲಿ ಸೋಮವಾರ ನಡೆದ ತಮ್ಮ 'ಥಗ್ ಲೈಫ್' ಚಿತ್ರದ ಆಡಿಯೋ ಬಿಡುಗಡೆ ಸಮಾರಂಭದಲ್ಲಿ ತಮಿಳಿನಿಂದ ಕನ್ನಡ ಹುಟ್ಟಿದೆ ಎಂದು ಹೇಳಿದ್ದು, ಇದಕ್ಕೆ ಕನ್ನಡಿಗರು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ನಗರದಲ್ಲಿ ಕಮಲ್ ಹಾಸನ್ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಕನ್ನಡ ಭಾಷೆಗೆ ಬಹಳ ದೀರ್ಘ ಇತಿಹಾಸವಿದೆ. ಅವರಿಗೆ (ಕಮಲ್ ಹಾಸನ್) ಗೊತ್ತಿಲ್ಲ ಎಂದು ತಿರುಗೇಟು ನೀಡಿದರು.

ಬೆಂಗಳೂರು, ಬೆಳಗಾವಿ, ಮೈಸೂರು, ಹುಬ್ಬಳ್ಳಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ನಟ ಕಮಲ್ ಹಾಸನ್ ಹೇಳಿಕೆ ಖಂಡಿಸಿ ಹಲವಾರು ಕನ್ನಡ ಪರ ಸಂಘಟನೆಗಳು ಪ್ರತಿಭಟನೆ ನಡೆಸಿವೆ. ನಟ–ರಾಜಕಾರಣಿ ಕಮಲ್ ಹಾಸನ್ ಅವರು ರಾಜ್ಯದ ಜನರಲ್ಲಿ ಕ್ಷಮೆಯಾಚಿಸಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದ್ದಾರೆ. ಅಲ್ಲದೆ ಕ್ಷಮೆಯಾಚಿಸಲು ವಿಫಲವಾದರೆ, ಅವರ 'ಥಗ್ ಲೈಫ್' ಚಿತ್ರ ಪ್ರದರ್ಶನವನ್ನು ತಡೆಯುವುದಾಗಿ ಎಚ್ಚರಿಕೆ ನೀಡಿದ್ದಾರೆ.

# ತವಕದಿಂದಲೇ ದೇಶದಲ್ಲಿ ವಾರ್ಷಿಕ 30 ಲಕ್ಷ ಜನ ಹೃದಯಾಘಾತ, ಬ್ರೈನ್ ಸ್ಟ್ರೋಕ್‌ಗೆ ಒಳಗಾಗುತ್ತಿದ್ದಾರೆ

● ಸಂಸದರೂ ಆದ ಖ್ಯಾತ ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್ ನೋವಿನ ನುಡಿ ● ಮೈಸೂರು ಗೋಕುಲಂನಲ್ಲಿ 'ಎಸ್.ಎಂ.ಕೃಷ್ಣ ಮೆಮೋರಿಯಲ್ ನ್ಯೂರೋಝೋನ್' ಚಿಕಿತ್ಸಾ ಘಟಕ ಉದ್ಘಾಟನೆ ● ವಿವಾಹ ವಾರ್ಷಿಕೋತ್ಸವದಂತೆ 35 ವರ್ಷ ತುಂಬಿದ ಪುರುಷ, 45 ವರ್ಷ ತುಂಬಿದ ಮಹಿಳೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಅವಶ್ಯ

ಮೈಸೂರು, ಮೇ 28(ಎಸ್‌ಬಿಡಿ)– ಭಾರತದಲ್ಲಿ ವಾರ್ಷಿಕ 30 ಲಕ್ಷ ಜನ ಹೃದಯಾಘಾತ ಹಾಗೂ ಬ್ರೈನ್ ಸ್ಟ್ರೋಕ್‌ಗೆ ತುತ್ತಾಗುತ್ತಿದ್ದಾರೆ ಎಂದು ಬೆಂಗಳೂರು ಗ್ರಾಮಾಂತರ ಸಂಸದರೂ ಆದ, ಜಯದೇವ ಹೃದ್ರೋಗ ಸಂಸ್ಥೆಯ ಮಾಜಿ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ತಿಳಿಸಿದರು.

ಮೈಸೂರಿನ ಗೋಕುಲಂ 3ನೇ ಹಂತ, ಡಾಕ್ಟರ್ಸ್ ಕಾರ್ನರ್ ಬಳಿ ಆರಂಭಗೊಂಡಿರುವ 'ಎಸ್.ಎಂ. ಕೃಷ್ಣ ಮೆಮೋರಿಯಲ್ ನ್ಯೂರೋಝೋನ್' ಘಟಕದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತದಲ್ಲಿ ಹೃದಯಾಘಾತ ಹಾಗೂ ಬ್ರೈನ್ ಸ್ಟ್ರೋಕ್ ನಂಬರ್ ಒನ್ ಕಿಲ್ಲರ್ ಆಗಿ ಪರಿಣಮಿಸಿದ್ದು, ಈ ಕಾರಣದಿಂದ ವರ್ಷದಲ್ಲಿ 30 ಲಕ್ಷ ಜನ ಸಾವನ್ನಪ್ಪುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಹೃದಯಾಘಾತ ಹಾಗೂ ಬ್ರೈನ್ ಸ್ಟ್ರೋಕ್‌ಗೆ ಕಾರಣಗಳು ಸಾಮ್ಯವಾಗಿವೆ. ಧೂಮಪಾನ, ಮದ್ಯಪಾನ, ಸಕ್ಕರೆ ಕಾಯಿಲೆ, ಒತ್ತಡ, ಆಹಾರ ಪದ್ಧತಿ ಇನ್ನಿತರ ಕಾರಣಗಳಿಂದ ಈ ಕಾಯಿಲೆಗೆ ತುತ್ತಾಗುತ್ತಿದ್ದಾರೆ. ಇವರೆಡಕ್ಕೂ ಒಂದೆರಡು ಗಂಟೆಯ ಗೋಲ್ಡನ್ ಹವರ್‌ನಲ್ಲಿ ಚಿಕಿತ್ಸೆ ಲಭ್ಯವಾದರೆ ಗುಣಮುಖವಾಗಬಹುದು. ಹಿಂದೆ ತಂದೆ–ತಾಯಿಯನ್ನು ಅವರ ಮಕ್ಕಳು ಆಸ್ಪತ್ರೆಗೆ ಕರೆತರುತ್ತಿದ್ದರು. ಈಗ 25–40 ವರ್ಷದೊಳಗಿನವರನ್ನು ತಂದೆ–ತಾಯಿಯೇ ಕರೆತರುವಂತಾಗಿದೆ. ಕಾಲ ಬದಲಾಗಿಲ್ಲ, ಬದಲಾಗಿರುವುದು ಜನರ ಜೀವನ ಶೈಲಿ, ಅಪೇಕ್ಷೆ, ನಿರೀಕ್ಷೆಗಳು ಇದಕ್ಕೆಲ್ಲಾ ಕಾರಣ. ಹೃದಯ ಹಾಗೂ ಮೆದುಳಿನ ಆರೋಗ್ಯ ಚೆನ್ನಾಗಿಟ್ಟುಕೊಳ್ಳಬೇಕು ಎಂದರೆ ಬ್ಲಡ್ ಶುಗರ್, ▶ 6ನೇ ಪುಟಕ್ಕೆ



ಮೈಸೂರಿನ ಗೋಕುಲಂ ಬಡಾವಣೆಯಲ್ಲಿ ಎಸ್.ಎಂ.ಕೃಷ್ಣ ಮೆಮೋರಿಯಲ್ ನ್ಯೂರೋಝೋನ್ ಘಟಕವನ್ನು ದಿವಂಗತ ಎಸ್.ಎಂ.ಕೃಷ್ಣ ಅವರ ಧರ್ಮಪತ್ನಿ ಪ್ರೇಮಾ ಕೃಷ್ಣ ಇತರ ಗಣ್ಯರೊಡಗೂಡಿ ಬುಧವಾರ ಉದ್ಘಾಟಿಸಿದರು. ಸಂಸದ ಡಾ.ಸಿ.ಎನ್.ಮಂಜುನಾಥ್, ಶಾಸಕ ಜಿ.ಟಿ.ದೇವೇಗೌಡ, ಪಬ್ಲಿಕ್ ಟಿವಿ ಚೇರ್ಮನ್ ಹೆಚ್.ಆರ್.ರಂಗನಾಥ್, ನ್ಯೂರೋಝೋನ್‌ನ ಮುಖ್ಯಸ್ಥ ಡಾ.ಶುಶ್ರುತ್‌ಗೌಡ ಮತ್ತಿತರರಿದ್ದರು.

> "ಡಾ.ವಿಷ್ಣುಮೂರ್ತಿ ಅವರು ಶಾಂತವೇರಿ ಗೋಪಾಲಗೌಡರ ಹೆಸರಲ್ಲಿ ಆಸ್ಪತ್ರೆ ತೆರೆದರೆ, ವಿಷ್ಣುಮೂರ್ತಿ ಅವರ ಪುತ್ರ ಡಾ.ಶುಶ್ರುತ್ ಅವರು ತಮ್ಮ ತಂದೆಯ ಒಡನಾಡಿ ಎಸ್.ಎಂ.ಕೃಷ್ಣ ಅವರ ಹೆಸರಲ್ಲಿ ಆಸ್ಪತ್ರೆ ತೆರೆದಿದ್ದಾರೆ. ಕ್ರಿಯಾಶೀಲರಾದ ಶುಶ್ರುತ್ ಅವರಲ್ಲಿ ಆಸೆ, ಹಂಬಲ ಇದೆ. ಇವರಿಂದ ಸಮಾಜಕ್ಕೆ ಇನ್ನೂ ಸಾಕಷ್ಟು ಸೇವೆ ಸಿಗಬೇಕಿದೆ. –ಜಿ.ಟಿ.ದೇವೇಗೌಡರು, ಹಿರಿಯ ಶಾಸಕರು

> "ಪತ್ರಕರ್ತರಿಗೆ ರಾಜಕಾರಣಿಗಳು ಮಾದರಿ ಆಗುವುದಿಲ್ಲ. ಆದರೆ ಎಸ್.ಎಂ.ಕೃಷ್ಣ ಅವರೊಂದಿಗೆ ಆಪ್ಯಾಯ ಪ್ರೀತಿ–ವಿಶ್ವಾಸವಿತ್ತು. ಅವರಿಂದ ಕಲಿತಿದ್ದೇನೆ ಎಂದು ಹೆಮ್ಮೆಯಿಂದ ಹೇಳುತ್ತೇನೆ. ನ್ಯೂರೋ ಹಾಗೂ ಕ್ಯಾನ್ಸರ್ ಚಿಕಿತ್ಸೆ ದೇಶದಲ್ಲಿ ದುಬಾರಿ. ರಾಜಕಾರಣಿಗಳನ್ನು ಬೈಯ್ಯಬಹುದು. ಆದರೆ ಅವರು ಯಾವ ರೀತಿಯಲ್ಲೋ ಜನರಿಗೆ ಸಹಾಯ ಮಾಡಿರುತ್ತಾರೆ. ಸ್ವಾರ್ಥ ಎನಿಸಿದರೂ ಅವರಲ್ಲಿ ಸೇವಾ ಮನೋಭಾವ ಇರುತ್ತದೆ. ನ್ಯೂರೋ ಝೋನ್ ಘಟಕಕ್ಕೆ ಒಳ್ಳೆಯವರ ಹೆಸರಿಟ್ಟಿದ್ದಾರೆ, ಡಾ.ಶುಶ್ರುತ್‌ಗೆ ಒಳ್ಳೆಯ ಮನಸ್ಸಿದೆ. ಹಾಗಾಗಿ ಇಲ್ಲಿ ಜನರಿಗೆ ಉತ್ತಮ ಸೇವೆ ಸಿಕ್ಕೇ ಸಿಗುತ್ತದೆ ಎಂಬ ನಂಬಿಕೆ ಇದೆ. –ಹೆಚ್.ಆರ್. ರಂಗನಾಥ್, ಪಬ್ಲಿಕ್ ಟಿವಿ

> "ಡಾ.ವಿಷ್ಣುಮೂರ್ತಿ ಹಾಗೂ ರೇಖಾ ಅವರ ಪರಿಶ್ರಮದಿಂದ ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ಜನರಿಗೆ ಉತ್ತಮ ಸೇವೆ ನೀಡುತ್ತಿದೆ. ಅಲ್ಲಿಯೂ ನ್ಯೂರೋ ಝೋನ್ ಘಟಕ ನಡೆಸುತ್ತಿರುವ ಡಾ.ಶುಶ್ರುತ್, ಇಲ್ಲಿ ಮತ್ತೊಂದು ಘಟಕ ಆರಂಭಿಸಿದ್ದಾರೆ. ಒಳ್ಳೆಯ ವೈದ್ಯ, ಆದರೆ ಯಾರೋ ಇವರನ್ನು ರಾಜಕಾರಣಕ್ಕೆ ಸೆಳೆದಿದ್ದಾರೆ. ಆದರೆ ವೈದ್ಯ ವೃತ್ತಿಗೆ ಮೊದಲ ಆದ್ಯತೆ ನೀಡಿ, ರಾಜಕೀಯದಲ್ಲೂ ಮುಂದುವರೆಯಲಿ. –ಶ್ರೀಮತಿ ಪ್ರೇಮಾ ಕೃಷ್ಣ, ಎಸ್.ಎಂ.ಕೃಷ್ಣ ಅವರ ಧರ್ಮಪತ್ನಿ





# ನಾಡದೇವಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದ ಯಡಿಯೂರಪ್ಪ

## ಸೋಮಶೇಖರ್, ಹೆಬ್ಬಾರ್ ಉಚ್ಚಾಟನೆ ವಿಚಾರವಾಗಿ ಪ್ರತಿಕ್ರಿಯೆ ನೀಡಲು ನಕಾರ



ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬುಧವಾರ ಚಾಮುಂಡಿಬೆಟ್ಟಕ್ಕೆ ಆಗಮಿಸಿ, ನಾಡದೇವತೆ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರು.

ಮೈಸೂರು, ಮೇ28(ಬಿಎಲ್‌ಯು)– ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬುಧವಾರ ಚಾಮುಂಡಿಬೆಟ್ಟಕ್ಕೆ ಆಗಮಿಸಿ, ನಾಡದೇವತೆ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರು.

ಮಾಜಿ ಶಾಸಕ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಸೇರಿದಂತೆ ಹಲವು ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಯಡಿಯೂರಪ್ಪ ಅವರನ್ನು ಸ್ವಾಗತಿಸಿದರು. ಚಾಮುಂಡೇಶ್ವರಿ ತಾಯಿಯ ದರ್ಶನ ವೇಳೆ ಯಡಿಯೂರಪ್ಪ, ತಮ್ಮ ಕುಟುಂಬ ಸದಸ್ಯರ ಹೆಸರು ಹೇಳಿ ಅರ್ಚನೆ ಮಾಡಿಸಿದರು.

ತರುವಾಯ ಪತ್ರಕರ್ತರ ಜೊತೆ ಮಾತನಾಡಿ, ಇಂದು ಬೆಳಿಗ್ಗೆ ಇದ್ದಕ್ಕಿದ್ದಂತೆ ತಾಯಿ ದರ್ಶನ ಪಡೆಯಬೇಕು ಅನಿಸಿತು. ಹಾಗಾಗಿ ಇಲ್ಲಿಗೆ ಬಂದೆ ಎಂದು ದಿಢೀರ್ ಭೇಟಿಗೆ ಕಾರಣ ತಿಳಿಸಿದರು.

ನನ್ನ ಮೊಮ್ಮಗನ ಮದುವೆ ಇದೆ. ನಮ್ಮ ಮನೆ ಶುಭ ಕಾರ್ಯಕ್ಕೆ ಒಳ್ಳೆಯದಾಗಲಿ ಎಂದು ದೇವಿಯಲ್ಲಿ ಪ್ರಾರ್ಥಿಸಿಕೊಂಡಿರುವೆ ಎಂದು ಯಡಿಯೂರಪ್ಪ ಹೇಳಿದರು.

ತಮಿಳು ಭಾಷೆಯಿಂದ ಕನ್ನಡ ಹುಟ್ಟಿತು ಎಂಬ ನಟ ಕಮಲ್ ಹಾಸನ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಯಡಿಯೂರಪ್ಪ, ಕಮಲ್ ಹಾಸನ್ ಹೇಳಿಕೆ ಖಂಡನೀಯ. ಕರ್ನಾಟಕದ ಪ್ರತಿಯೊಬ್ಬರು ಕಮಲ್ ಹಾಸನ್ ಹೇಳಿಕೆಯನ್ನು ಖಂಡಿಸಿದ್ದಾರೆ. ಇಂತಹ ಹೇಳಿಕೆಯನ್ನು ಯಾರೂ ಕೊಡಬಾರದು ಎಂದು ಸಲಹೆ ನೀಡಿದರು.

ಶಾಸಕರಾದ ಎಸ್.ಟಿ.ಸೋಮಶೇಖರ್ ಹಾಗೂ ಶಿವರಾಮ್ ಹೆಬ್ಬಾರ್ ಅವರನ್ನು ಬಿಜೆಪಿಯಿಂದ ಉಚ್ಚಾಟಿಸಿರುವ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡದೆ ಮುನ್ನಡೆದರು. ನಂತರ ಯಡಿಯೂರಪ್ಪ ಬೆಂಗಳೂರಿಗೆ ತೆರಳಿದರು.

# ಮೈಸೂರಿನ ಹೈದರಾಲಿ ರಸ್ತೆಯ ಮರಗಳ ಹನನ; ನ್ಯಾಯಾಂಗ ತನಿಖೆಗೆ ಆಗ್ರಹ

## ತಪ್ಪಿತಸ್ಥರಿಗೆ ದಂಡ ವಿಧಿಸಲು ಪರಿಸರ ಉಳಿವಿಗಾಗಿ ಕ್ರಿಯಾ ಸಮಿತಿ ಒತ್ತಾಯ

ಮೈಸೂರು, ಮೇ 28(ಬಿಎಲ್‌ಯು)– ಮೈಸೂರಿನ ಹೈದರ್ ಅಲಿ ರಸ್ತೆಯಲ್ಲಿನ ಮರಗಳ ಮಾರಣಹೋಮ ನಡೆಸಿದ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಿ ತಪ್ಪಿತಸ್ಥರಿಗೆ ದಂಡ ವಿಧಿಸಬೇಕು ಎಂದು ಪರಿಸರ ಉಳಿವಿಗಾಗಿ ಕ್ರಿಯಾ ಸಮಿತಿ, ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಸಮಿತಿ, ಈ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ದಂಡ ವಿಧಿಸಿ, ಜೈಲಿಗೆ ಕಳುಹಿಸಿರುವ ಉತ್ತರ ಪ್ರದೇಶ ಮಾದರಿಯ ಕಾನೂನು ಜಾರಿಗೊಳಿಸಿ, ಅಲ್ಲಿನ ಕ್ರಮ ಅನುಸರಿಸಬೇಕು ಎಂದು ಆಗ್ರಹಿಸಿದೆ.

ಮರ ಕಡಿದಿರುವ ಹೈದರ್ ಅಲಿ ರಸ್ತೆಯಲ್ಲಿ ವಿವಿಧ ಬಗೆಯ ಗಿಡಗಳನ್ನು ನೆಟ್ಟು ರಕ್ಷಣೆ ಮಾಡಬೇಕು. ಇಂತಹ ಕೃತ್ಯ ಬೇರೆಡೆ ನಡೆಯದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಮರ ಕಡಿದ ಸೂಚಕವಾಗಿ ನಾಮಫಲಕ ಅಳವಡಿಸಬೇಕು ಎಂದು ಒತ್ತಾಯಿಸಿದೆ.

ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಮರ ಪ್ರಾಧಿಕಾರ ರಚನೆಯಾಗಬೇಕು. ಮರಗಳಿಗೆ ಸಂಬಂಧಿಸಿದಂತೆ ಏನೇ ತೀರ್ಮಾನ ಕೈಗೊಳ್ಳಬೇಕಾದರೂ ಮರ ಪ್ರಾಧಿಕಾರದಲ್ಲಿ ತೀರ್ಮಾನವಾಗಬೇಕೆಂದು ಸರ್ಕಾರ ಆದೇಶ ಹೊರಡಿಸಬೇಕು. ಪ್ರಾಧಿಕಾರದ ಅನುಮತಿ ಇಲ್ಲದೆ ಯಾವ ಪ್ರದೇಶದಲ್ಲೂ 5.5 ಸೆಂಟಿಮೀಟರ್ ಮತ್ತು ಅದಕ್ಕೂ ದಪ್ಪದ ಗಿಡ ಮರಗಳನ್ನು ಕಡಿಯುವಂತಿಲ್ಲ. ಅನಿವಾರ್ಯವಾಗಿ ಕಡಿಯಬೇಕಾದರೆ ಸಮಿತಿ ಅನುಮತಿ ಪಡೆಯಬೇಕೆಂದು ಸರ್ಕಾರ ಆದೇಶದಲ್ಲಿ ಉಲ್ಲೇಖಿಸಬೇಕೆಂದು ಆಗ್ರಹಿಸಿದೆ

ಈಗ ಅಸ್ತಿತ್ವದಲ್ಲಿರುವ ನಿಷ್ಕ್ರಿಯಗೊಂಡಿರುವ ಸಮಿತಿ ಹಾಗೂ ಉಪ ಸಮಿತಿಗಳನ್ನು ರದ್ದು ಮಾಡಿ ನಾಗರಿಕರನ್ನು ಒಳಗೊಂಡಂತೆ ವಾರ್ಡ್‌ವಾರು ಸಮುದಾಯ ವೃಕ್ಷ ಸಮಿತಿ ರಚನೆ ಮಾಡಬೇಕು ಎಂದು ಹೇಳಿದೆ.

ಚಾಮುಂಡಿಬೆಟ್ಟದ 10ರಿಂದ 15 ಕಿಲೋಮೀಟರ್ ವ್ಯಾಪ್ತಿ ಹಾಗೂ ಕುಕ್ಕರಹಳ್ಳಿ ಕೆರೆ, ಕಾರಂಜಿ ಕೆರೆ, ಲಿಂಗಾಂಬುದಿ ಕೆರೆಯ 2.5 ಕಿಲೋ ಮೀಟರ್ ವ್ಯಾಪ್ತಿಯೊಳಗೆ ಮರ ಕಡಿಯುವುದನ್ನು ನಿಷೇಧಿಸಬೇಕು. ಈ ರಸ್ತೆಗಳ ಅಕ್ಕಪಕ್ಕ ಯಾವುದೇ ರೀತಿಯ ಕಾಮಗಾರಿ ನಡೆಯದಂತೆ ನೋಡಿಕೊಳ್ಳಬೇಕು. ಮರಗಳ ಬೇರುಗಳು ಉಸಿರಾಡಲು, ತೇವಾಂಶ ಹೀರಿಕೊಳ್ಳಲು ಅವಕಾಶ ನೀಡಬೇಕು ಎಂದು ಮನವಿ ಮಾಡಿದೆ.

ಮರಗಳು ಮನುಷ್ಯನ ಪ್ರಾಣವಾಯುವಾದ ಆಮ್ಲಜನಕವನ್ನು ನೀಡುತ್ತದೆ. ಮರಗಳು ಗಣ್ಯ, ಉಳಿದೆಲ್ಲವೂ ನಗಣ್ಯ ಎಂದು ಅರಿತು ಹಸಿರನ್ನು ಉಳಿಸಿ, ಬೆಳೆಸಿ ಎಂದು ಸಮಿತಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದೆ.



> “ಅರಣ್ಯ ಇಲಾಖೆ ಸೇರಿದಂತೆ ಬೇರೆ ಇಲಾಖೆಯವರು ಈ ತನಕ ನೆಟ್ಟಿರುವ ಗಿಡಗಳ ಲೆಕ್ಕ, ಹಿಂದಿನ ಎರಡು ವರ್ಷಗಳಲ್ಲಿ ನೆಟ್ಟ ಗಿಡಗಳೆಷ್ಟು, ಇದರಲ್ಲಿ ಬದುಕುಳಿದವು ಎಷ್ಟು ಎಂಬ ವಿವರ ನೀಡಬೇಕು. ನಗರದ ಹೃದಯ ಭಾಗದಲ್ಲಿ ಮಾಲ್ ನಿರ್ಮಾಣಕ್ಕೆ ಅನುಮತಿ ನೀಡದೆ ಮೈಸೂರಿನ ಪಾರಂಪರಿಕತೆ ಕಾಪಾಡಬೇಕೆಂದು ಸಮಿತಿ ಮನವಿ ಮಾಡಿದೆ.

# ಅಂಬೇಡ್ಕರ್ ಅವರ ಸಂವಿಧಾನವನ್ನು ವಿದ್ಯಾರ್ಥಿಗಳು ಅರ್ಥ ಮಾಡಿಕೊಂಡಿಲ್ಲ

## ಸಹ ಪ್ರಾಧ್ಯಾಪಕ ಡಾ.ವಿ.ಆರ್.ರಮೇಶ್‌ಬಾಬು ವಿಷಾದ



ಮೈಸೂರಿನ ಬೋಗಾದಿ 2ನೇ ಹಂತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜು ಬಾಲಕರ ವಿದ್ಯಾರ್ಥಿನಿಲಯದಲ್ಲಿ ನಡೆದ 'ಜ್ಞಾನಾವರಣ–2025' ಕಾರ್ಯಕ್ರಮವನ್ನು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಸಹಪ್ರಾಧ್ಯಾಪಕ ಡಾ.ವಿ.ಆರ್.ರಮೇಶ್‌ಬಾಬು ಉದ್ಘಾಟಿಸಿದರು.

ಮೈಸೂರು,ಮೇ 28(ಎಂಟಿವೈ)– ದೇಶಕ್ಕೆ ಸ್ವಾತಂತ್ರ್ಯ ಬಂದು 78 ವರ್ಷ ಕಳೆದಿದ್ದರೂ ಶೇ.50ರಷ್ಟು ದಲಿತರು ಇಂದಿಗೂ ತಳವರ್ಗದಲ್ಲಿಯೇ ಇದ್ದಾರೆ ಎಂದು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಸಹಪ್ರಾಧ್ಯಾಪಕ ಡಾ.ವಿ.ಆರ್.ರಮೇಶ್‌ಬಾಬು ವಿಷಾದಿಸಿದ್ದಾರೆ.

ಮೈಸೂರಿನ ಬೋಗಾದಿ ಎರಡನೇ ಹಂತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜು ಬಾಲಕರ ವಿದ್ಯಾರ್ಥಿನಿಲಯದಲ್ಲಿ ನಡೆದ 'ಜ್ಞಾನಾವರಣ–2025' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡಾ.ಅಂಬೇಡ್ಕರ್ ಹಾಕಿಕೊಟ್ಟಿರುವ ಸಂವಿಧಾನದ ಭದ್ರ ಬುನಾದಿಯನ್ನು ನಮ್ಮ ವಿದ್ಯಾರ್ಥಿಗಳು ಇನ್ನೂ ಅರ್ಥ ಮಾಡಿಕೊಂಡಿಲ್ಲ. ಅಂಬೇಡ್ಕರ್ ಒಬ್ಬ ಅಪ್ಪಟ ದೇಶಪ್ರೇಮಿಯಾಗಿದ್ದರು. ಶತಶತಮಾನಗಳಿಂದ ತುಳಿತಕ್ಕೆ ಒಳಗಾದ ಜನರ ಧ್ವನಿಯಾದವರು. ಹೆಣ್ಣಿಗೆ ಹೆಚ್ಚಿನ ಸ್ಥಾನಮಾನ ನೀಡಲು ಹಿಂದೂ ಕೋಡ್ ಬಿಲ್ ಜಾರಿಗೆ ತಂದರು. ಹೆಣ್ಣು ಮಕ್ಕಳು ಅಂಬೇಡ್ಕರ್ ಅವರನ್ನು ಅರ್ಥ ಮಾಡಿಕೊಳ್ಳಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯು ಅಂಬೇಡ್ಕರ್, ಕುವೆಂಪು, ಲಂಕೇಶ್‌ರವರ ಪುಸ್ತಕಗಳನ್ನು ಓದಿ, ಗುರಿ ಇಟ್ಟುಕೊಂಡು ಸಾಧನೆ ಮಾಡಬೇಕು ಎಂದು ಸಲಹೆ ನೀಡಿದರು.

ಮಂಡ್ಯದ ಮಹಿಳಾ ಸರ್ಕಾರಿ ಕಾಲೇಜಿನ ಇಂಗ್ಲೀಷ್ ಅಧ್ಯಾಪಕರಾದ ಪ್ರಸನ್ನಕುಮಾರ್ ಕೆರಗೋಡು ಮಾತನಾಡಿ, ಅಂಬೇಡ್ಕರ್ ಒಬ್ಬ ದಾರ್ಶನಿಕ ಹಾಗೂ ಸಮಾಜದ ಚಿಕಿತ್ಸಕರಾಗಿದ್ದರು. ಅಂಬೇಡ್ಕರ್‌ರವರ ಪ್ರೇರಣೆಯಿಂದ ನಾವೆಲ್ಲರೂ ಸದೃಢರಾಗಿದ್ದೇವೆ. ನಮ್ಮ ಮನೆಯಲ್ಲಿ 12 ಜನ ಸರ್ಕಾರಿ ಕೆಲಸದಲ್ಲಿದ್ದೇವೆ. ವಿದ್ಯಾರ್ಥಿಗಳಾದ ನೀವು ಸದೃಢರಾಗಬೇಕಾದರೆ ಶ್ರಮಪಟ್ಟು ಶಿಕ್ಷಣದಲ್ಲಿ ಉನ್ನತ ಸ್ಥಾನಕ್ಕೆ ಹೋಗಬೇಕು. ನಿಮಗೆ ಸರ್ಕಾರ ಎಲ್ಲಾ ಸೌಲಭ್ಯಗಳನ್ನು ನೀಡಿದೆ. ಅಂಬೇಡ್ಕರ್‌ರವರ ಚಿಂತನೆ ಅರ್ಥಮಾಡಿಕೊಳ್ಳಲು ಪ್ರತಿದಿನ ಅವರ ಪುಸ್ತಕಗಳನ್ನು ಓದಿ, ನಿಮ್ಮ ಉದ್ದೇಶ ಈಡೇರಿಸಿಕೊಳ್ಳಿರಿ. ಹಾಸ್ಟೆಲ್‌ಗಳಲ್ಲಿ ಅಂಬೇಡ್ಕರ್, ಬುದ್ಧರವರ ಹಾಡುಗಳನ್ನು ಮೆಲು ಧ್ವನಿಯಲ್ಲಿ ಹಾಕಿದರೆ ಒಳ್ಳೆಯದು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಸಮಾರಂಭದಲ್ಲಿ ಸಹಾಯಕ ನಿರ್ದೇಶಕ ಜನಾರ್ಧನ್, ನಿಲಯಪಾಲಕರಾದ ಮಹೇಶ್ ಎಸ್., ಪ್ರದೀಪ್‌ಕುಮಾರ್, ಚಿಕ್ಕೀರಮ್ಮ, ರಾಮಚಂದ್ರ, ಮಹೇಶ್, ಶಿವಮಲ್ಲಯ್ಯ, ಕಾರ್ತಿಕ್, ಮೋಹನಕುಮಾರಿ, ಗಾಯಕ ಅಮ್ಮ ರಾಮಚಂದ್ರ, ಭುವನ್, ಚಿನ್ಮಯ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

### ಟಿಎನ್‌ಎನ್ ಆದರ್ಶ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

**ಮೈಸೂರು:** ನಗರದ ನರಸಿಂಹರಾಜ ಮೊಹಲ್ಲಾದಲ್ಲಿರುವ ಟಿಎನ್‌ಎನ್ ಆದರ್ಶ ವಿದ್ಯಾರ್ಥಿನಿಲಯದಲ್ಲಿ 5ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಎಲ್ಲಾ ಜಾತಿ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ. ಈ ವಿದ್ಯಾರ್ಥಿನಿಲಯಕ್ಕೆ ಸೇರುವ ವಿದ್ಯಾರ್ಥಿಗಳಿಗೆ ಉಚಿತ ಮೂಲಸೌಕರ್ಯ ಒಳಗೊಂಡಂತೆ ಊಟ, ವಸತಿ, ಸೌಲಭ್ಯಗಳು ಒದಗಿಸಲಾಗುತ್ತದೆ. ಆಸಕ್ತಿಯುಳ್ಳ ವಿದ್ಯಾರ್ಥಿಗಳು ಸೂಕ್ತ ದಾಖಲೆಗಳೊಂದಿಗೆ ಪ್ರವೇಶ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ 9739385079, 9686768828, 9035414199.

### ಸುದರ್ಶನ ಕ್ರಿಯೆ ಶಿಬಿರ

ಮೈಸೂರು, ಮೇ 28–ಶ್ರೀ ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಆರ್ಟ್ ಆಫ್ ಲಿವಿಂಗ್ ಆಶ್ರಯದಲ್ಲಿ ಜೂ.3ರಿಂದ 7ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 8.30 ಹಾಗೂ ಸಂಜೆ 6ರಿಂದ 8.30 ರವರೆಗೆ ನಡೆಯಲಿದೆ. ಮಾಹಿತಿಗೆ 9480476825, 9483589825.

# ನಾಚನಹಳ್ಳಿಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯಕೀಯ ಪರಿಕರ ಕೊಡುಗೆ



ಮೈಸೂರಿನ ಜೆ.ಪಿ.ನಗರದಲ್ಲಿರುವ ನಾಚನಹಳ್ಳಿಪಾಳ್ಯ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಪೇಜ್ ಇಂಡಸ್ಟ್ರೀಸ್ ಲಿಮಿಟೆಡ್ ಸಂಸ್ಥೆಯು ಸಿಎಸ್‌ಆರ್ ಅನುದಾನದಲ್ಲಿ 7 ಲಕ್ಷ ರೂ. ಮೌಲ್ಯದ ವಿವಿಧ ಚಿಕಿತ್ಸಾ ಉಪಕರಣಗಳನ್ನು ಕೊಡುಗೆ ನೀಡಿತು.

ಮೈಸೂರು, ಮೇ 28(ಎಂಟಿವೈ)– ಮೈಸೂರಿನ ಜೆ.ಪಿ.ನಗರದಲ್ಲಿರುವ ನಾಚನಹಳ್ಳಿಪಾಳ್ಯ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವಿಶ್ವೇಶ್ವರನಗರದ ಪೇಜ್ ಇಂಡಸ್ಟ್ರೀಸ್ ಲಿಮಿಟೆಡ್ ಸಂಸ್ಥೆಯ ಸಿಎಸ್‌ಆರ್ ಅನುದಾನದಲ್ಲಿ ಏಳು ಲಕ್ಷ ರೂ. ಮೌಲ್ಯದ ವಿವಿಧ ವೈದ್ಯಕೀಯ ಪರಿಕರಗಳನ್ನು ಕೊಡುಗೆಯಾಗಿ ನೀಡಿದೆ.

ಜೆ.ಪಿ.ನಗರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಬುಧವಾರ ನಡೆದ ಸರಳ ಕಾರ್ಯಕ್ರಮದಲ್ಲಿ ಆಟೋಕ್ಲೇವ್ (80 ಎಲ್‌ಎಸ್‌ಎಸ್), ರಕ್ತದೊತ್ತಡ ಮಾನಿಟರ್, ಹೆಮಟಾಲಜಿ ಅನಾಲೈಜರ್, ವೆಲ್ಚ್‌ಅಲಿನ್ 3.5 ವಿಎಲ್‌ಇಎಫ್ ಆಟೋ ಸ್ಕೋಪ್, ಝೀರೋ ಡಿಗ್ರಿ ಮತ್ತು 70 ಡಿಗ್ರಿ ನಾಸಲ್ ಎಂಡೋಸ್ಕೋಪ್‌ಗಳಂತಹ ಸುಧಾರಿತ ಮತ್ತು ಅಗತ್ಯ ವೈದ್ಯಕೀಯ ಪರಿಕರಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಗೆ ಹಸ್ತಾಂತರಿಸಲಾಯಿತು.

ಜೆ.ಪಿ.ನಗರದಲ್ಲಿರುವ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬರುವ ರೋಗಿಗಳ ಸಂಖ್ಯೆ ಹೆಚ್ಚಾಗಿದ್ದು, ಸುತ್ತಮುತ್ತಲಿನ ಗ್ರಾಮಗಳ ಜನರೂ ಆರೋಗ್ಯ ಸೇವೆಗಾಗಿ ಈ ಆರೋಗ್ಯ ಕೇಂದ್ರವನ್ನೇ ಅವಲಂಬಿಸಿದ್ದು, ಆ ಕೇಂದ್ರದಲ್ಲಿ ಆರೋಗ್ಯ ಸೇವೆ ಮತ್ತಷ್ಟು ಉತ್ತಮಪಡಿಸಲು ಸಿಎಸ್‌ಆರ್ ಅನುದಾನದಲ್ಲಿ ವಿಶ್ವೇಶ್ವರನಗರದ ಪೇಜ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿ ಚಿಕಿತ್ಸಾ ಪರಿಕರಗಳನ್ನು ಕೊಡುಗೆ ನೀಡಿದೆ.

ಈ ಸಂದರ್ಭದಲ್ಲಿ ಪೇಜ್ ಇಂಡಸ್ಟ್ರೀಸ್ ಪ್ರತಿನಿಧಿಗಳಾದ ಕೆ.ಬಾಬುರಾಜ್, ರಾಜಶೇಖರ್, ಅರವಿಂದ್, ಮಮತಾ ಮಾತನಾಡಿ, ನಮ್ಮ ಕಂಪನಿ ಸಾಮಾಜಿಕ ಜವಾಬ್ದಾರಿ ಹಾಗೂ ಸಮುದಾಯ ಕಲ್ಯಾಣದ ಉದ್ದೇಶದಿಂದ ಸಿಎಸ್‌ಆರ್ ಫಂಡ್‌ನಲ್ಲಿ ನಾಚನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 7 ಲಕ್ಷ ರೂ. ಮೌಲ್ಯದ ವೈದ್ಯಕೀಯ ಪರಿಕರ ನೀಡಲಾಗಿದೆ. ಈ ಪರಿಕರಗಳಿಂದ ರೋಗಿಗಳಿಗೆ ಇನ್ನಷ್ಟು ಉತ್ತಮ ಆರೋಗ್ಯ ಸೇವೆಯೊಂದಿಗೆ ವಿವಿಧ ಪರೀಕ್ಷೆ ನಡೆಸಲು ಸಹಕಾರಿಯಾಗಲಿದೆ ಎಂದರು. ಈ ಸಂದರ್ಭದಲ್ಲಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಸಿ.ಎಸ್.ಸೌಮ್ಯ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

### ಚೆಕ್ ವಿತರಣೆ...



ಮೈಸೂರು ತಾಲೂಕು ಶ್ರೀರಾಂಪುರದ ಶ್ರೀ ನವಚೇತನ ಬಸವೇಶ್ವರ ಟ್ರಸ್ಟ್‌ನ ವಿಶೇಷಚೇತನರ ಶಾಲೆಗೆ ಕಂಪ್ಯೂಟರ್, ಟಿ.ವಿ, ಯುಪಿಎಸ್ ಮತ್ತು ಪ್ರಿಂಟಿಂಗ್ ಮಿಷನ್ ಖರೀದಿಸಲು ಮುಡಾ ಮಾಜಿ ಅಧ್ಯಕ್ಷರೂ ಆದ ಜ್ಞಾನಗಂಗಾ ಗೃಹ ನಿರ್ಮಾಣ ಸಂಘದ ಅಧ್ಯಕ್ಷ ಹೆಚ್.ವಿ.ರಾಜೀವ್ 1 ಲಕ್ಷ ರೂ. ಚೆಕ್ ಅನ್ನು ಶಾಲಾ ಸಂಸ್ಥಾಪಕ ಅಧ್ಯಕ್ಷ ಮರೀಗೌಡರಿಗೆ ನೀಡಿದರು. ಈ ಸಂದರ್ಭದಲ್ಲಿ ಹೊಯ್ಸಳ ಸಂಘದ ನಿರ್ದೇಶಕ ರಂಗನಾಥ, ಮುಖಂಡರಾದ ಸಿ.ಎಂ.ಸಿದ್ದರಾಮೇಗೌಡ, ಡಿ.ಸಾಲುಂಡಿ ಚಿಕ್ಕಣ್ಣ ಹಾಗೂ ಕೆ.ರಶ್ಮಿ ಉಪಸ್ಥಿತರಿದ್ದರು.

## ನಿಧನ

### ಮಹದೇವಪುರದ ಯಜಮಾನ್ ಗುರುಲಿಂಗೇಗೌಡರು



ಮೈಸೂರು, ಮೇ 28– ಶ್ರೀರಂಗಪಟ್ಟಣ ತಾಲೂಕು ಮಹದೇವಪುರದ ಯಜಮಾನರು ಹಾಗೂ ಅನ್ನಪೂರ್ಣೇಶ್ವರಿ ಎಜುಕೇಷನಲ್ ಟ್ರಸ್ಟ್ ಅಧ್ಯಕ್ಷರಾದ ಗುರುಲಿಂಗೇಗೌಡ (89)ರು ಇಂದು ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಗುರುವಾರ) ಬೆಳಗ್ಗೆ 10.30ಕ್ಕೆ ಗ್ರಾಮದ ಅವರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಹೆಚ್.ಎಂ.ಶಿವೇಗೌಡ



ನಿವೃತ್ತ ಪ್ರೌಢಶಾಲಾ ಶಿಕ್ಷಕರಾದ ಕೆ.ಆರ್.ಪೇಟೆ ನಿವಾಸಿ ಹೆಚ್.ಎಂ.ಶಿವೇಗೌಡ (76) ಅವರು ಮಂಗಳವಾರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಅವರು ಪತ್ನಿ ರೇಣುಕಾ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಅಪಾರ ಶಿಷ್ಯವೃಂದ ಹಾಗೂ ಬಂಧು–ಬಳಗದವರನ್ನು ಅಗಲಿದ್ದಾರೆ. ಮಧ್ಯಾಹ್ನ ಸ್ವಗ್ರಾಮ ಕೆ.ಆರ್.ಪೇಟೆ ತಾಲೂಕು ಹೆಗಡಹಳ್ಳಿಯಲ್ಲಿ ಶಿವೇಗೌಡರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

29.05.2025 ಗುರುವಾರ, ಮಳೆ ನಕ್ಷತ್ರ: ರೋಹಿಣಿ 25.05.2025 ರಿಂದ 07.06.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಆರ್ದ್ರಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಶಾಲಾಕ್ಯ ತಂತ್ರ ಸ್ನಾತಕೋತ್ತರ ವಿಭಾಗದಿಂದ ಕಣ್ಣಿನ ದೃಷ್ಟಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಬೊಜ್ಜು ನಿವಾರಣೆ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಭುಜ ನೋವು, ದುಷ್ಟವ್ರಣ/ಮಾಯದ ಗಾಯ, ಮಾನಸಿಕ ಒತ್ತಡ ನಿವಾರಣೆ ಕುರಿತು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಬಳಿ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

■ **ಸುಯೋಗ್ ಆಸ್ಪತ್ರೆ :** ಉಚಿತ ಕೀಲು, ಮೂಳೆ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ ಆವರಣ, ಬೆಳಗ್ಗೆ 10 ರಿಂದ.

■ **ಶ್ರೀ ಸಪ್ತರ್ಷಿ ಗುರುಕುಲ ಸೇವಾಶ್ರಮ :** ಸಾಮೂಹಿಕ ಉಪನಯನ ಕಾರ್ಯಕ್ರಮ, ಬೆಳಿಗ್ಗೆ ಗೋಪೂಜೆ, ಗಣ ಹೋಮ, ನವಗ್ರಹ, ಗಾಯಿತ್ರಿ ಹೋಮ, ಬ್ರಹ್ಮೋಪದೇಶ, ಮಹಾಸುದರ್ಶನ ಹೋಮ ಹಾಗೂ ಗೃಹದೇವತಾ ಆರಾಧನೆ, ಮಹಾಮಂಗಳಾರತಿ, ಶಾತುಮೊರೆ, ತೀರ್ಥಪ್ರಸಾದ, ಸ್ಥಳ: ಶ್ರೀ ಸಪ್ತರ್ಷಿ ಗುರುಕುಲ ಸೇವಾಶ್ರಮ, ಕೆ.ಆರ್. ರಸ್ತೆ, ಮಂಟಿ ಸಮೀಪವಿರುವ ಸಾಧನಹಳ್ಳಿ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಲೈಫ್ ಸ್ಕಿಲ್ಸ್ ಅಂಡ್ ವೆಲ್ ಬೀಯಿಂಗ್ ಆಫ್ ಚಿಲ್ಡ್ರನ್ ಕುರಿತು ಅಂತರರಾಷ್ಟ್ರೀಯ ಸಮ್ಮೇಳನ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಮುಖ್ಯ ಅತಿಥಿಗಳು : ಶಾಸಕರಾದ ಹರೀಶ್‌ಗೌಡ, ರವಿಶಂಕರ್, ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತರೆಡ್ಡಿ, ಉದ್ಘಾಟನಾ ಭಾಷಣ : ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯ, ಕಲಬುರ್ಗಿ ಡೀನ್ ಮತ್ತು ಮುಖ್ಯಸ್ಥ ಪ್ರೊ. ಜಿ.ಆರ್.ಅಂಗಡಿ, ಉಪಸ್ಥಿತರು : ಕರಾಮುವಿವಿ ಕುಲಸಚಿವ ಪ್ರೊ. ಎಸ್.ಕೆ. ನವೀನ್‌ಕುಮಾರ್, ಕರಾಮುವಿವಿ ಡೀನ್ (ಶೈಕ್ಷಣಿಕ) ಪ್ರೊ. ಎನ್. ಲಕ್ಷ್ಮಿ, ಸ್ಥಳ: ಕಾವೇರಿ ಸಭಾಂಗಣ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ :** ಡಾ. ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತ್ಯುತ್ಸವದ ಅಂಗವಾಗಿ ವಿಚಾರ ಸಂಕಿರಣ : ಅಂಬೇಡ್ಕರ್ ಮತ್ತು ಪತ್ರಿಕೋದ್ಯಮ, ಉದ್ಘಾಟನೆ : ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ಅಧ್ಯಕ್ಷತೆ: ಪ್ರಾಧ್ಯಾಪಕರಾದ ಪ್ರೊ. ಎನ್. ಮಮತ, ಮುಖ್ಯ ಅತಿಥಿಗಳು : ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಸಿಂಡಿಕೇಟ್ ಸದಸ್ಯ ಡಾ. ನಟರಾಜ್ ಶಿವಣ್ಣ, ಪ್ರಾಧ್ಯಾಪಕರಾದ ಪ್ರೊ. ಸಿ.ಕೆ. ಪುಟ್ಟಸ್ವಾಮಿ, ಪ್ರೊ. ಎಂ.ಎಸ್. ಸಪ್ನಾ, ಸ್ಥಳ: ಜನೋರ್ತ್ರಿ ಸಭಾಂಗಣ, ಪತ್ರಿಕೋದ್ಯಮ ವಿಭಾಗ, ಬೆಳಗ್ಗೆ 10.30ಕ್ಕೆ.

■ **ಪ್ರಜ್ಞಾವಂತ ನಾಗರಿಕ ವೇದಿಕೆ, ಜೀವಧಾರ ರಕ್ತನಿಧಿ ಕೇಂದ್ರ :** ಸ್ವಾತಂತ್ರ್ಯ ವೀರ ಸಾವರ್ಕರ್ ಜಯಂತಿ ಅಂಗವಾಗಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ, ಮುಖ್ಯ ಅತಿಥಿಗಳು: ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಬಿಜೆಪಿ ಮುಖಂಡರಾದ ಆರ್.ರಘು ಕೌಟಿಲ್ಯ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಬಿಜೆಪಿ ನಗರ ಉಪಾಧ್ಯಕ್ಷ ಹೇಮಾ ನಂದೀಶ್, ಚಾಮುಂಡೇಶ್ವರಿ ನಗರ ಮಂಡಲ ಅಧ್ಯಕ್ಷ ರಾಕೇಶ್ ಭಟ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳ: ಜೀವಧಾರ ರಕ್ತನಿಧಿ ಕೇಂದ್ರದ ಆವರಣ, ಬೆಳಗ್ಗೆ 11ಕ್ಕೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ : ಪ್ರೊಫೆಸರ್. ಸಿ. ನಾಗಣ್ಣ, ನಿರ್ಮಾಣ–ಜಾಂಪಣ್ಣ ಆಶೀಹಾಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಮತ್ತೂರು ಕೆ. ಸ್ವಾಮಿ, ಸಿ.ವಿಶ್ವನಾಥ್, ವ್ಯಾಖ್ಯಾನ : ಡಾ.ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಒ.ಎಸ್. ಅರುಣ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಜಿ. ಶಾಂತಕುಮಾರ್

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ– ಆರ್. ಗಿರೀಶ್, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು –ಎ.ಎನ್. ಶೀಲಾ, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಚರ್ಚೆ, 6.50 ಕೃಷಿರಂಗ–ಕಿಸಾನ್‌ವಾಣಿ – ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಫ್ಲೋರ್ ಮಿಲ್ಲಿಂಗ್ ಮತ್ತು ಬೇಕಿಂಗ್ ತಾಂತ್ರಿಕತೆಗಳು ಮೈಸೂರಿನ ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆಯ ಹಿರಿಯ ತಾಂತ್ರಿಕ ಅಧಿಕಾರಿ ಡಾ. ಕೆ.ಅಶ್ವಥ್ ಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ–ಮೈಸೂರಿನ ಎಂ.ಎಂ.ಕೆ. ಮತ್ತು ಎಸ್.ಡಿ.ಎಂ. ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರಿಂದ ಕಾರ್ಯಕ್ರಮ ವೈವಿಧ್ಯ, 8.30 ಹಿಂದಿ ಚಿತ್ರಗೀತೆಗಳು, 9.30 ಕನ್ನಡ ಭಾರತಿ, 10.00 ನಾಟಕ ನೇಣುಗಂಬ, ನಿರ್ದೇಶನ ಹಾಗೂ ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 10.30 ಸವಿನೆನಪು

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಅವಧೂತ ದತ್ತ ಪೀಠ :** ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 26ನೇ ಬ್ರಹ್ಮೋತ್ಸವ, ನಾದಮಂಟಪದ 27ನೇ ವಾರ್ಷಿಕೋತ್ಸವ ಹಾಗೂ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 83ನೇ ಜನ್ಮದಿನಾಚರಣೆ, ಬೆಳಿಗ್ಗೆ 8ಕ್ಕೆ ಶ್ರೀ ಚಕ್ರ ಪೂಜೆ, 9 ಗಂಟೆಗೆ ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನದಲ್ಲಿ ಧನ್ವಂತರಿ ಪೂಜೆ, ಧನ್ವಂತರಿ ಹೋಮ, ಮಧ್ಯಾಹ್ನ 3ಕ್ಕೆ ವಿದ್ವಾನ್ ವಿಕಾಸ್ ಮೈತ್ರೇಯ ಅವರಿಂದ ಕರ್ನಾಟಕ ಸಂಗೀತ, ಸಂಜೆ 5ಕ್ಕೆ ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನದಲ್ಲಿ ಡೋಲೋತ್ಸವ, ಸಂಜೆ 7ಕ್ಕೆ ಸತ್ಯನಾರಾಯಣ ರಾಜು ಅವರಿಂದ ರಾಮ ಕಥಾ ವಿಷಯಾಧಾರಿತ ಭರತನಾಟ್ಯ ಕಾರ್ಯಕ್ರಮ. ಸ್ಥಳ: ಅವಧೂತ ದತ್ತಪೀಠ, ನಂಜನಗೂಡು ರಸ್ತೆ.

■ **ಶಿವಶಂಕರಿ ಮಹಿಳಾ ಬಳಗ :** ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ: ಶ್ರೀ ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ, ಉದ್ಘಾಟನೆ : ಸಾಹಿತಿ ಶ್ರೀಮತಿ ಡಾ.ಎಸ್.ಪಿ.ಉಮಾದೇವಿ, ಅಧ್ಯಕ್ಷತೆ: ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಉಪಸ್ಥಿತರು: ಗೌರವ ಅಧ್ಯಕ್ಷೆ ಶ್ರೀಮತಿ ಜಯಗೌಡ, ಅಧ್ಯಕ್ಷೆ ಶ್ರೀಮತಿ ರಾಜೇಶ್ವರಿ ಮಹೇಶ್, ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು ಆವರಣ, ಸರಸ್ವತಿಪುರಂ, ಸಂಜೆ 4ಕ್ಕೆ.

■ **ಸಾವರ್ಕರ್ ಪ್ರತಿಷ್ಠಾನ:** 142ನೇ ಸಾವರ್ಕರ್ ಜಯಂತಿ ಪ್ರಯುಕ್ತ ವೀರ ಸಾವರ್ಕರ್ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪುರಸ್ಕೃತರು : ಬೆಂಗಳೂರಿನ ವಂದೇಮಾತರಂ ಪಾಠಶಾಲೆ ಸಂಸ್ಥಾಪಕ ಡಾ.ಜಿ.ಬಿ.ಹರೀಶ, ಪ್ರಶಸ್ತಿ ಪ್ರದಾನ: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಉಪಸ್ಥಿತರು: ಆದಿತ್ಯ ಅಧಿಕಾರಿ ಅಸ್ಪತ್ರೆಯ ಡಾ.ಚಂದ್ರಶೇಖರ್, ಅಧ್ಯಕ್ಷತೆ: ಪ್ರತಿಷ್ಠಾನ ಅಧ್ಯಕ್ಷೆ ಡಾ.ಎಸ್. ಯಶಸ್ವಿನಿ, ಸ್ಥಳ: ಕಲಾಮಂದಿರ, ಸಂಜೆ 5.30ಕ್ಕೆ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಟಿ.ಆರ್. ಮಹಾಲಿಂಗಂ ಸಂಸ್ಮರಣಾ ಕಾರ್ಯಕ್ರಮ, ವಿದ್ವಾನ್ ಎ.ಪಿ. ಕೃಷ್ಣಪ್ರಸಾದ್ ಅವರಿಂದ ಕರ್ನಾಟಕ ಶಾಸ್ತ್ರೀಯ ಕೊಳಲು ವಾದನ, ವಿದುಷಿ ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಸಪ್ತಮಾತೃಕಾ ಚೌಡೇಶ್ವರಿ ದೇವಸ್ಥಾನ – ಶ್ರೀ ಕ್ಷೇತ್ರ, ಮೈಸೂರು :** 20ನೇ ವಾರ್ಷಿಕ ಪ್ರತಿಷ್ಠಾವರ್ಧಂತ್ಯುತ್ಸವ–2025, ವಿಶೇಷ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸೇವಾ ಕಾರ್ಯಕ್ರಮ, ರುದ್ರೈಕಾಶಿನಿ ಹೋಮ, ಸ್ಥಳ: ಶ್ರೀ ಸಪ್ತಮಾತೃಕಾ ಚೌಡೇಶ್ವರಿ ದೇವಸ್ಥಾನ, ವಿಜಯನಗರ 3ನೇ ಹಂತ.

ಖ್ಯಾತ ವಿಜ್ಞಾನಿಗಳೂ ಆದ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ '70'; ಹಿತೈಷಿಗಳಿಂದ ಗೌರವ ಸಲ್ಲಿಕೆ

# ಕುಲಪತಿಗಳಾಗಿ ಮೈಸೂರು ಮಾನಸಗಂಗೋತ್ರಿ, ಮುಕ್ತ ವಿವಿಗಳಿಗೆ ಹೊಸ ರೂಪ ಕೊಟ್ಟವರು ಪ್ರೊ.ರಂಗಪ್ಪ

● ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಐಐಎಸ್ಸಿ ಮಾಜಿ ನಿರ್ದೇಶಕ ಪ್ರೊ.ಗೋವರ್ಧನ್ ಮೇಹ್ತಾ ಗುಣಗಾನ ● ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೆ ಇಂತಹವರ ನಾಯಕತ್ವ, ಸೇವೆ ಅವಶ್ಯ: ಅಭಿಮತ ● ಪ್ರೊ.ರಂಗಪ್ಪ ಶ್ರೇಷ್ಠ ವಿಜ್ಞಾನಿ, ಉತ್ತಮ ಆಡಳಿತಗಾರರು: ಡಾ.ಮಂಜುನಾಥ್ ಪ್ರಶಂಸೆ

ಮೈಸೂರು, ಮೇ 28(ಎಂಕೆ)– ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ನೀಡಿರುವ ಗಣನೀಯ ಕೊಡುಗೆಗಳ ನೆನಪಿಗಾಗಿ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳೂ ಆದ ಖ್ಯಾತ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಅವರಿಗೆ ಗೌರವ ಸಲ್ಲಿಸಲಾಯಿತು.

ಮೈಸೂರು ವಿವಿ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಪ್ರೊ.ಕೆ.ಎಸ್.ರಂಗಪ್ಪ ಅವರ 70ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಸಾವಯುವ ರಸಾಯನಿಕ ಅಧ್ಯಯನ ವಿಭಾಗ, ಪ್ರೊ.ಕೆ.ಎಸ್.ರಂಗಪ್ಪನವರ ಸಂಶೋಧನಾ ವಿದ್ಯಾರ್ಥಿಗಳು ಮತ್ತು ಹಿತೈಷಿಗಳ ಸಂಯುಕ್ತಾಶ್ರಯದಲ್ಲಿ ಬುಧವಾರ ಆಯೋಜಿಸಿದ್ದ ಗೌರವ ಸಮರ್ಪಣೆ ಸಮಾರಂಭದಲ್ಲಿ ಪ್ರೊ.ಕೆ.ಎಸ್.ರಂಗಪ್ಪ ಹಾಗೂ ಶ್ರೀಮತಿ ಪೂರ್ಣಿಮಾದೇವಿ ರಂಗಪ್ಪ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಇದಕ್ಕೂ ಮುನ್ನ ಸಮಾರಂಭದ ಮುಖ್ಯ ಅತಿಥಿಯಾಗಿದ್ದ ಪದ್ಮಶ್ರೀ ಪುರಸ್ಕೃತರೂ ಆದ ಐಐಎಸ್ಸಿ ಮಾಜಿ ನಿರ್ದೇಶಕರಾದ ಪ್ರೊ.ಗೋವರ್ಧನ್ ಮೇಹ್ತಾ ಮಾತನಾಡಿ, ದೇಶದಲ್ಲಿರುವ ಹಳೆಯ ಹಾಗೂ ಶತಮಾನದ ಇತಿಹಾಸ ಹೊಂದಿರುವ ಮೈಸೂರು ವಿವಿ ಮಾನಸಗಂಗೋತ್ರಿ ಕ್ಯಾಂಪಸ್ ಹಾಗೂ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಹೊಸರೂಪ ಕೊಟ್ಟಂತಹ ಶ್ರೇಯಸ್ಸು ಪ್ರೊ.ಕೆ.ಎಸ್.ರಂಗಪ್ಪ ಅವರಿಗೆ ಸಲ್ಲುತ್ತದೆ. ಕ್ಯಾಂಪಸ್‌ನಲ್ಲಿ ಹಸಿರೀಕರಣ, ನೂತನ ಕಟ್ಟಡಗಳ ನಿರ್ಮಾಣದ ಕ್ರೆಡಿಟ್ ಕೂಡ ರಂಗಪ್ಪ ಅವರಿಗೆ ಸಲ್ಲಬೇಕು ಎಂದರು.

ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೆ ಪ್ರೊ.ರಂಗಪ್ಪ ಅವರಂತಹ ನಾಯಕತ್ವವುಳ್ಳವರ ಅಗತ್ಯವಿದೆ. ಅಲ್ಲದೆ ದೇಶದಲ್ಲಿ ಸಾಕಷ್ಟು ವಿದ್ಯಾಸಂಸ್ಥೆಗಳ ಪುನರುತ್ಥಾನ ಆಗಬೇಕಿದೆ. ಪ್ರೊ.ರಂಗಪ್ಪ ಅವರಿಗೆ 70 ವರ್ಷವಾದರೂ ಅವರು ಇಂದಿಗೂ ಹಲವು ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು, ಅವರ ಸೇವೆ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಅವಶ್ಯವಾಗಿದೆ ಎಂದು ತಿಳಿಸಿದರು.

### ಪ್ರೊ.ಕೆ.ಎಸ್.ರಂಗಪ್ಪರ ಕೊಡುಗೆ ಶ್ಲಾಘನೀಯ

ದೇಶದಲ್ಲಿ ಶೇ.60 ರಷ್ಟು ಜನರು ಲೈಫ್ ಸ್ಟೈಲ್‌ನಿಂದ ಬರುವ ಹೃದಯಾಘಾತ, ಕ್ಯಾನ್ಸರ್ ಇನ್ನಿತರೆ ಕಾಯಿಲೆಗಳಿಗೆ ತುತ್ತಾಗಿ ನಿಧನರಾಗುತ್ತಿದ್ದಾರೆ. ಕ್ಯಾನ್ಸರ್ ಚಿಕಿತ್ಸೆಗೆ ಅಗತ್ಯವಾದ ಪ್ರತಿಕಾಯ ಔಷಧಿಗಳ ತಯಾರಿಕೆಗೆ ದೇಶ ಮುಂದಾಗಿದ್ದು, ಕೆಲವು ಕ್ಯಾನ್ಸರ್ ಔಷಧಿಗಳು ಕಸ್ಟಮ್ ಸುಂಕದ ಅಡಿಯಲ್ಲಿ ಬರಲಿದ್ದು, ಕೇಂದ್ರ ಆರೋಗ್ಯ ಸಚಿವರೊಂದಿಗೆ ಚರ್ಚಿಸಿ, ಕಸ್ಟಮ್ ಸುಂಕವನ್ನು ಕಡಿತಗೊಳಿಸಲು ಪ್ರಯತ್ನಿಸಲಾಗುವುದು. ಭಾರತ ಕೂಡ ಔಷಧಿಗಳ ರಫ್ತಿನಲ್ಲಿ ವಿಶ್ವದಲ್ಲೇ ನಾಲ್ಕನೇ ಸ್ಥಾನ ಪಡೆದಿದ್ದು, ಔಷಧಿಗಳ ತಯಾರಿಕೆಗೆ ವಿಜ್ಞಾನಿಗಳ ಕೊಡುಗೆ ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ ಪ್ರೊ.ಕೆ.ಎಸ್.ರಂಗಪ್ಪ ಅವರ ಕೊಡುಗೆ ಶ್ಲಾಘನೀಯ.

– ಡಾ.ಸಿ.ಎನ್.ಮಂಜುನಾಥ್, ಸಂಸದರು

ವಿಶೇಷ ಅತಿಥಿಯಾಗಿ ಭಾಗವಹಿಸಿದ್ದ ಪದ್ಮಶ್ರೀ ಪುರಸ್ಕೃತರೂ ಆದ ಲೋಕಸಭಾ ಸಂಸದರಾದ ಡಾ.ಸಿ.ಎನ್.ಮಂಜುನಾಥ್ ಮಾತನಾಡಿ, ಕೆಲ ಶ್ರೇಷ್ಠ ವಿಜ್ಞಾನಿಗಳು, ಶಿಕ್ಷಣ ತಜ್ಞರು ಉತ್ತಮ ಆಡಳಿತಗಾರರಾಗಿರುವುದಿಲ್ಲ. ಹಾಗೆಯೇ ಉತ್ತಮ ಆಡಳಿತಗಾರರು ಉತ್ತಮ ಶಿಕ್ಷಣ ತಜ್ಞರು, ಸಂಶೋಧಕರು ಆಗಿರಲಾರರು. ಆದರೆ, ಪ್ರೊ.ಕೆ.ಎಸ್.ರಂಗಪ್ಪ, ಶ್ರೇಷ್ಠ ಶಿಕ್ಷಕರು, ಶ್ರೇಷ್ಠ ಶಿಕ್ಷಣ ತಜ್ಞರು, ಶ್ರೇಷ್ಠ ಸಂಶೋಧಕರು ಮಾತ್ರವಲ್ಲದೆ ಅತ್ಯುತ್ತಮ ಆಡಳಿತಗಾರರು ಆಗಿದ್ದಾರೆ. ಅವರೊಬ್ಬ ಪ್ರಭಾವಿ ಆಡಳಿತಗಾರರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

**ಸಾಧನೆ ಮ್ಯಾಜಿಕ್ ಅಲ್ಲ:** ವೈದ್ಯಕೀಯ ಕ್ಷೇತ್ರದಲ್ಲಿ ಗೌಟ್(Gout) ದೇಹದ ಹಲವು ತೊಂದರೆಗಳಿಗೆ ಕಾರಣವಾದರೆ, ಸಮಾಜದ ಸಮಸ್ಯೆಗಳಿಗೆ ಗೌಟ್ (Govt) ನಲ್ಲಿನ ನ್ಯೂನತೆಗಳು ಕಾರಣವಾಗಿವೆ ಎನ್ನುತ್ತಲೇ ಮೊದಲು ನಮ್ಮ ನಮ್ಮ ಕೆಲಸಕ್ಕೆ ಸೆಲ್ಯೂಟ್ ಮಾಡಬೇಕು. ಪ್ರಸಿದ್ಧರೊಬ್ಬರು ಹೇಳುವಂತೆ ಕೆಲಸಕ್ಕೆ ಪ್ರಾಮಾಣಿಕನಾಗಿ ಸೆಲ್ಯೂಟ್ ಮಾಡಿದರೆ, ಇತರೆ ಯಾರಿಗೂ ಸೆಲ್ಯೂಟ್ ಮಾಡುವ ಅಗತ್ಯವಿಲ್ಲ. ಅದೇ ಕೆಲಸಕ್ಕೆ ಅಪ್ರಮಾಣಿಕನಾಗಿ ಸೆಲ್ಯೂಟ್ ಮಾಡಿದರೆ, ಸಾಕಷ್ಟು ಜನರಿಗೆ ಸೆಲ್ಯೂಟ್ ಮಾಡಬೇಕಾಗುತ್ತದೆ. ಹಾಗಾಗಿ ಸಾಧನೆ ಎಂಬುದು ಮ್ಯಾಜಿಕ್ ಅಲ್ಲ. ಬುದ್ಧಿವಂತಿಕೆ, ಪ್ರಾಮಾಣಿಕತೆ, ನಿಖರತೆ ಹಾಗೂ ಕಠಿಣ ಪರಿಶ್ರಮದಿಂದ ಮಾತ್ರವೇ ಸಾಧನೆ ಸಾಧ್ಯ. ಈ ನಿಟ್ಟಿನಲ್ಲಿ ಪ್ರೊ.ರಂಗಪ್ಪ ಅವರು ಮೈಸೂರು ವಿವಿ ಮತ್ತು ಮುಕ್ತ ವಿವಿ ಕುಲಪತಿಗಳಾಗಿ ಎರಡೂ ವಿಶ್ವವಿದ್ಯಾನಿಲಯಗಳಿಗೂ ಹೊಸ ರೂಪ ನೀಡಿದ್ದಾರೆ ಎಂದು ಶ್ಲಾಘಿಸಿದರು.

**ವಿದ್ಯಾರ್ಥಿಗಳೇ ಅಂಬಾಸಡರ್ಸ್:** ಶಿಕ್ಷಣ ಸಂಸ್ಥೆಗೆ ವಿಜ್ಞಾನಿಗಳು, ಶಿಕ್ಷಣ ತಜ್ಞರು ಉತ್ತಮ ಅಂಬಾಸಡರ್ಸ್(ರಾಯಭಾರಿ)ಗಳಲ್ಲ. ಶಿಕ್ಷಣ ಸಂಸ್ಥೆಗೆ ವಿದ್ಯಾರ್ಥಿಗಳೇ ಅತ್ಯುತ್ತಮ ಅಂಬಾಸಡರ್‌ಗಳಾಗಿದ್ದಾರೆ. ಪ್ರೊ.ರಂಗಪ್ಪ ನೂರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ತರಬೇತಿ ನೀಡಿದ್ದು, ಅವರೆಲ್ಲಾ ವಿಶ್ವಾದ್ಯಂತ ತಮ್ಮದೇ ಕೊಡುಗೆ ನೀಡುತ್ತಿದ್ದಾರೆ. ಹಾಗೆಯೇ ಬುದ್ಧಿವಂತಿಕೆ, ಕಾರ್ಯಕ್ಷಮತೆಯಿಂದ ಉನ್ನತ ಸ್ಥಾನ ತಲುಪಬಹುದು. ಆದರೆ ಉನ್ನತ ಸ್ಥಾನದಲ್ಲಿ ದೀರ್ಘಕಾಲ ನಿಲ್ಲಲು ಸಹಾಯ ಮಾಡುವುದು ನಿಮ್ಮ ವೈಯಕ್ತಿಕ ನಡೆ–ನುಡಿ, ವರ್ತನೆ, ಧೈರ್ಯ, ಬದ್ಧತೆ. ಈ ಎಲ್ಲಾ ಅಂಶಗಳು ರಂಗಪ್ಪ ಅವರಲ್ಲಿ ಇದ್ದಿದ್ದರಿಂದಲೇ ಅವರಿಂದ ಇಷ್ಟೆಲ್ಲಾ ಸಾಧನೆ ಸಾಧ್ಯವಾಯಿತು ಎಂದು ಹೇಳಿದರು.

**ವಿಜ್ಞಾನಿಗಳನ್ನೂ ಸ್ಮರಿಸಬೇಕು:** 'ಆಪರೇಷನ್ ಸಿಂಧೂರ್' ಯಶಸ್ವಿ ವಿಚಾರವಾಗಿ ಸೈನಿಕರ ಸಾಹಸವನ್ನು ಸ್ಮರಿಸುತ್ತಿದ್ದೇವೆ. ಅಟ್ಯಾಕ್ ಮಾಡಿದ್ದರ ಬಗ್ಗೆ ಮಾತನಾಡುತ್ತೇವೆ. ಆದರೆ, ಈ ಎಲ್ಲಾ ಸಾಧನೆಯ ಹಿಂದೆ ಇರುವವರು ವಿಜ್ಞಾನಿಗಳು. ತೆರೆಮರೆಯಲ್ಲಿರುವ ವಿಜ್ಞಾನಿಗಳು ಮಿಸ್ಸೈಲ್ ಸೇರಿದಂತೆ ಎಲ್ಲಾ ಬಗೆಯ ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಾರೆ. ಹಾಗಾಗಿ ಸೈನಿಕರ ಜೊತೆಗೆ ವಿಜ್ಞಾನಿಗಳನ್ನು ಸ್ಮರಿಸಬೇಕು. 2047ಕ್ಕೆ ಭಾರತ ಅಭಿವೃದ್ಧಿ ಹೊಂದಿದ ದೇಶವಾಗಬೇಕಾದರೆ ವಿಜ್ಞಾನಿಗಳ ಕೊಡುಗೆ ಅತ್ಯವಶ್ಯವಾಗಿದೆ. ಸಿನಿಮಾ ತಾರೆಯರು ಮಾತ್ರವೇ ಸೆಲೆಬ್ರಿಟಿಗಳಲ್ಲ, ದೇಶದ ಅಭಿವೃದ್ಧಿಗೆ, ಸಮಾಜದ ಏಳಿಗೆಗೆ ಅಪಾರ ಕೊಡುಗೆ ನೀಡುವ ವಿಜ್ಞಾನಿಗಳು ಕೂಡ ಸೆಲೆಬ್ರಿಟಿಗಳೇ ಎನ್ನುವ ಮೂಲಕ ವಿಜ್ಞಾನಿಗಳ ಕೊಡುಗೆಯನ್ನು ಸ್ಮರಿಸಿದರು.

**ಕೃತಿ ಬಿಡುಗಡೆ:** ಇದೇ ವೇಳೆ ನಿವೃತ್ತ ಪ್ರಾಧ್ಯಾಪಕ ಪ್ರೊ.ಶಿವರಾಜಪ್ಪ ಸಂಪಾದಕತ್ವದ 'ವಿಸ್ಮಯ ಜಗತ್ತಿನ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ' ಕವನ ಸಂಕಲನಗಳ ಸಂಗ್ರಹ ಕೃತಿಯನ್ನು ನವದೆಹಲಿಯ ವಿಶಿಷ್ಟ ಜೈವಿಕ ತಂತ್ರಜ್ಞಾನ ಸಂಸ್ಥೆ ಮತ್ತು ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ ಪ್ರಾಧ್ಯಾಪಕ ಪ್ರೊ.ಟಿ.ಪಿ.ಸಿಂಗ್ ಬಿಡುಗಡೆ ಮಾಡಿದರು. ಹಾಗೆಯೇ ಪ್ರೊ.ಕೆ.ಎಸ್.ರಂಗಪ್ಪ ಅವರಿಗೆ ದಿವಂಗತ ವಿಜ್ಞಾನಿ ವೈ.ಟಿ.ತಾತಾಚಾರಿ ಪ್ರಶಸ್ತಿಯನ್ನು ನೀಡಿ, ಅಭಿನಂದಿಸಲಾಯಿತು.

ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್.ಹೆಗ್ಡೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಪದ್ಮಶ್ರೀ ಪುರಸ್ಕೃತರೂ ಆದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ ಅಧ್ಯಕ್ಷ ಪ್ರೊ.ವಿನೋದ್ ಕುಮಾರ್ ಸಿಂಗ್, ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಸನ್ ಫಾರ್ಮಾ ಅಡ್ವಾನ್ಸ್ ರಿಸರ್ಚ್ ಕಂಪನಿಯ ಮುಖ್ಯಸ್ಥ ಡಾ.ಟಿ.ರಾಜಮನ್ನಾರ್, ಪ್ರೊ.ಕೆ ಮಂಟೇಲಿಂಗು ಮತ್ತಿತರರು ಉಪಸ್ಥಿತರಿದ್ದರು.



ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ನೀಡಿರುವ ಗಣನೀಯ ಕೊಡುಗೆಗಳ ನೆನಪಿಗಾಗಿ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳೂ ಆದ ಖ್ಯಾತ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಹಾಗೂ ಅವರ ಪತ್ನಿ ಶ್ರೀಮತಿ ಪೂರ್ಣಿಮಾದೇವಿ ರಂಗಪ್ಪ ಅವರಿಗೆ ಹಿತೈಷಿಗಳಿಂದ ಗೌರವ ಸಲ್ಲಿಸಲಾಯಿತು. ಐಐಎಸ್ಸಿ ಮಾಜಿ ನಿರ್ದೇಶಕ ಪ್ರೊ.ಗೋವರ್ಧನ್ ಮೇಹ್ತಾ, ಸಂಸದರಾದ ಡಾ.ಸಿ.ಎನ್.ಮಂಜುನಾಥ್, ವಿಶಿಷ್ಟ ಜೈವಿಕ ತಂತ್ರಜ್ಞಾನ ಸಂಸ್ಥೆ ಮತ್ತು ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ ಪ್ರಾಧ್ಯಾಪಕ ಪ್ರೊ.ಟಿ.ಪಿ.ಸಿಂಗ್, ರಾಷ್ಟ್ರೀಯ ವಿಜ್ಞಾನ ಅಕಾಡೆಮಿ ಅಧ್ಯಕ್ಷ ಪ್ರೊ.ವಿನೋದ್ ಕುಮಾರ್ ಸಿಂಗ್, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್.ಹೆಗ್ಡೆ, ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮತ್ತಿತರರಿದ್ದರು.

### ಸಿಂಡಿಕೇಟ್ ಸದಸ್ಯರ ಆಯ್ಕೆಗೆ ಪ್ರವೇಶ ಪರೀಕ್ಷೆ ನಡೆಸಬೇಕು...!

ವಿದ್ಯಾರ್ಥಿಗಳ ದಾಖಲಾತಿಗೆ ಪ್ರವೇಶ ಪರೀಕ್ಷೆಗಳನ್ನು ನಡೆಸುವಂತೆ ಸಣ್ಣ ಪ್ರಮಾಣದಲ್ಲಾದರೂ ಸಿಂಡಿಕೇಟ್ ಸದಸ್ಯರ ಆಯ್ಕೆಗೆ ಪ್ರವೇಶ ಪರೀಕ್ಷೆ ನಡೆಸಬೇಕು. ಇದರಿಂದ ವಿವಿಗಳ ಗುಣಮಟ್ಟ ಹೆಚ್ಚಲಿದೆ ಎಂದು ಸಂಸದರಾದ ಡಾ.ಸಿ.ಎನ್.ಮಂಜುನಾಥ್ ಅಭಿಪ್ರಾಯಪಟ್ಟರು.

ದೇಶದಲ್ಲಿ ಸರ್ಕಾರಿ ವಿಶ್ವವಿದ್ಯಾನಿಲಯಗಳು ಕಳೆಗುಂದುತ್ತಿದ್ದು, ವರ್ಷದಿಂದ ವರ್ಷಕ್ಕೆ ಶೈಕ್ಷಣಿಕ ಗುಣಮಟ್ಟ ಕಡಿಮೆಯಾಗುತ್ತಿದೆ. ಆದ್ದರಿಂದ ವಿಕೇಂದ್ರೀಕರಣ, ನಿಯೋಗ ರಚನೆ ಅಧಿಕಾರವನ್ನು ಆಯಾ ವಿವಿ ಕುಲಪತಿ ಮತ್ತು ಅವರ ತಂಡಕ್ಕೆ ನೀಡಿದರೆ, ಮರಳಿ ಬೆಳೆಯಲು ಸಾಧ್ಯ ಹಾಗೆಯೇ ವಿದ್ಯಾರ್ಥಿಗಳ ದಾಖಲಾತಿಗೆ ಪ್ರವೇಶ ಪರೀಕ್ಷೆಗಳನ್ನು ನಡೆಸಬೇಕು. ಅದೇ ರೀತಿ ಸಣ್ಣ ಪ್ರಮಾಣದಲ್ಲಾದರೂ ಸಿಂಡಿಕೇಟ್ ಸದಸ್ಯರ ಆಯ್ಕೆಗೆ ಪ್ರವೇಶ ಪರೀಕ್ಷೆ ನಡೆಸುವುದರಿಂದ ವಿವಿಗಳ ಗುಣಮಟ್ಟ ಸುಧಾರಿಸಲಿದೆ ಎಂದು ಹೇಳಿದರು.

## ಶಶಿ ತರೂರ್ ಈಗ ಬಿಜೆಪಿಯ 'ಸೂಪರ್ ವಕ್ತಾರ': ಕಾಂಗ್ರೆಸ್ ಕಿಡಿ

ನವದೆಹಲಿ, ಮೇ 28– ಕಾಂಗ್ರೆಸ್ ನಾಯಕ ಉದಿತ್ ರಾಜ್ ಅವರು ಬುಧವಾರ ತಮ್ಮ ಪಕ್ಷದ ನಾಯಕ ಶಶಿ ತರೂರ್ ಅವರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದು, ಅವರನ್ನು ಬಿಜೆಪಿಯ ಸೂಪರ್ ವಕ್ತಾರ ಎಂದು ಘೋಷಿಸಬೇಕು ಎಂದು ಕಿಡಿಕಾರಿದ್ದಾರೆ.



ಶಶಿ ತರೂರ್

ಐದು ದೇಶಗಳಿಗೆ ತೆರಳಿರುವ ಸರ್ವಪಕ್ಷ ನಿಯೋಗದ ನೇತೃತ್ವ ವಹಿಸಿರುವ ಕಾಂಗ್ರೆಸ್ ಸಂಸದ ಶಶಿ ತರೂರ್, ಪನಾಮದಲ್ಲಿ ಮಾತನಾಡುತ್ತಾ, 2016 ರಲ್ಲಿ ಭಯೋತ್ಪಾದಕ ನೆಲೆಗಳ ಮೇಲೆ ನಡೆದ ಸರ್ಜಿಕಲ್ ಸ್ಟ್ರೈಕ್ ಸಮಯದಲ್ಲಿ ಭಾರತ ಮೊದಲ ಬಾರಿಗೆ ಗಡಿ ನಿಯಂತ್ರಣ ರೇಖೆಯನ್ನು ದಾಟಿತ್ತು ಎಂದು ಹೇಳಿದ್ದಾರೆ. ಇದು ಕಾಂಗ್ರೆಸ್ ನಾಯಕರನ್ನು ಕೆರಳಿಸಿದೆ.

ತರೂರ್ ಅವರ ಹೇಳಿಕೆಯನ್ನು ಟ್ಯಾಗ್ ಮಾಡಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ಉದಿತ್ ರಾಜ್ ಅವರು, ನನ್ನ ಪ್ರೀತಿಯ ಶಶಿ ತರೂರ್, ಅಯ್ಯೋ! ಭಾರತಕ್ಕೆ ಇಳಿಯುವ ಮೊದಲು ನಿಮ್ಮನ್ನು ವಿದೇಶಾಂಗ ಸಚಿವ ಎಂದು ಘೋಷಿಸಲು ನಾನು ಪ್ರಧಾನಿ ಮೋದಿಯವರ ಮನವೊಲಿಸಬಲ್ಲೆ. ಆದರೆ ಪ್ರಧಾನಿ ಮೋದಿಗಿಂತ ಮೊದಲು, ಭಾರತ ಎಂದಿಗೂ ಎಲ್‌ಒಸಿ ಮತ್ತು ಅಂತರರಾಷ್ಟ್ರೀಯ ಗಡಿಯನ್ನು ದಾಟಿಲ್ಲ ಎಂದು ಹೇಳುವ ಮೂಲಕ ನೀವು ಕಾಂಗ್ರೆಸ್‌ನ ಸುವರ್ಣ ಇತಿಹಾಸವನ್ನು ಅವಮಾನಿಸಿದ್ದೀರಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

1965 ರಲ್ಲಿ ಭಾರತೀಯ ಸೇನೆಯು ಪಾಕಿಸ್ತಾನವನ್ನು ಹಲವು ಹಂತಗಳಲ್ಲಿ ಪ್ರವೇಶಿಸಿತು. ಇದು ಲಾಹೋರ್ ವಲಯದಲ್ಲಿ ಪಾಕಿಸ್ತಾನಿಗಳನ್ನು ಸಂಪೂರ್ಣವಾಗಿ ಅಚ್ಚರಿಗೊಳಿಸಿತು. 1971 ರಲ್ಲಿ ಭಾರತ ಪಾಕಿಸ್ತಾನವನ್ನು ಎರಡು ತುಂಡುಗಳಾಗಿ ಹರಿದು ಹಾಕಿತು ಮತ್ತು ಯುಪಿಎ ಸರ್ಕಾರದ ಅವಧಿಯಲ್ಲಿ ಹಲವಾರು ಸರ್ಜಿಕಲ್ ಸ್ಟ್ರೈಕ್‌ಗಳನ್ನು ಮಾಡಲಾಯಿತು. ಆದರೆ ರಾಜಕೀಯವಾಗಿ ಲಾಭ ಮಾಡಿಕೊಳ್ಳಲು ಡ್ರಮ್ ಬಾರಿಸುವ ಕೆಲಸ ಮಾಡಿಲ್ಲ ಎಂದು ಅವರು ಹೇಳಿದ್ದಾರೆ

## ಹೆಚ್‌ಎಎಲ್ ನಿರ್ಮಾಣ ಮಾಡಿದ್ದೇ ಕನ್ನಡಿಗರು; ಯಾವುದೇ ಕಾರಣಕ್ಕೂ ಇದರ ಸ್ಥಳಾಂತರಕ್ಕೆ ಅವಕಾಶ ಕೊಡಬಾರದು

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್

ಈ ಸಂಸ್ಥೆಗೆ ಮೈಸೂರು ಮಹಾರಾಜರು ಕೊಡುಗೆ ನೀಡಿದ್ದಾರೆ; ಅದು ನೆಹರು ಕೊಡುಗೆ ಅಲ್ಲ

ಮೈಸೂರು, ಮೇ 28– ಹೆಚ್‌ಎಎಲ್ ನಮ್ಮ ರಾಜ್ಯದ ಹೆಮ್ಮೆಯಾಗಿದೆ. ಇದನ್ನು ನಿರ್ಮಾಣ ಮಾಡಿರುವುದೇ ಕನ್ನಡಿಗರು. ಜವಾಹರಲಾಲ್ ನೆಹರೂ ಅವರಿಗೂ ಇದಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸ್ಪಷ್ಟಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಹೆಚ್‌ಎಚ್‌ಎಲ್ ಅನ್ನು ಕೊಂಡೊಯ್ಯಬೇಕು ಎಂದು ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಸೇರಿದಂತೆ ಹಲವಾರು ರಾಜ್ಯಗಳು ಮನವಿ ಸಲ್ಲಿಸಿವೆ. ಆದರೆ, ಇದನ್ನು ಯಾವುದೇ ಕಾರಣಕ್ಕೂ ಕರ್ನಾಟಕದಿಂದ ಹೊರಹೋಗುವುದಕ್ಕೆ ಬಿಡುವುದಿಲ್ಲ ಎಂದರು. ಇಂಥ ಸಂಸ್ಥೆಯು ಇಲ್ಲಿಯೇ ಇರಬೇಕು. ಇದರ ಅಭಿವೃದ್ಧಿಗೆ ಎಲ್ಲಾ ಸೌಕರ್ಯಗಳನ್ನು ಒದಗಿಸಲು ನಾವು ಸಜ್ಜಾಗಿದ್ದೇವೆ ಎಂದು ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿರುವವರು ಕೇಂದ್ರದ ಮೇಲೆ ಒತ್ತಡ ಹೇರಬೇಕು. ಕೇಂದ್ರ ಸರ್ಕಾರಕ್ಕೆ ನಾವು ಕೂಡ ಮನವರಿಕೆ ಮಾಡಿಕೊಡುತ್ತೇವೆ ಎಂದರು.

ನೀತಿ ಆಯೋಗದ ಸಭೆಗೆ ಮುಖ್ಯಮಂತ್ರಿಗಳು ಗೈರು ಹಾಜರಾಗಿದ್ದರು. ಈ ಸಭೆಯಲ್ಲಿ ಭಾಗವಹಿಸಿ ಕರ್ನಾಟಕದ ಪರವಾಗಿ ಮಾತನಾಡಬೇಕಿತ್ತು. ಆದರೆ ಈಗ ಕೇಂದ್ರದ ಮೇಲೆ ಆರೋಪ ಮಾಡುವುದು ಸರಿಯಲ್ಲ. ಈಗಾಗಲೇ ಗೈರು ಹಾಜರಿ ಬಗ್ಗೆ ಎಲ್ಲಾ ಕಡೆ ಪ್ರಶ್ನಿಸಲಾಗಿದೆ ಎಂದು ಯದುವೀರ್ ವಿವರಿಸಿದರು. ಕನ್ನಡಿಗರಿಂದ, ಕನ್ನಡಿಗರ ನಾಯಕತ್ವದಲ್ಲಿ ಬೆಳೆದಿರುವ ಈ ಸಂಸ್ಥೆಯನ್ನು ಸಂರಕ್ಷಣೆ ಮಾಡಬೇಕು. ಹೆಚ್‌ಎಎಲ್ ಕಾರ್ಖಾನೆಯಲ್ಲಿ ನಡೆಯುತ್ತಿರುವ ಚಟುವಟಿಕೆಗಳು ಮುಂದುವರಿಯಲೇಬೇಕು. ಈ ನಿಟ್ಟಿನಲ್ಲಿ ಕಾಂಗ್ರೆಸ್ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹೇರಬೇಕು ಎಂದು ಸಂಸದರು ತಿಳಿಸಿದರು.



**ಡಿಕೆಶಿ ಹೇಳಿಕೆಗೆ ಆಕ್ಷೇಪ:** ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೆಚ್‌ಎಎಲ್ ನೆಹರೂ ಅವರ ಕೊಡುಗೆ ಎಂದಿದ್ದಾರೆ. ಆದರೆ, 1940ರಲ್ಲಿ 'ಹಿಂದೂಸ್ತಾನ್ ಏರ್‌ಕ್ರಾಫ್ಟ್ ಲಿಮಿಟೆಡ್' ಸಂಸ್ಥೆ ಸ್ಥಾಪಿಸಬೇಕು ಎಂದು ಇಂಟರ್ ಕಾಂಟಿನೆಂಟ್ ಕಾರ್ಪ್ ಅಧ್ಯಕ್ಷ ವಿಲಿಯಂ ಡಿ. ಪಾವ್ಲಿ, ವಾಲ್‌ಚಂದ್ ಅವರು ಪ್ರಸ್ತಾಪಿಸಿದ್ದರು. ಇದಕ್ಕೆ ನಮ್ಮ ಮೈಸೂರು ಮಹಾರಾಜರು ಸ್ಪಂದಿಸಿ 700 ಎಕರೆ ಜಮೀನು ಮಂಜೂರು ಮಾಡಿ, ಬಂಡವಾಳ ಹೂಡಿದರು ಎಂದು ಮಾಹಿತಿ ನೀಡಿದರು. ಎರಡನೇ ಮಹಾಯುದ್ಧದಲ್ಲಿ ಹೆಚ್‌ಎಎಲ್ ಬೃಹತ್ ಕೊಡುಗೆಗಳನ್ನು ನೀಡಿದೆ. 1964ರಲ್ಲಿ ರಕ್ಷಣಾ ಸಚಿವಾಲಯದ ಅಡಿಯಲ್ಲಿ ಈ ಸಂಸ್ಥೆಯನ್ನು 'ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್' ಎಂದು ಮರು ನಾಮಕರಣ ಮಾಡಲಾಯಿತು. ಭಾರತದ ಇತಿಹಾಸದಲ್ಲಿ ಹೆಚ್‌ಎಎಲ್ ಕೊಡುಗೆ ಸದಾ ಸ್ಮರಣೀಯ ಎಂದು ಯದುವೀರ್ ತಿಳಿಸಿದರು.

**ಕಮಲ್ ಹಾಸನ್ ಹೇಳಿಕೆ ಖಂಡನೀಯ:** ಕನ್ನಡ ಭಾಷೆ ತಮಿಳಿನಿಂದ ಬಂದಿದ್ದು ಎಂದು ನಟ ಕಮಲ್ ಹಾಸನ್ ಹೇಳಿರುವುದು ಖಂಡನಾರ್ಹ ಎಂದು ಸಂಸದ ಯದುವೀರ್ ಹೇಳಿದ್ದಾರೆ. ಕಮಲ್ ಅತ್ಯದ್ಭುತ ನಟ, ಇಡೀ ಭಾರತದಲ್ಲಿಯೇ ಅತ್ಯಂತ ಮನೋಜ್ಞ ನಟ ಎಂದು ಖ್ಯಾತಿ ಗಳಿಸಿದ್ದಾರೆ. ನಾನು ಕೂಡ ಅವರ ಚಿತ್ರಗಳನ್ನು ನೋಡಿದ್ದೇನೆ. ಹಾಗೆಂದು ಅವರು ಹೇಳಿದ್ದನ್ನು ಒಪ್ಪಲು ಸಾಧ್ಯವಿಲ್ಲ. ಕನ್ನಡ ಭಾಷೆಯ ಮೇಲೆ ಹಲವಾರು ಭಾಷೆಗಳು ಪ್ರಭಾವ ಬೀರಿದೆ ಎಂದು ತಜ್ಞರು ಹೇಳಿದ್ದಾರೆ. ಈ ಬಗ್ಗೆ ಚರ್ಚೆ ನಡೆಸುವುದು ಸರಿಯಲ್ಲ. ನಮ್ಮ ಲಿಪಿ ಕೂಡ ಇತಿಹಾಸದಲ್ಲಿ ದಾಖಲಾಗಿದೆ. ಇದನ್ನು ಅವರು ತಿಳಿದುಕೊಳ್ಳಬೇಕು. ತಮಿಳು ಮತ್ತು ಕನ್ನಡ ಭಾಷೆಗೆ ತನ್ನದೇ ಆದ ಇತಿಹಾಸ ಇದೆ. ಹೀಗಿರುವಾಗ ಕಮಲ್ ಹಾಸನ್ ಈ ರೀತಿಯ ಹೇಳಿಕೆ ನೀಡಿರುವುದು ಸರಿಯಲ್ಲ ಎಂದು ಸಂಸದ ಯದುವೀರ್ ಒಡೆಯರ್ ತಿಳಿಸಿದರು.

## ವರುಣನ ಆರ್ಭಟ: ಸಿಎಂ ನೇತೃತ್ವದಲ್ಲಿ ನಾಳೆ, ನಾಡಿದ್ದು ಸಭೆ

**ಬೆಂಗಳೂರು:** ರಾಜ್ಯಾದ್ಯಂತ ಭಾರಿ ಮಳೆ ಆಗುತ್ತಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಸಮಗ್ರ ಅವಲೋಕನ ನಡೆಸಲು ಮೇ 30, 31ರಂದು ಡಿಸಿ, ಜಿಪಂ ಸಿಇಓ ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಸಭೆ ಕರೆಯುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಸೂಚಿಸಿದ್ದಾರೆ.

ಮಳೆಯಿಂದ ಆಗಿರುವ ಅನಾಹುತದ ಬಗ್ಗೆ ಇಂದು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡ ಮುಖ್ಯಮಂತ್ರಿಗಳು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಆದೇಶಿಸಿದರು. ಜೋರು ಮಳೆಯಿಂದ ಹಾನಿಗೆ ಒಳಗಾಗಿರುವ ಮತ್ತು ಪ್ರವಾಹ ಪೀಡಿತ ಪ್ರದೇಶಗಳಿಗೆ ತಕ್ಷಣ ಭೇಟಿ ನೀಡಿ ಪರಿಸ್ಥಿತಿಯನ್ನು ಸಮಗ್ರ ವಾಗಿ ಅವಲೋಕಿಸುವಂತೆ ಜಿಲ್ಲಾ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಸೂಚನೆ ನೀಡಿದ್ದಾರೆ.



ಹಾಗೂ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಈ ಬಗ್ಗೆ ಕಟ್ಟೆಚ್ಚರ ಮತ್ತು ತೀವ್ರ ನಿಗಾ ವಹಿಸಿ ತಕ್ಷಣ ತಕ್ಷಣ ಪರಿಹಾರ ಕಾರ್ಯಗಳನ್ನು ಸಮರೋಪಾದಿಯಲ್ಲಿ ನಿರ್ವಹಿಸಲು ಸೂಚನೆ ನೀಡಿದ್ದಾರೆ.

ಏನೇನು ಕ್ರಮ ತೆಗೆದುಕೊಳ್ಳಲಾಗಿದೆ: ರಾಜ್ಯದಲ್ಲಿ 170 ತಾಲೂಕುಗಳನ್ನು ಪ್ರವಾಹ/ಭೂಕುಸಿತಕ್ಕೆ ಗುರಿಯಾಗುವ ತಾಲೂಕುಗಳೆಂದು ಗುರುತಿಸಲಾಗಿದ್ದು, ಮುಂಜಾಗ್ರತೆಯಾಗಿ 2,296 ಕಾಳಜಿ/ಆಶ್ರಯ ತಾಣಗಳನ್ನು ಗುರುತಿಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 201 ಸ್ಥಳಗಳನ್ನು ಪ್ರವಾಹ ಪೀಡಿತ ಸ್ಥಳಗಳನ್ನು ಗುರುತಿಸಲಾಗಿದೆ. ಮೇ 26, 2025 ರವರೆಗೆ ರಾಜ್ಯದಲ್ಲಿ 45 ಮನೆಗಳು ಸಂಪೂರ್ಣವಾಗಿ ಹಾನಿಯಾಗಿದೆ. 1,385 ಮನೆಗಳು ಭಾಗಶಃ ಹಾನಿಯಾಗಿದ್ದು, ಅದರಲ್ಲಿ ಶೇ.99% ರಷ್ಟು ಆರ್ಥಿಕ ಸಹಾಯ ಧನವನ್ನು ಪಾವತಿ ಮಾಡಲಾಗಿದೆ.

## ಮಾಜಿ ಯೋಧರಿಗಾಗಿ ಪ್ರತ್ಯೇಕ ನಿಗಮ ಸ್ಥಾಪಿಸಲು ಚಿಂತನೆ

ಬೆಂಗಳೂರು, ಮೇ 28– ರಾಜ್ಯದಲ್ಲಿರುವ ಎಲ್ಲಾ ಮಾಜಿ ಯೋಧರಿಗೆ ನೆರವಾಗಲು ಪ್ರತ್ಯೇಕ ನಿಗಮ (ಕಾರ್ಪೊರೇಷನ್) ಸ್ಥಾಪಿಸಲು ಚಿಂತನೆ ನಡೆಸಲಾಗಿದ್ದು, ಈ ವಿಚಾರವನ್ನು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.



ಡಿ.ಕೆ. ಶಿವಕುಮಾರ್


ನಗರದ ಟೌನ್‌ಹಾಲ್‌ನಲ್ಲಿ ಬುಧವಾರ ನಡೆದ ಜೈ ಹಿಂದ್ ಸಭಾ ಕಾರ್ಯಕ್ರಮದಲ್ಲಿ ದೇಶಕ್ಕೆ ಸೇವೆ ಸಲ್ಲಿಸಿದ ಹಿರಿಯ ಸೇನಾಧಿಕಾರಿಗಳು ಹಾಗೂ ಮಾಜಿ ಯೋಧರು, ಹುತಾತ್ಮರಾದ ಯೋಧರ ಕುಟುಂಬ ಸದಸ್ಯರನ್ನು ಸನ್ಮಾನಿಸಿದ ನಂತರ ಶಿವಕುಮಾರ್ ಅವರು ಮಾತನಾಡಿದರು.

ಕಾಂಗ್ರೆಸ್ ಪಕ್ಷದ ಸೈನಿಕರ ವಿಭಾಗದ ಅಧ್ಯಕ್ಷರಾದ ಮಲ್ಲಿಕಾರ್ಜುನ ಅವರ ಸಲಹೆ ಮೇರೆಗೆ ಕಾರ್ಪೊರೇಷನ್ ರಚಿಸಲು ಆಲೋಚಿಸುತ್ತಿದ್ದೇವೆ. ನಮ್ಮ ದೇಶಕ್ಕೆ ಸೇವೆ ಸಲ್ಲಿಸಿರುವ ಯೋಧರ ರಕ್ಷಣೆಗೆ ನಾವು ಬದ್ಧರಾಗಿದ್ದೇವೆ ಎಂದು ತಿಳಿಸಿದರು.

ಅಶೋಕ ಚಕ್ರ ಪ್ರಶಸ್ತಿ ಪುರಸ್ಕೃತ ದಿವಂಗತ ಮೇಜರ್ ಸಂದೀಪ್ ಉನ್ನಿಕೃಷ್ಣನ್, ಅಶೋಕ ಚಕ್ರ ಪ್ರಶಸ್ತಿ ಪುರಸ್ಕೃತ ಕರ್ನಲ್ ಜೋಜನ್ ಥಾಮಸ್, ಶೌರ್ಯ ಚಕ್ರ ಪ್ರಶಸ್ತಿ ಪುರಸ್ಕೃತ ಮೇಜರ್ ಎಂ.ಸಿ ಮುತ್ತಣ್ಣ, ಶೌರ್ಯ ಚಕ್ರ ಪ್ರಶಸ್ತಿ ಪುರಸ್ಕೃತ ಮೇಜರ್ ಗಣೇಶ್ ಮದ್ದಪ್ಪ, ಶೌರ್ಯ ಚಕ್ರ ಪ್ರಶಸ್ತಿ ಪುರಸ್ಕೃತ ಮೇಜರ್ ಎಂ.ಸಿ ಮುತ್ತಣ್ಣ, ಶೌರ್ಯ ಚಕ್ರ ಪ್ರಶಸ್ತಿ ಪುರಸ್ಕೃತ ಕ್ಯಾಪ್ಟನ್ ಎಂ.ವಿ ಪಂಜಲ್, ಶೌರ್ಯ ಚಕ್ರ ಪ್ರಶಸ್ತಿ ಪುರಸ್ಕೃತ ಮೇಜರ್ ಮೋಹನ್ ಗಂಗಾಧರನ್, ಮೇಜರ್ ಶಫೀಕ್ ಮೊಹಮದ್ ಖಾನ್, ಸೇನಾ ಪದಕ ಪುರಸ್ಕೃತ ಕರ್ನಲ್ ರಾಮಮೂರ್ತಿ ಕುಟುಂಬ ಸದಸ್ಯರನ್ನು ಸನ್ಮಾನಿಸಲಾಯಿತು. ಎಐಸಿಸಿ ನಿರ್ದೇಶನದ ಮೇರೆಗೆ ಕೆಪಿಸಿಸಿ ಈ ಜೈ ಹಿಂದ್ ಸಭಾ ಕಾರ್ಯಕ್ರಮವನ್ನು ಆಯೋಜಿಸಿತ್ತು ಈ ಕಾರ್ಯಕ್ರಮದಲ್ಲಿ ಸುಮಾರು ಸಾವಿರಕ್ಕೂ ಹೆಚ್ಚು ಸೇನೆಯ ಹಿರಿಯ ಅಧಿಕಾರಿಗಳು, ಮಾಜಿ ಯೋಧರು ಭಾಗವಹಿಸಿದ್ದರು. ದೇಶಕ್ಕಾಗಿ ನಿಸ್ವಾರ್ಥ ಸೇವೆ ಸಲ್ಲಿಸಿರುವ ಭಾರತೀಯ ಯೋಧರಿಗೆ ನಮನ ಸಲ್ಲಿಸಬೇಕು, ಅವರ ಬೆನ್ನಿಗೆ ನಿಲ್ಲಬೇಕು ಎಂಬ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲು ಎಐಸಿಸಿ ನಿರ್ದೇಶಿಸಿದೆ.

## ರಾಜ್ಯದಲ್ಲಿ ನಟ ಕಮಲ್ ಹಾಸನ್ 'ಥಗ್ ಲೈಫ್' ನಿಷೇಧಕ್ಕೆ ಒತ್ತಾಯ

ಬೆಂಗಳೂರು, ಮೇ 28– ತಮಿಳಿನಿಂದ ಕನ್ನಡ ಹುಟ್ಟಿತು ಎಂಬ ಹೇಳಿಕೆ ನೀಡುವುದರ ಮೂಲಕ ಕನ್ನಡಿಗರ ಆಕ್ರೋಶಕ್ಕೆ ತುತ್ತಾಗಿರುವ ನಟ ಕಮಲ್ ಹಾಸನ್ ಅವರ ಮುಂದಿನ ಚಿತ್ರ 'ಥಗ್ ಲೈಫ್' ನಿಷೇಧಿಸಬೇಕೆಂಬ ಒತ್ತಾಯ ಹೆಚ್ಚಾಗುತ್ತಿದೆ.



ಕಮಲ್ ಹಾಸನ್

ನಗರದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಹೊರಗಡೆ ಇಂದು ಪ್ರತಿಭಟನೆ ನಡೆಸಿದ ಕರವೇ ಪ್ರವೀಣ್ ಶೆಟ್ಟಿ ಬಣದ ಕಾರ್ಯಕರ್ತರು, ಯಾವುದೇ ಕಾರಣಕ್ಕೂ ಕಮಲ್ ಹಾಸನ್ ಅಭಿನಯದ 'ಥಗ್ ಲೈಫ್' ಚಿತ್ರ ಬಿಡುಗಡೆಗೆ ಅವಕಾಶ ನೀಡಬಾರದು. ಆ ಚಿತ್ರವನ್ನು ನಿಷೇಧಿಸಬೇಕು, ಕಮಲ್ ಹಾಸನ್ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

ನಟ ಕಮಲ್ ಹಾಸನ್ ಅವರು ಇತ್ತೀಚೆಗೆ ಚೆನ್ನೈನಲ್ಲಿ ನಡೆದ ತಮ್ಮ ಮುಂಬರುವ ಚಿತ್ರ ಥಗ್ ಲೈಫ್' ಆಡಿಯೋ ಬಿಡುಗಡೆ ಸಮಾರಂಭದಲ್ಲಿ ತಮಿಳಿನಿಂದ ಕನ್ನಡ ಹುಟ್ಟಿದೆ ಎಂದು ಹೇಳುವ ಮೂಲಕ ವಿವಾದಕ್ಕೆ ಗುರಿಯಾಗಿದ್ದಾರೆ. ನಟ ಶಿವರಾಜ್ ಕುಮಾರ್ ಕೂಡಾ ಆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಈ ಸಂಬಂಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಪ್ರವೀಣ್ ಶೆಟ್ಟಿ ಬುಧವಾರ ಮಧ್ಯಾಹ್ನ ಫಿಲ್ಮ್ ಛೇಂಬರ್ ಅಧ್ಯಕ್ಷರಿಗೆ ಪತ್ರ ಸಲ್ಲಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರವೀಣ್ ಶೆಟ್ಟಿ, ತಮಿಳಿನಿಂದ ಕನ್ನಡ ಹುಟ್ಟಿತು ಎಂಬ ಕಮಲ್ ಹಾಸನ್ ಅವರ ಹೇಳಿಕೆ ಸ್ವೀಕಾರಾರ್ಹವಲ್ಲ. ಇದನ್ನು ಯಾವುದೇ ಕನ್ನಡಿಗರು ಸಹಿಸಲ್ಲ. ಫಿಲ್ಮ್ ಛೇಂಬರ್ ಮಧ್ಯ ಪ್ರವೇಶಿಸಿ ಥಗ್ ಲೈಫ್ ಸಿನಿಮಾವನ್ನು ರಾಜ್ಯದಲ್ಲಿ ನಿಷೇಧಿಸಬೇಕು. ಕರ್ನಾಟಕ ಸರ್ಕಾರ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕೂಡಾ ಈ ಚಿತ್ರವನ್ನು ಬ್ಯಾನ್ ಮಾಡಬೇಕು. ಒಂದು ವೇಳೆ ಕಮಲ್ ಹಾಸನ್ ಕ್ಷಮೆಯಾಚಿಸದಿದ್ದರೆ ಚಿತ್ರಮಂದಿರದ ಹೊರಗಡೆ ಪ್ರತಿಭಟನೆ ನಡೆಸಲಾಗುವುದು, ಏನಾದರೂ ಅಹಿತಕರ ಘಟನೆಗಳು ಸಂಭವಿಸಿದರೆ ಸರ್ಕಾರ ಮತ್ತು ಕಮಲ್ ಹಾಸನ್ ಅವರೇ ಹೊಣೆ ಹೊರಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

**ಇಂದು ಸಭೆ ನಡೆಸಿ ತೀರ್ಮಾನ:** 'ಥಗ್ ಲೈಫ್ 'ಬ್ಯಾನ್ ಕುರಿತು ಚರ್ಚಿಸಲು ಕನ್ನಡ ಚಿತ್ರರಂಗದ ಎಲ್ಲಾ ಪಾಲುದಾರರರೊಂದಿಗೆ ನಾಳೆ (ಮೇ 29)ಸಭೆ ನಡೆಸಿ, ಮಧ್ಯಾಹ್ನದೊಳಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ.ನರಸಿಂಹಲು ಹೇಳಿದ್ದಾರೆ.

ಕಮಲ್ ಹಾಸನ್ ಕನ್ನಡಿಗರ ಕ್ಷಮೆಯಾಚಿಸಬೇಕು ಎಂದು ಕೆಎಫ್‌ಸಿಸಿ ನಿಕಟಪೂರ್ವ ಅಧ್ಯಕ್ಷ ಎಂಕೆ ಸುರೇಶ್ ಒತ್ತಾಯಿಸಿದರು. ಕಮಲ್ ಹಾಸನ್ ಆ ರೀತಿಯ ಹೇಳಿಕೆ ನೀಡಬಾರದು, ಕೂಡಲೇ ಕನ್ನಡಿಗರ ಕ್ಷಮೆಯಾಚಿಸಬೇಕು ಎಂದು ಅವರು ಆಗ್ರಹಿಸಿದರು.

**ಪೊಲೀಸ್ ಠಾಣೆಯಲ್ಲಿ ದೂರು ದಾಖಲು:** ಆರ್‌ಟಿ ನಗರ ಪೊಲೀಸ್ ಠಾಣೆಯಲ್ಲಿ ಪ್ರವೀಣ್ ಶೆಟ್ಟಿ ದೂರು ದಾಖಲಿಸಿದ್ದು, ಕಮಲ್ ಹಾಸನ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಕಮಲ್ ಹಾಸನ್ ಅವರ ಹೇಳಿಕೆ ಕನ್ನಡಿಗರ ಭಾವನೆಗಳಿಗೆ ಧಕ್ಕೆ ತಂದಿರುವುದು ಮಾತ್ರವಲ್ಲದೇ, ಕನ್ನಡಿಗರು ಮತ್ತು ತಮಿಳರ ನಡುವೆ ವಿಷದ ಬೀಜ ಬಿತ್ತುವುದನ್ನು ತೋರಿಸುತ್ತದೆ. ಕನ್ನಡಿಗರ ಅಪಮಾನ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.

ಯಾವುದೇ ಹೊಸ ತಮಿಳು ಚಿತ್ರ ಬಿಡುಗಡೆ ಸಂದರ್ಭದಲ್ಲಿ ನಿರಂತರವಾಗಿ ಕನ್ನಡಿಗರ ಸ್ವಾಭಿಮಾನವನ್ನು ಕೆಣಕುವ ಪ್ರಯತ್ನ ಮಾಡಲಾಗುತ್ತಿದೆ. ಇಂತಹ ಹೇಳಿಕೆಗಳು ಕನ್ನಡಿಗರು ಮತ್ತು ತಮಿಳರ ನಡುವೆ ಶಾಂತಿ, ಸೌಹಾರ್ದತೆಯನ್ನು ಹದಗೆಡಿಸುತ್ತವೆ ಎಂದು ದೂರಿನಲ್ಲಿ ಅವರು ಉಲ್ಲೇಖಿಸಿದ್ದಾರೆ. ದೂರನ್ನು ಸ್ವೀಕರಿಸಿದ್ದೇವೆ ಆದರೆ, ಇಲ್ಲಿಯವರೆಗೂ ಎಫ್‌ಐಆರ್ ದಾಖಲಿಸಿಲ್ಲ. ಕಾನೂನು ಅಭಿಪ್ರಾಯ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಲೆಗೆ ಜಾತಿ ಇಲ್ಲ. ಎಲ್ಲಾ ಭಾಷೆಯ ಕಲಾವಿದರು ಶಾರದಾಸುತರು ಎಂಬುದನ್ನು ಒಪ್ಪುತ್ತೇವೆ. ಆ ನಿಟ್ಟಿನಲ್ಲಿ ಕಮಲ್ ಹಾಸನ್ ಅವರನ್ನು ಮೆಚ್ಚಿಕೊಂಡಿದ್ದೇವೆ. ಆದರೆ, ಕನ್ನಡ ತಮಿಳಿನಿಂದ ಹುಟ್ಟಿದೆ ಎಂಬ ಅವರ ಮಾತನ್ನು ನಾನು ಒಪ್ಪುವುದಿಲ್ಲ. ಕನ್ನಡಕ್ಕೆ ಎರಡೂವರೆ ಸಾವಿರ ವರ್ಷಗಳ ಇತಿಹಾಸವಿದೆ.

– ನಟ, ರಾಜ್ಯಸಭಾ ಸದಸ್ಯ ಜಗ್ಗೇಶ್

ನಟ ಮತ್ತು ರಾಜಕಾರಣಿ ಕಮಲ್ ಹಾಸನ್ ಅವರು ಕನ್ನಡ ಭಾಷೆಯು ತಮಿಳಿನಿಂದ ಉಗಮವಾಯಿತು ಎಂದು ನೀಡಿರುವ ಹೇಳಿಕೆ ಸಂಪೂರ್ಣ ಸುಳ್ಳು, ದುರುದ್ದೇಶಪೂರಿತ ಮತ್ತು ಕನ್ನಡಿಗರ ಭಾವನೆಗಳಿಗೆ ಧಕ್ಕೆ ತರುವಂತಹದ್ದಾಗಿದೆ. ಈ ಹೇಳಿಕೆ ಅವರ ಅಜ್ಞಾನವನ್ನು ಬಹಿರಂಗಪಡಿಸುತ್ತದೆ. ಕನ್ನಡ ಮತ್ತು ತಮಿಳು ಭಾಷೆಗಳು ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿದ್ದರೂ, ಇವು ತಮ್ಮದೇ ಆದ ಸ್ವತಂತ್ರ ಇತಿಹಾಸ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಹೊಂದಿವೆ.

– ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣಗೌಡ

## ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ನಿಮಗೆ ಫ್ಯಾಟಿ ಲಿವರ್ ಆಗಿದೆ.
ಕುಡುಕ ರೋಗಿ : (ಭಯದಿಂದ) ಹಂಗ್ ಅಂದ್ರೆ!
ಡಾಕ್ಟರ್ : ಅಂದ್ರೆ ನಿಮ್ ಲಿವರ್ ದೊಡ್ಡದಾಗಿದೆ ಅಂಥ.
ಕುಡುಕ ರೋಗಿ : (ತುಂಬಾ ಖುಷಿಯಿಂದ) ಹಂಗಾದ್ರೆ ಇನ್ನೂ ಜಾಸ್ತಿ ಎಣ್ಣೆ ಹಿಡಿಸುತ್ತಾ ಡಾಕ್ಟ್ರೆ.

ಮೈಸೂರು ಮಿತ್ರ

ಗುರುವಾರ, 29 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತ ವಾಹಿನಿ..........

ಬಾಳಿನ ಮೊದಲರ್ಥವು ಇನ್ನೊಂದರ್ಥಕ್ಕಾಗಿ ಕಾಯುತ್ತದೆ.
ಇನ್ನೊಂದರ್ಥವು ಕಳೆದ ಅರ್ಥಕ್ಕಾಗಿ ಗೋಳಾಡುತ್ತದೆ.

| | |
|---|---|
| ವೇದ ಸುಳ್ಳಾದರೂ<br>ಗಾದೆ ಸುಳ್ಳಾಗದು | ಹಾಡುತ್ತಾ ಹಾಡುತ್ತಾ ರಾಗ<br>ನರಳುತ್ತಾ ನರಳುತ್ತಾ ರೋಗ |

## ನಿಮ್ಮ ಪತ್ರಗಳು

### ಲೂಟಿ ಕ್ಯಾಂಟೀನ್



ಮಾನ್ಯರೆ,

ನಮ್ಮ ರಾಜ್ಯದಲ್ಲಿ ಈಗಾಗಲೇ ನೂರಾರು ಇಂದಿರಾ ಕ್ಯಾಂಟೀನ್‌ಗಳು ಮಕಾಡೇ ಮಲಗಿ ಮುಚ್ಚಿಕೊಂಡು ಹೋಗಿವೆ. ಮೈಸೂರಿನ ಜೋಡಿ ತೆಂಗಿನಮರ ರಸ್ತೆಯ ಇಂದಿರಾ ಕ್ಯಾಂಟೀನ್ ತೆರೆಯುತ್ತಿಲ್ಲ. ಹಾಗೆಯೇ ಲಲಿತಮಹಲ್ ಪಕ್ಕದ ಇಂದಿರಾ ಕ್ಯಾಂಟೀನ್ ಪುಂಡು ಪೋಕರಿಗಳ ಅಡ್ಡೆ ಆಗಿದೆ. ಈ ತರಹದ ಬೇಕಾದಷ್ಟು ಉದಾಹರಣೆ ಇದ್ದರೂ ಈಗ ಹಿನಕಲ್‌ನಲ್ಲಿ ಇಂದಿರಾ ಕ್ಯಾಂಟೀನ್ ಅನ್ನು ಉದ್ಘಾಟಿಸಿದ್ದಾರೆ ನಮ್ಮ ಘನವೆತ್ತ ಮುಖ್ಯ ಮಂತ್ರಿಗಳು. ಇದು ತೊಘಲಕ್ ಸರ್ಕಾರ ಅಲ್ಲದೇ ಇನ್ನೇನು. ದಿನ ಬೆಳಗಾದರೆ ಆ ತೆರಿಗೆ ಈ ತೆರಿಗೆ ಹಾಕಿ ಜನ ಸಾಮಾನ್ಯರ ಜೀವನ ದುಸ್ತರ ಮಾಡಿರುವ ಇಂತಹ ಸರ್ಕಾರ ನಮಗೆ ಬೇಕಿತ್ತೇ?

–ವಿ. ಕೇಶವಮೂರ್ತಿ, ಜ್ಯೋತಿಷ ವಿದ್ವಾಂಸ.

### ಬದಲಾವಣೆ ಸ್ವಾಗತಾರ್ಹ

ಮಾನ್ಯರೆ,

ಸಿವಿಲ್ ಪ್ರಕರಣಗಳ ತ್ವರಿತ ವಿಲೆವಾರಿಗೆ ಕರ್ನಾಟಕ ಸರ್ಕಾರವು ಕೇಂದ್ರದ ಸಿಪಿಸಿ ಕಾಯ್ದೆಗೆ ತಂದಿರುವ ತಿದ್ದುಪಡಿಗೆ ರಾಷ್ಟ್ರಪತಿಗಳು ಅಂಕಿತ ಹಾಕಿದ್ದು, ಅದು ಮೇ 26ರಿಂದಲೇ ಜಾರಿಗೆ ಬಂದಿರುವುದು (ಪತ್ರಿಕಾ ವರದಿ 27.5.25.) ಸ್ವಾಗತಾರ್ಹ. ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲರು ಹೇಳಿರುವಂತೆ ನಿಜಕ್ಕೂ ಇದೊಂದು ಕ್ರಾಂತಿಕಾರಿ ಬದಲಾವಣೆ ಎಂದೇ ಹೇಳಬಹುದು. ಅದರಲ್ಲೂ ದೇಶದಲ್ಲೇ ಕರ್ನಾಟಕದಲ್ಲೇ ಮೊದಲು ಎನ್ನುವುದು. ಕೋರ್ಟ್‌ಗೆ ಹೋದರೆ ಗೆದ್ದವನು ಸೋತ, ಸೋತವನು ಸತ್ತ ಎನ್ನುವ ನಾಣ್ಣುಡಿಯನ್ನು ಈ ತಿದ್ದುಪಡಿ ಎಷ್ಟರ ಮಟ್ಟಿಗೆ ಯಶಸ್ವಿಗೊಳಿಸುತ್ತದೆ ಎನ್ನುವುದನ್ನು ತಿಳಿಯಲು ಇನ್ನೂ 3–4 ವರ್ಷ ಕಾಯಬೇಕು. ಪ್ರಕರಣಗಳ ವಿಲೇವಾರಿಗೆ 2 ವರ್ಷ ಕಾಲಮಿತಿ ನಿಗದಿಪಡಿಸಿ ನಿಯಮಗಳನ್ನು ರೂಪಿಸಿರುವುದು ಪ್ರಕರಣಗಳ ಶೀಘ್ರ ವಿಲೇವಾರಿಗೆ ಅನುಕೂಲವಾಗಬಹುದು. ದೇಶದ ಎಲ್ಲಾ ರಾಜ್ಯಗಳು ಇದನ್ನು ಅನುಸರಿಸಬೇಕು. ಹಾಗೂ ಕ್ರಿಮಿನಲ್ ಪ್ರಕರಣಗಳಿಗೂ ಇದೇ ತಿದ್ದುಪಡಿಯ ಅವಶ್ಯಕತೆ ಇದೆ. ಕಾನೂನು ಸಚಿವಾಲಯ ಈ ಬಗ್ಗೆ ಗಮನ ಹರಿಸಬೇಕು. ಪ್ರಕರಣಗಳ ವಿಲೇವಾರಿ 2–3 ತಲೆಮಾರುಗಳಿಗೆ ಎಳೆಯುವುದನ್ನು ಇಂತಹ ತಿದ್ದುಪಡಿ ಕೊನೆಗಾಣಿಸುತ್ತದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

### ಅಧಿಕಾರಿಗಳ ಜಾಣ ಕುರುಡು

ಮಾನ್ಯರೆ,

ಮೈಸೂರಿನ ಅಶೋಕಪುರಂ ಪೊಲೀಸ್ ಠಾಣೆಯಿಂದ ಕೇವಲ 100 ಮೀಟರ್ ದೂರದಲ್ಲಿರುವ ಹೋಟೆಲ್‌ವೊಂದರಲ್ಲಿ ಅನಧಿಕೃತವಾಗಿ ಯಾವುದೇ ಪರವಾನಗಿ ಪಡೆಯದೇ ಮದ್ಯ ಸೇವಿಸಲು ಅವಕಾಶ ಕೊಟ್ಟಿದ್ದು, ಅಕ್ಕಪಕ್ಕದ ನಾಗರಿಕರಿಗೆ ತುಂಬಾ ತೊಂದರೆಯಾಗಿದೆ. ಇದನ್ನು ತಡೆಗಟ್ಟಬೇಕೆಂದು ಈಗಾಗಲೇ ಜಿಲ್ಲಾಧಿಕಾರಿ, ನಗರ ಪೊಲೀಸ್ ಆಯುಕ್ತರು, ಸ್ಥಳೀಯ ಪೊಲೀಸ್ ಠಾಣೆ, ಅಬಕಾರಿ ಇಲಾಖೆಗೆ ದೂರು ಕೊಟ್ಟಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

– ಅಶೋಕಪುರಂ ನಿವಾಸಿಗಳು, ಮೈಸೂರು.

### ಮೈಸೂರಲ್ಲಿ ಸಿಟಿ ಬಸ್‌ಗಳನ್ನು ನಿಲ್ದಾಣಗಳಲ್ಲಿ ನಿಲ್ಲಿಸುವಂತೆ ಮನವಿ

ಮಾನ್ಯರೆ,

ಮೈಸೂರು ನಗರ ಸಾರಿಗೆ ಬಸ್‌ಗಳನ್ನು ಚಾಲಕರು ನಿಲ್ದಾಣಗಳಲ್ಲಿ ನಿಲ್ಲಿಸದೇ ನಿಲ್ದಾಣದಿಂದ ಸ್ವಲ್ಪ ಹಿಂದೆ ಅಥವಾ ನಿಲ್ದಾಣದಿಂದ ಸ್ವಲ್ಪ ಮುಂದೆ ನಿಲ್ಲಿಸುವ ಪರಿಪಾಠ ಬೆಳೆಸಿಕೊಂಡಿದ್ದಾರೆ. ಹೀಗಾಗಿ ಪ್ರಯಾಣಿಕರು ಬಸ್ ಹತ್ತಲು ನಿಲ್ದಾಣದಿಂದ ಬಸ್ ನಿಲ್ಲಿಸುವ ಸ್ಥಳಕ್ಕೆ ಓಡಬೇಕಾಗಿದೆ. ದಿನಾಂಕ 13.5.2025ರಂದು ಬೆಳಗ್ಗೆ 8.50ರಲ್ಲಿ ಕುವೆಂಪುನಗರ ಘಟಕಕ್ಕೆ ಸೇರಿದ ಶ್ರೀನಗರದಿಂದ ನಗರ ಬಸ್ ನಿಲ್ದಾಣಕ್ಕೆ ತೆರಳುತ್ತಿದ್ದ ಮಾರ್ಗ ಸಂಖ್ಯೆ 14 (ಕೆಎ 57ಎಫ್ 1434) ಬಸ್ ಖಾಲಿಯಿದ್ದರೂ ಚಾಲಕರು ಗೊಬ್ಬಳಿಮರ ನಿಲ್ದಾಣದಲ್ಲಿ ನಿಲುಗಡೆ ನೀಡದೆ ಜೆ.ಪಿ. ನಗರದ ಕರ್ನಾಟಕ ಬ್ಯಾಂಕ್ ಮುಂಭಾಗ ನಿಲುಗಡೆ ನೀಡಿ ತೆರಳಿದರು. ಇದರಿಂದ ಗೊಬ್ಬಳಿಮರ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುತ್ತಿದ್ದ ಅನೇಕ ಶಾಲಾ ಕಾಲೇಜು ವಿದ್ಯಾರ್ಥಿಗಳು, ಉದ್ಯೋಗಸ್ಥರು ಮತ್ತು ಸಾರ್ವಜನಿಕರಿಗೆ ತೊಂದರೆಯಾಯಿತು.

ಆದಕಾರಣ ಸಂಬಂಧಪಟ್ಟ ನಗರ ಸಾರಿಗೆ ಅಧಿಕಾರಿಗಳು ಇತ್ತ ಗಮನಹರಿಸಿ ಕಡ್ಡಾಯವಾಗಿ ನಿಲ್ದಾಣದಲ್ಲಿ ಬಸ್ ನಿಲುಗಡೆ ನೀಡುವಂತೆ ಚಾಲಕರು ಮತ್ತು ನಿರ್ವಾಹಕರಿಗೆ ಸೂಚಿಸಬೇಕೆಂದು ಈ ಮೂಲಕ ಮನವಿ.

–ಸರೋಜಮ್ಮ, ನಿವೃತ್ತ ಶಿಕ್ಷಕರು, ಜೆ.ಪಿ. ನಗರ, ಮೈಸೂರು.

### ಕೃತಜ್ಞತೆ ಎಂಬ ಮಾನವ ಶ್ರೇಷ್ಠತೆ

ಮಾನ್ಯರೆ,

ಜಿ.ಎಲ್. ತ್ರಿಪುರಾಂತಕ ಅವರ ಅರಿವು ಅಂಕಣದಲ್ಲಿ 'ಕೃತಜ್ಞತೆ ಎಂಬ ಮಾನವ ಶ್ರೇಷ್ಠತೆ...!' ಶೀರ್ಷಿಕೆಯಡಿ ಪ್ರಕಟವಾಗಿರುವ ಲೇಖನ ಸೊಗಸಾಗಿ ಮೂಡಿಬಂದಿದೆ ('ಮೈಸೂರು ಮಿತ್ರ' 26 ಮೇ). ಕೃತಜ್ಞತಾ ಭಾವವು ಒಂದು ದೌರ್ಬಲ್ಯವಲ್ಲ, ಅದೊಂದು ಬಲವೇ ಸರಿ. ಬಲಹೀನರು ಅದನ್ನು ಅನುಸರಿಸಲು ಸಾಧ್ಯವಿಲ್ಲ. ನಮ್ಮ ದೈನಂದಿನ ಬದುಕಿನಲ್ಲಿ ನಮ್ಮ ಸುಖ–ಸಂತೋಷಕ್ಕಾಗಿ ದುಡಿಯುವ ಮಂದಿ ಅನೇಕರಿರುತ್ತಾರೆ. ಅವರ ಅಮೂಲ್ಯ ಸೇವೆಗೆ ಆಗಾಗ್ಗೆ ಧನ್ಯವಾದ ಹೇಳುವ ಸೌಜನ್ಯ ಬೆಳೆಸಿಕೊಳ್ಳ ಬೇಕು. ಧನ್ಯವಾದ ಎಂಬುದು ದೊಡ್ಡವರಿಗೆ ಬಳಸಬೇಕಾದ ದೊಡ್ಡ ಪದ ಎಂದು ಭಾವಿಸಬಾರದು. ಅದು ವ್ಯಕ್ತಿತ್ವದ ಒಂದು ಅಂಗವಾಗಬೇಕು. ಜಿಪುಣತನ, ಬಿಗುಮಾನ ಬಿಟ್ಟು ಕೃತಜ್ಞತೆ ಸಲ್ಲಿಸುವ ಮನೋಭಾವ ಎಲ್ಲರೂ ಬೆಳೆಸಿಕೊಳ್ಳಬೇಕು ಎಂದು ಮನಮುಟ್ಟುವಂತೆ ತಿಳಿಸಿದ್ದಾರೆ.

–ಲಕ್ಷ್ಮಣ್ ಗೋರ್ಲಕಟ್ಟೆ, ಬೋಗಾದಿ, ಮೈಸೂರು



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

# ಕನ್ನಡ ಉಳಿದು, ಬೆಳೆದಿದೆ; ಈಗ ಬಳಸಿ ಅಷ್ಟೆ...!

ಕನ್ನಡ ನಮ್ಮ ಜೀವದ ಒಡಲು, ಕನ್ನಡ ನಮ್ಮ ಭಾವದ ಕಡಲು, ಭಾಷೆ, ನೆಲ, ಜಲ ವಿಷಯದಲ್ಲಿ ಯಾರೇ ಮೂಗು ಮುರಿದರೂ, ಮೂಗು ತೂರಿಸಿದರೂ ಅವರನ್ನು ಹೆಡೆಮುರಿ ಕಟ್ಟಿ ಬುದ್ಧಿ ಕಲಿಸುವ ಗುಣ ಕನ್ನಡಿಗರದು. ಅದರಲ್ಲಿಯೂ ಕನ್ನಡ ಭಾಷೆಯ ವಿಚಾರವಾಗಿ ಇತ್ತೀಚೆಗಂತೂ ಒಂದಲ್ಲ ಒಂದು ಅಪಮಾನ ಎದುರಾದಾಗಲೂ ಕನ್ನಡ ಸಂಘಟನೆಗಳು, ಕನ್ನಡಿಗರು ತೋರಿದ ಮಾತೃಭಾಷಾಭಿಮಾನಕ್ಕೆ ಬೆಲೆ ಕಟ್ಟಲಾಗದು.

ಕಳೆದ 15 ದಿನಗಳ ಘಟನೆಗಳನ್ನೇ ಮೆಲುಕು ಹಾಕಿ ನೋಡಿದರೆ ಸೋನು ನಿಗಮ್ ಕನ್ನಡಿಗರನ್ನು ಭಯೋತ್ಪಾದಕರಿಗೆ ಹೋಲಿಸಿದ್ದು, ಬೆಂಗಳೂರಿನ ಹೋಟೆಲ್ ಒಂದರಲ್ಲಿ ಕನ್ನಡದ ಬಗ್ಗೆ ಅಶ್ಲೀಲವಾಗಿ ಬರೆದದ್ದು, ಮೊನ್ನೆ ಮೊನ್ನೆ ತಾನೆ ಬ್ಯಾಂಕ್‌ನಲ್ಲಿ ಮಹಿಳೆ ಕನ್ನಡ ಮಾತನಾಡುವುದಿಲ್ಲವೆಂದು ಉದ್ಧಟತನ ಮೆರೆದದ್ದು, ಪಠ್ಯಕ್ರಮದಲ್ಲಿ ಕನ್ನಡವೇ ಮಾಧ್ಯಮವಾಗಬೇಕು ಎಂಬ ಘೋಷಣೆಗಳು...... ತಾಜಾ ಉದಾಹರಣೆ ಎಂದರೆ ಭಾರತೀಯ ಚಿತ್ರರಂಗದಲ್ಲಿ ಹೆಸರು ಮಾಡಿರುವ ಕಮಲ್‌ಹಾಸನ್ ತಮಿಳಿಂದ ಕನ್ನಡ ಬಂದಿದೆ ಎಂದು ದಿಕ್ಕು ದೆಸೆ ಇಲ್ಲದ ಹೇಳಿಕೆಯನ್ನು ಮಂಗಳವಾರವಷ್ಟೇ ನೀಡಿದ್ದಾರೆ. ಇವುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇಂತಹ ಪರಿಸ್ಥಿತಿ ನಿರ್ಮಾಣವಾಗಲೂ ಕಾರಣ ಏನಿರಬಹುದು? ಪದೇ ಪದೇ ಕನ್ನಡ, ಕನ್ನಡಿಗರಿಗೆ ಯಾಕೆ ಅವಮಾನಗಳಾಗುತ್ತಿವೆ ಎಂದು ಆಲೋಚಿಸಿದರೆ ಹತ್ತು ಹಲವು ವಿಚಾರ ಗೋಚರಿಸುತ್ತದೆ.

### ಕನ್ನಡ ಭಾಷೆಯ ಬೆಳೆಸುವುದಲ್ಲ, ಬಳಸಬೇಕು

ಕನ್ನಡ ಬೆಳೆಸಿ, ಕನ್ನಡ ಉಳಿಸಿ ಎಂಬ ಮಾತನ್ನು ನಾನು ಹೇಳಲಾರೆ. ಏಕೆಂದರೆ, ಸುಮಾರು ಎರಡೂವರೆ ಸಾವಿರ ವರ್ಷಗಳಷ್ಟು ಇತಿಹಾಸವನ್ನು ಹೊಂದಿರುವ ಭಾಷೆಯನ್ನು ಉಳಿಸಲು, ಬೆಳೆಸಲು ನಾವ್ಯಾರು, ನೀವ್ಯಾರು ಹೇಳಿ!! ಕನ್ನಡ ಭಾಷೆ ಬೆಳೆದಿದೆ, ಸಾವಿರಾರು ವರ್ಷಗಳಿಂದ ಉಳಿದಿದೆ, ಸದ್ಯಕ್ಕೆ ಆಗಬೇಕಿರುವುದು ಕನ್ನಡ ಭಾಷೆಯನ್ನು ಬಳಸುವುದು. ಹೌದು, ನಿಜಕ್ಕೂ ಕನ್ನಡದವರೇ ಕನ್ನಡ ಭಾಷೆಯನ್ನು ಕಡೆಗಣಿಸಿ ಬೇರೆ ಬೇರೆ ಭಾಷೆಗಳ ವ್ಯಾಮೋಹಕ್ಕೆ ಒಳಗಾಗಿ ನಮ್ಮ ನುಡಿಯನ್ನು ಬಳಸುವುದನ್ನು ಮರೆತ್ತಿದ್ದೇವೆ.ಜನುಮ ದಿನಕ್ಕೆ ಶುಭಾಶಯ ತಿಳಿಸಬೇಕೆಂದರೆ ಮೊದಲಿಗೆ ಬರುವುದೇ ಆಂಗ್ಲಭಾಷೆ. ಮೊದಲು ಒಬ್ಬರನ್ನು ಭೇಟಿಯಾದಾಗ ಬಳಸುವುದೇ ಹಾಯ್, ಹಲೋ.... ಹೀಗಿದ್ದಾಗ ಕನ್ನಡ ಭಾಷೆಯನ್ನು ಬೇರೆ ಭಾಷಿಕರು ಬಳಸಲು ಹೇಗೆ ಅವಕಾಶವಾದಿತು! ಗೌರವಿಸಿ, ಪ್ರೀತಿಸಲು ಹೇಗೆ ಸಾಧ್ಯ ನೀವೇ ಹೇಳಿ ?

ರಸ್ತೆಬದಿ ಮಾರುವ ಪಾನಿಪುರಿ ತಿನ್ನಲು ಹೋದಾಗಲೂ ನಮಗೆ ಅದನ್ನು ಮಾರುವವರ ಭಾಷೆ ಬಾರದಿದ್ದರೂ, ಬಯ್ಯಾ ಏಕ್ ಪ್ಲೇಟ್ ಗೋಲ್‌ಗಪ್ಪ ದೆತೋ, ಕ್ಯಾ ಬಾಯ್..... ಲೇಟ್ ಹೋಗಯಾ... ಹೀಗೆ ಅರೆಬರೆ, ತಳಬುಡ ಇಲ್ಲದೆ ಅವರ ಭಾಷೆ ಬಳಸುತ್ತೇವೆ. ಹೀಗೆ ತಾವೇ ಅವರ ಭಾಷೆಯಲ್ಲಿಯೇ ವ್ಯವಹರಿಸಿದರೆ ಅವರು ನಮ್ಮ ಭಾಷೆಯನ್ನು ಹೇಗೆ ಕಲಿಯಲು ಸಾಧ್ಯ? ಭಾಷೆ ಬಾರದಿದ್ದರೂ ಬದುಕು ಕಟ್ಟಿಕೊಂಡು ಜೀವನ ನಡೆಸುತ್ತಿರುವವರ ಅನ್ಯಭಾಷಿಕರ ಎದುರು ನಮ್ಮತನ ಕಳೆದುಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ? ಇದರರ್ಥ ನಾವು ಬೇರೆ ಭಾಷೆಯನ್ನು ಕಲಿಯಲೇಬಾರದು, ಮಾತನಾಡಲೇಬಾರದು ಎಂದಲ್ಲ. ಹಾಗೆ ನೋಡಿದರೆ ಯಾವುದೇ ಭಾಷೆಯನ್ನು, ಯಾರು ಬೇಕಾದರೂ ಕಲಿಯಬಹುದು. ಉದಾಹರಣೆಗೆ ಗೋವಿಂದ ಪೈ ಕನ್ನಡದ ಮೊದಲ ರಾಷ್ಟ್ರಕವಿಗಳಿಗೆ ಸರಿ ಸುಮಾರು 18 ಭಾಷೆಗಳಲ್ಲಿ ಪಾಂಡಿತ್ಯವಿತ್ತು. ಅಷ್ಟು ಭಾಷೆಗಳನ್ನು ಓದುವುದಕ್ಕೆ, ಬರೆಯುವುದಕ್ಕೆ, ಮಾತನಾಡುವುದಕ್ಕೆ ಅವರಿಗೆ ಬರುತ್ತಿತ್ತು ಎಂದು ಹೇಳುತ್ತಾರೆ. ಅವರು ಗ್ರೀಕ್ ಪ್ರಹಸನದಲ್ಲಿ ಇರುವ ಕನ್ನಡ ಪದಗಳನ್ನು ಗುರುತಿಸಿ ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ಗುರುತಿಸುವ ಕೆಲಸವನ್ನು ಮಾಡುತ್ತಾರೆ.

ಇತ್ತೀಚೆಗಷ್ಟೇ ಕನ್ನಡಕ್ಕೆ ಮೊದಲ ಬೂಕರ್ ಪ್ರಶಸ್ತಿ ದೊರೆತ ಸಂದರ್ಭದಲ್ಲಿ ಕನ್ನಡದ ಕೃತಿಯನ್ನು ಆಂಗ್ಲಭಾಷೆಗೆ ಅನುವಾದ ಮಾಡಿದ್ದ ಲೇಖಕಿ ದೀಪಾ ಬಾಸ್ತಿ ಅವರು ಅವರ ಭಾಷಣದಲ್ಲಿ 'ಜೇನಿನ ಹೊಳೆಯೊ... ಹಾಲಿನ ಮಳೆಯೊ. ಸುಧೆಯೊ ಕನ್ನಡ ಸವಿನುಡಿಯೊ...' ಎಂದು ಹಾಡಿ, ಕನ್ನಡದ ಮಹತ್ವವನ್ನು ಸಾರಿ, ಆ ಹಾಡಿನ ಅರ್ಥವನ್ನು ಆಂಗ್ಲಭಾಷೆಯಲ್ಲಿ ಹೇಳಿದ್ದು ಕೂಡ ಕನ್ನಡ ಭಾಷೆಯ ಮೇಲೆ ಅವರಿಗಿರುವ ಪ್ರೀತಿಯನ್ನು ತಿಳಿಸುವಂತದ್ದಾಗಿದೆ. ಆದ್ದರಿಂದ ನಮಗೆ ತಿಳಿಯಬೇಕಾದದ್ದು ಮೊದಲಿಗೆ ಕನ್ನಡವನ್ನು ಕನ್ನಡಿಗರು ಮೊದಲು ಬಳಸಬೇಕು. ಉಳಿದ ಭಾಷೆಯನ್ನು ದ್ವೇಷಿಸಿ ಕನ್ನಡವನ್ನು ಬಳಸುವ ಅಗತ್ಯವಾಗಲಿ, ಅನಿವಾರ್ಯವಾಗಲಿ ಇಲ್ಲ. ಆದರೆ ಬಳಸಬಹುದಾದ ಸಂದರ್ಭಗಳಲ್ಲೆಲ್ಲಾ ಕನ್ನಡವನ್ನು ಬಳಸುವುದನ್ನು ರೂಢಿಸಿಕೊಳ್ಳಬೇಕು. ನನಗೆ ಇದನ್ನು ಹೇಳುವಾಗ ಪಕ್ಕದ ರಾಜ್ಯ ತಮಿಳುನಾಡಿನ ಉದಾಹರಣೆ ಕೊಡಬೇಕೆನಿಸುತ್ತದೆ. ತಮಿಳುನಾಡಿನ ಬಹುತೇಕ ಅಂಗಡಿಗಳಲ್ಲಿ ಮೊದಲಿಗೆ ಅಕ್ಷರಗಳು ತಮಿಳು ಭಾಷೆಯಲ್ಲಿ ನಂತರ ಉಳಿದ ಭಾಷೆಯಲ್ಲಿ ಇರುತ್ತದೆ. ಅಲ್ಲಿ ಹೋಗಿ ನಾವು ಯಾರ ಬಳಿಯಾದರೂ ವಿಳಾಸ ಕೇಳಬೇಕೆಂದರೂ ಅವರ ಭಾಷೆಯಲ್ಲಿ (ಅಲ್ಪಸ್ವಲ್ಪ ತಪ್ಪಾಗಿಯಾದರೂ ಸರಿ ತಮಿಳಿನಲ್ಲಿಯೇ ಕೇಳಬೇಕು) ಮಾತನಾಡಿದರೆ ಮಾತ್ರ ಉತ್ತರ ನೀಡುತ್ತಾರೆ. ನಮ್ಮಲ್ಲಿ ಮಾತ್ರ ನಮ್ಮ ಭಾಷೆಯಲ್ಲಿ ಶುಭೋದಯ ಎಂದರೆ, ಜನುಮ ದಿನದ ಸಂದರ್ಭದಲ್ಲಿ ಕನ್ನಡದಲ್ಲಿ ಶುಭಾಶಯ ತಿಳಿಸಿದರೆ ಉಳಿದವರು ಇರಲೀ ನಮ್ಮ ಕನ್ನಡಿಗರೇ 'ಓಹ್ ಕನ್ನಡ ಪಂಡಿತನಪ್ಪ' ಎಂಬ ವ್ಯಂಗ್ಯದ ಮಾತನಾಡುತ್ತಾರೆ. ಈ ಧೋರಣೆ ಬದಲಾಗಬೇಕು.

> ಎಲ್ಲಿವರೆಗೆ ಕನ್ನಡ ಭಾಷೆ ಅನ್ನದ ಭಾಷೆಯಾಗಿ ಬದಲಾಗುವುದಿಲ್ಲವೋ ಅಲ್ಲಿವರೆಗೂ ಭಾಷೆಯ ಮೇಲೆ ಅಪಮಾನ, ಅವಮಾನಗಳಾವುದು ಮುಂದುವರೆಯುತ್ತಲೇ ಇರುತ್ತದೆ. ಆದ್ದರಿಂದ ಕನ್ನಡವನ್ನು ಕಲಿತರೆ ಹೆಚ್ಚು ಸದಾವಕಾಶಗಳು ಸಿಗುತ್ತದೆಂಬ ವಾತಾವರಣ ಕಲ್ಪಿಸಬೇಕಿದೆ. ಈ ವಾತಾವರಣ ನಿರ್ಮಾಣವಾದರೆ ಕನ್ನಡದಲ್ಲಿ ಓದುವವರು, ಕನ್ನಡ ಮಾಧ್ಯಮಕ್ಕೆ ಸೇರುವವರ, ಕನ್ನಡ ಸಾಹಿತ್ಯ ಓದುವವರ ಸಂಖ್ಯೆಯು ಗಣನೀಯವಾಗಿ ಹೆಚ್ಚಾಗಲಿದೆ.




ಕನ್ನಡವನ್ನೇ ಮಾತನಾಡಿ ಎಂದು ಹೇಳುವುದಿಲ್ಲ, ಕನ್ನಡವನ್ನು ಮಾತನಾಡಿ ಎಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ಉಳಿದ ಭಾಷೆಯನ್ನು ಕಲಿಯೋಣ, ಕಲಿಸೋಣ. ಆದರೆ ಮೊದಲಿಗೆ ಕನ್ನಡ ಭಾಷೆಯನ್ನು ಮಾತನಾಡೋಣ, ಬಳಸೋಣ. ಇದೇನು ದೊಡ್ಡ ವಿಷಯವೇ? ಭಾಷೆ ಬಳಸದಿದ್ದರೆ ಭಾಷೆ ಬಗ್ಗೆ ಅಭಿಮಾನ ಇರುವುದಿಲ್ಲ ಎಂದು ಅರ್ಥವೇ? ಎಂಬ ಪ್ರಶ್ನೆ ಕೇಳುವವರಿಗೆ – ನಿಮಗೆ ತಿಳಿದಿರಲಿ ಸಣ್ಣ ರಂಧ್ರದಿಂದಲೇ ಬೃಹತ್ ಹಡಗು ಮುಳುಗುವುದು.ಇದೇ ತರಹ ಸಣ್ಣ ಪುಟ್ಟ ನಿರ್ಲಕ್ಷ್ಯದಿಂದಲೇ ಭಾಷೆ ಅವನತಿ ಹೊಂದುವುದು.ಆ ತರಹದ ಸಂದರ್ಭ ಉಂಟಾಗದಿರಲು ಕನ್ನಡವನ್ನು ಬಳಸೋಣ,ಹೆಚ್ಚೆಚ್ಚು ಮಾತನಾಡುವುದನ್ನು ಕಲಿಯೋಣ.ಇದರಿಂದ ಭಾಷೆಯ ಮೇಲೆ ಒಲವನ್ನು ಉಳಿದ ಭಾಷಿಗರಲ್ಲಿಯೂ ಮೂಡಿಸಲು ಸಾಧ್ಯವಾಗಬಹುದು.

### ಕನ್ನಡಿಗರು ಮೊದಲಿಗೆ ಕನ್ನಡದವರಾಗಬೇಕು

ಕನ್ನಡ ಪತ್ರಿಕೆಗಳನ್ನು ಕೊಂಡು ಓದುವ, ಕನ್ನಡ ಸಿನಿಮಾಗಳನ್ನು ನೋಡುವ, ಕನ್ನಡ ಪುಸ್ತಕಗಳನ್ನು ಓದುವ ಮೂಲಕ ಕನ್ನಡವನ್ನು ಬಳಸುವ ಕೆಲಸವನ್ನು ಕನ್ನಡಿಗರು ಮೊದಲು ಮಾಡಬೇಕು. ಮೊದಲಿಗೆ ಕನ್ನಡದವರು ಕನ್ನಡಿಗರಾಗಬೇಕು. ಇಂದು ನಮ್ಮ ಭಾಷೆಯಲ್ಲಿ ಕಲಿತರೆ ಉದ್ಯೋಗಾವಕಾಶಗಳು ಕಡಿಮೆ ಎಂಬ ಕಾರಣಕ್ಕೋ, ಹೆಚ್ಚು ಭಾಷೆ ಕಲಿತರೆ ಹೆಚ್ಚು ಅವಕಾಶಗಳು ಸಿಗುತ್ತದೆ ಎಂಬ ಕಾರಣಕ್ಕೋ ನಮ್ಮ ಭಾಷೆಯನ್ನು ನಿರ್ಲಕ್ಷಿಸುವ ಸನ್ನಿವೇಶ ನಿರ್ಮಾಣವಾಗುತ್ತಿದೆ.ಈ ಮನೋಧೋರಣೆ ಮೊದಲಿಗೆ ಬದಲಾಗಬೇಕು. ಕನ್ನಡದ ಸಾಹಿತಿ ಹಾ.ಮಾ.ನಾಯಕರು ಹೇಳಿರುವಂತೆ ಕನ್ನಡ ನೆಲದಲ್ಲಿ ಕನ್ನಡವೇ ಪ್ರಥಮ, ಪ್ರಧಾನ ಭಾಷೆಯಾಗಿರಬೇಕು. ಕನ್ನಡವನ್ನು ಬಳಸುವ, ಮಾತನಾಡುವ ಕೆಲಸವಾಗಬೇಕು.

ನಮ್ಮಲ್ಲಿ ಕನ್ನಡ ಭಾಷೆಯಲ್ಲಿ ಮಾತನಾಡಿದರೆ ನಮ್ಮನ್ನು ದಡ್ಡರೆಂದು ತಿಳಿದುಕೊಳ್ಳುವರು ಎಂದು ಎಷ್ಟೋ ವಿದ್ಯಾವಂತರ ಧೋರಣೆಯಾಗಿದೆ. ಅಂತಹವರಿಗೆ ಒಂದು ಕಿವಿಮಾತು–ಭಾಷೆ ಎಂದರೆ ಜ್ಞಾನ ಅಲ್ಲ, ಭಾಷೆ ಕೇವಲ ಸಂವಹನ ಮಾಧ್ಯಮ.ನಮ್ಮ ಅಭಿಪ್ರಾಯಗಳನ್ನು ಮತ್ತೊಬ್ಬರಿಗೆ ತಿಳಿಸಲು ಇರುವ ಸಂವಹನ ಮಾಧ್ಯಮವೇ ಭಾಷೆ. ಇದನ್ನು ಮೊದಲು ನಾವು ತಿಳಿದುಕೊಳ್ಳಬೇಕು. (Language itself is not knowledge; it is merely a medium of communication. Language is the means through which we express our opinions to others.) ಈ ಸತ್ಯವನ್ನು ಅರ್ಥ ಮಾಡಿಕೊಂಡಾಗ ಮಾತ್ರ ಭಾಷೆಯ ಮೇಲೆ ಗೌರವ ಮೂಡಲು ಸಾಧ್ಯ.

### ಕನ್ನಡ ಭಾಷೆ ಅನ್ನದ ಭಾಷೆಯಾಗಬೇಕು

ಕನ್ನಡ ಮಾಧ್ಯಮಕ್ಕಿಂತ ಆಂಗ್ಲ ಮಾಧ್ಯಮದಲ್ಲಿ ಓದಿಸಲು ಪೋಷಕರಾಗಲೀ, ವಿದ್ಯಾರ್ಥಿಗಳಾಗಲೀ ತವಕಿಸುವುದಕ್ಕೆ ಮೂಲ ಕಾರಣ ಆಂಗ್ಲ ಭಾಷೆಯನ್ನು ಕಲಿತರೇ ಹೆಚ್ಚು ಉದ್ಯೋಗಾವಕಾಶಗಳು ಸಿಗುತ್ತದೆ. ಜಗತ್ತಿಗೆ ನಮ್ಮನ್ನು ನಾವು ತೆರೆದುಕೊಳ್ಳಲು ಸಾಧ್ಯವಿದೆ ಎಂಬ ಪರಿಸ್ಥಿತಿ ನಿರ್ಮಾಣವಾಗಿರುವುದು. ಇಂತಹದ್ದೇ ಸನ್ನಿವೇಶ ಕನ್ನಡ ಭಾಷೆಯನ್ನು ಕಲಿಯುವುದರಿಂದಲೂ ಸಾಧ್ಯ ಎಂಬ ಸ್ಥಿತಿಗೆ ತಲುಪಬೇಕು.ಹಾಗೇ ಆಗಬೇಕೆಂದರೆ ಮೊದಲು ಕನ್ನಡ ಅನ್ನದ ಭಾಷೆಯಾಗಬೇಕು.ಆಗ ಮಾತ್ರ ಕನ್ನಡವನ್ನು ಕಲಿಯಲು,ಕಲಿಸಲು ಜಾಗೃತಿ ಮೂಡಿಸಲು ಸಾಧ್ಯವಾಗುತ್ತದೆ.

ತಮಿಳುನಾಡಿನಲ್ಲಿ ರಾಜಕಾರಣಿಯಾಗುವಂತಹವರಿಗೆ ತಮಿಳಿನ ಹಳೆಯ ಕೃತಿ ತಿರುಕ್ಕುರಳ್‌ನ ಕನಿಷ್ಠ ಐದು ಪದ್ಯಗಳಾದರೂ ತಿಳಿದಿರುತ್ತದೆ. ಆದರೆ ನಮ್ಮಲ್ಲಿ ಕನ್ನಡದ ಮೊದಲ ಕೃತಿ ಕವಿರಾಜಮಾರ್ಗ ಎಂದಾಗಲೀ, ಕನ್ನಡದ ಮೊದಲ ಗದ್ಯಕೃತಿ ವಡ್ಡಾರಾಧನೆ ಎಂದಾಗಲೀ, ಕನ್ನಡದ ಆದಿಮಹಾಕವಿ ಪಂಪ ಎಂದಾಗಲೀ ಎಷ್ಟು ರಾಜಕಾರಣಿಗಳಿಗೆ ಗೊತ್ತು? ಬೆರಳೆಣಿಕೆಯಷ್ಟೇ ಎಂಬ ಉತ್ತರ ಬರಬಹುದೇನೋ?

ಇನ್ನೂ ಕನ್ನಡ ಸಂಘಟನೆಗಳು ಭಾಷೆಯ ವಿಚಾರದಲ್ಲಿ ಅಪಮಾನಗಳಾದ ಸಂದರ್ಭದಲ್ಲಿ ಕೈಗೊಳ್ಳುವ ಹೋರಾಟ, ನಾಡು ನುಡಿಗಾಗಿ ಶ್ರಮಿಸುವ ಹಾದಿ ಪ್ರಶಂಸನೀಯವಾದುದು. ಆದರೆ ಅದಕ್ಕಿಂತಲೂ ಮುಖ್ಯವಾಗಿ ಅವರು ಗಮನಿಸಬೇಕಾದದ್ದು ಕನ್ನಡ ಭಾಷೆಯನ್ನು ಮತ್ತಷ್ಟು ಜಾಗೃತಗೊಳಿಸುವಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಕನ್ನಡ ಭಾಷೆ ಓದಲು ಪ್ರೇರೇಪಿಸುವ, ಪ್ರೋತ್ಸಾಹ ನೀಡುವ ಕೆಲಸ ಮಾಡಬೇಕು. ಕನ್ನಡದಲ್ಲಿ ಓದಿ ಸಾಧನೆ ಮಾಡಿದವರನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ಶಾಲಾ ಹಂತದಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಭಾಷೆಯಾಗಿ ತೆಗೆದುಕೊಂಡು ಓದುವಂತೆ, ಪದವಿ ಹಂತದಲ್ಲಿ ಕನ್ನಡ ಭಾಷೆಯನ್ನು ಐಚ್ಛಿಕವಾಗಿ ತೆಗೆದುಕೊಂಡು ಓದಲು ಸಹಾಯವಾಗುವಂತಹ ವಾತಾವರಣ ನಿರ್ಮಿಸುವಂತೆ ಮಾಡಬೇಕು. ಮುಖ್ಯವಾಗಿ ಸರ್ಕಾರಿ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಮೊದಲ ಆದ್ಯತೆ ನೀಡುವಂತಾಗಬೇಕು. ಕನ್ನಡ ಶಿಕ್ಷಕರ ನೇಮಕಾತಿ ನಡೆದು ದಶಕಗಳೇ ಆಗಿವೆ. ಮುಖ್ಯವಾಗಿ 6ರಿಂದ 8ನೇ ತರಗತಿಯ ಶಿಕ್ಷಕರ ನೇಮಕಾತಿಯಲ್ಲಿ ಕನ್ನಡ ಶಿಕ್ಷಕರ ನೇಮಕಾತಿ ನಡೆದಿಲ್ಲ. ಸಮಾಜ ವಿಜ್ಞಾನವನ್ನು ಓದಿದ ಶಿಕ್ಷಕರೊಂದಿಗೆ ಕನ್ನಡವನ್ನು ಓದಿದವರು ಪೈಪೋಟಿ ನಡೆಸಬೇಕಾಗಿದೆ. ಇಂತಹ ಸನ್ನಿವೇಶಗಳನ್ನು ಸರ್ಕಾರದ ಗಮನಕ್ಕೆ ತಂದು ಹೆಚ್ಚು ನೇಮಕಾತಿಗಳನ್ನು ಮಾಡುವ, ಆ ಮೂಲಕ ಕನ್ನಡವನ್ನು ಕಲಿಯುವುದಕ್ಕೆ ಪ್ರೇರೇಪಿಸುವ ಕಾರ್ಯ ನಡೆಯಬೇಕಾಗಿದೆ. ಇದು ಕೇವಲ ಕನ್ನಡ ಸಂಘಟನೆಗಳಿಂದ ಆಗಬೇಕಾದ ಕೆಲಸವಲ್ಲ, ಪ್ರತಿಯೊಬ್ಬ ಕನ್ನಡಿಗರಿಂದಲೂ ಆಗಲೇಬೇಕಾದ ಕೆಲಸ.

ಎಲ್ಲಿವರೆಗೆ ಕನ್ನಡ ಭಾಷೆ ಅನ್ನದ ಭಾಷೆಯಾಗಿ ಬದಲಾಗುವುದಿಲ್ಲವೋ ಅಲ್ಲಿವರೆಗೂ ಭಾಷೆಯ ಮೇಲೆ ಅಪಮಾನ, ಅವಮಾನಗಳಾವುದು ಮುಂದುವರೆಯುತ್ತಲೇ ಇರುತ್ತದೆ. ಆದ್ದರಿಂದ ಕನ್ನಡ ಕಲಿತರೆ ಹೆಚ್ಚು ಸದಾವಕಾಶಗಳು ಸಿಗುತ್ತದೆಂಬ ವಾತಾವರಣವನ್ನು ಕಲ್ಪಿಸಬೇಕಿದೆ. ಈ ವಾತಾವರಣ ನಿರ್ಮಾಣವಾದರೆ ಕನ್ನಡದಲ್ಲಿ ಓದುವವರು, ಕನ್ನಡ ಮಾಧ್ಯಮಕ್ಕೆ ಸೇರುವವರ, ಕನ್ನಡ ಸಾಹಿತ್ಯ ಓದುವವರ ಸಂಖ್ಯೆಯು ಗಣನೀಯವಾಗಿ ಹೆಚ್ಚಾಗಲಿದೆ.

2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶದಲ್ಲಿ ಪ್ರಥಮ ಭಾಷೆ ಕನ್ನಡದಲ್ಲಿಯೇ ಸುಮಾರು 5986 ಮಂದಿ ವಿದ್ಯಾರ್ಥಿಗಳು ಅನುತ್ತೀರ್ಣವಾಗಿರುವ ಸುದ್ದಿಯನ್ನು ಓದಿ ಆತಂಕವಾಯಿತು. ಕನ್ನಡ ನಾಡಿನಲ್ಲಿ ಕನ್ನಡ ಭಾಷೆಯೇ ಕಬ್ಬಿಣದ ಕಡಲೆಯಾಗಿ ಮಾರ್ಪಾಡಾದರೆ ಏನು ಗತಿ? ಕನ್ನಡದ ಮೇಲಿನ ಈ ನಿರ್ಲಕ್ಷ್ಯಕ್ಕೆ ಮುಖ್ಯ ಕಾರಣ, ಕನ್ನಡ ತಾನೇ ಓದಿದರೂ, ಓದದಿದ್ದರೂ ಒಂದೇ ಎಂಬ ಉದಾಸೀನತೆ. ಇದಕ್ಕೆ ಮುಖ್ಯ ಕಾರಣ ಕನ್ನಡ ಅನ್ನದ ಭಾಷೆಯಾಗಿಲ್ಲದಿರುವುದು. ಕನ್ನಡ ಅನ್ನದ ಭಾಷೆಯಾಗಿ ಬದಲಾದರೆ ಆಗ ಖಂಡಿತವಾಗಿ ಕನ್ನಡವನ್ನು ಓದುವವರ, ಬಳಸುವವರ ಸಂಖ್ಯೆ ಹೆಚ್ಚಾಗುತ್ತದೆ

ಉಳಿದ ಭಾಷೆಗೆ ಹೋಲಿಕೆ ಮಾಡಿ ನೋಡಿದರೆ ಕನ್ನಡ ಭಾಷೆಗೆ ಮೊದಲಿನಿಂದಲೂ ಹೆಚ್ಚು ಒತ್ತಡಗಳು ಇದ್ದೇ ಇವೆ. ಮೊದಲಿಗೆ ಸಂಸ್ಕೃತದ ಪ್ರಭಾವ ಹೆಚ್ಚಿತ್ತು. ಈಗ ಇಂಗ್ಲಿಷ್ ಭಾಷೆಯ ಪ್ರಭಾವ ಹೆಚ್ಚಾಗುತ್ತಿದೆ. ಎಂತಹ ಸಂದರ್ಭ, ಸನ್ನಿವೇಶಗಳು ಎದುರಾದಾಗಲೂ ಕನ್ನಡ ಭಾಷೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಸಾರ್ವಭೌಮ ಭಾಷೆಯಾಗಿಯೇ ಉಳಿದುಕೊಂಡು ಬಂದಿರುವುದು ನಮ್ಮ ಭಾಷೆಗಿರುವ ಅತೀ ದೊಡ್ಡ ಶಕ್ತಿಯಾಗಿದೆ ಎಂದೇ ಹೇಳಬಹುದು. ಇಂತಹ ಸಮೃದ್ಧವಾದ ಭಾಷೆಯಲ್ಲಿ ಬರೆದು ಕನ್ನಡವನ್ನು ಮತ್ತಷ್ಟು, ಮಗದಷ್ಟು ಎತ್ತರಕ್ಕೆ ಕೊಂಡೊಯ್ಯುವ ಕೆಲಸವನ್ನು ಹಲವು ಸಾಹಿತಿಗಳು ಮಾಡಿದ್ದಾರೆ. ಸರ್ವಶ್ರೇಷ್ಠ ಸಾಹಿತಿಗಳನ್ನು ಕಂಡ ನಾಡು ಕನ್ನಡ ನಾಡು, ಅವರ ಕೊಡುಗೆಗಳಿಂದ ಎಂಟು ಜ್ಞಾನಪೀಠ ಪ್ರಶಸ್ತಿಗಳು, ಎರಡು ಸರಸ್ವತಿ ಸನ್ಮಾನ್ ಪ್ರಶಸ್ತಿಗಳು ದೊರೆತಿವೆ, ಹಲವು ಸಾಹಿತಿಗಳ ಶ್ರಮದ ಫಲ ನಮ್ಮ ಜೀವ ಭಾಷೆ ಕನ್ನಡ ಭಾಷೆಯಾಗಿ ಉಳಿದು ಬಂದಿದೆ.

ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೇ ಎಂಬ ವಚನಕಾರರ ಮಾತಿನಂತೆ ಉನ್ನತ ಸ್ಥಾನದಲ್ಲಿರುವ ಕನ್ನಡ ಭಾಷೆಗೆ ಯಾರು ಕೂಡ ಕೆಡುಕುಂಟು ಮಾಡಲು ಪ್ರಯತ್ನಿಸಿದಷ್ಟು ವಿಶಾಲವಾದ ಗುಣವನ್ನು ಹೊಂದಿರುವ ಕನ್ನಡಿಗರು ಅಂತಹವರಿಗೆ ಸರಿಯಾದ ಪಾಠವನ್ನೇ ಕಲಿಸುವರು. ಎಲ್ಲಿಯವರೆಗೆ ಸ್ವಾಭಿಮಾನದ ಗುಣವುಳ್ಳ ಕನ್ನಡಿಗರು, ಸ್ವಚ್ಛ ಮನಸ್ಸಿನ ಸಹೃದಯ ಕನ್ನಡಿಗರು ಇರುವರೋ ಅಲ್ಲಿಯವರೆಗೂ ಕನ್ನಡತನಕ್ಕೆ, ಕನ್ನಡ ಭಾಷೆಗೆ ಯಾರಿಂದಲೂ ಏನೂ ಮಾಡಲಾಗುವುದಿಲ್ಲ. ಕನ್ನಡ ಕೇವಲ ಒಂದು ಭಾಷೆಯಲ್ಲ ಅದು ನಮ್ಮ ಅಂತರಂಗದ ಜೀವಧಾತು. ಅನ್ನದ ಭಾಷೆಯಾಗಲಿ, ಅಂತಃಕರಣದ ನುಡಿಯಾಗಲಿ, ಕರುಳು ರಸಬಳ್ಳಿಯಾಗಲೀ ಎಂಬುದು ನಮ್ಮ ಅಭಿಲಾಷೆ.

**ಕನ್ನಡ ಉಳಿಸಿ, ಕನ್ನಡ ಬೆಳೆಸಿ ಎಂಬ ಮಾತನ್ನಾಡಲಾರೆ**
**ಕನ್ನಡ ಉಳಿದಿದೆ, ಕನ್ನಡ ಬೆಳೆದಿದೆ ಈಗ ಕನ್ನಡ ಬಳಸಿ ಸಾಕು**
**ಆಗ ಸರ್ವಕಾಲಕ್ಕೂ ಸಾರ್ವಭೌಮವಾಗೇ ಉಳಿಯುವುದು"**

## ಭಾರತ್ ಕ್ಯಾನ್ಸರ್ ಹಾಸ್ಪಿಟಲ್‌ನಿಂದ ಬಾಯಿ ಕ್ಯಾನ್ಸರ್ ರಕ್ಷಣೆ ಅಭಿಯಾನಕ್ಕೆ ಚಾಲನೆ

ಮೈಸೂರು, ಮೇ 28– ಸಕಾಲಿಕ ಮತ್ತು ಪರಿಣಾಮಕಾರಿ ಉಪಕ್ರಮದಲ್ಲಿ ಭಾರತ್ ಹಾಸ್ಪಿಟಲ್ ಅಂಡ್ ಇನ್ಸ್ಟಿಟ್ಯೂಟ್ ಆಫ್ ಆಂಕಾಲಜಿಯು, ಮರ್ಕ್ ಸ್ಪೆಷಾಲಿಟೀಸ್ ಪ್ರೈವೇಟ್ ಲಿಮಿಟೆಡ್ ಸಹಯೋಗದಲ್ಲಿ ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ 'ಬಾಯಿ ಕ್ಯಾನ್ಸರ್ ರಕ್ಷಣೆಗೆ ಎರಡು ನಿಮಿಷಗಳ ಕ್ರಮವನ್ನು #ಆಕ್ಟ್ ಎಗೇನ್ಸ್ಟ್ ಓರಲ್ ಕ್ಯಾನ್ಸರ್ ಹ್ಯಾಷ್‌ಟ್ಯಾಗ್‌ನಲ್ಲಿ ಪ್ರಕಟಿಸಿದೆ.

ಈ ದೇಶವ್ಯಾಪಿ ಅಭಿಯಾನವು ವ್ಯಕ್ತಿಗಳಿಗೆ ಸದಾ ಲಭ್ಯವಿರುವ ಕನ್ನಡಿ ಬಳಸಿ ತ್ವರಿತ ಸ್ವಯಂ–ಪರೀಕ್ಷೆ ಮಾಡಿಕೊಳ್ಳಲು ಉತ್ತೇಜಿಸುತ್ತದೆ.

ಜನರಿಗೆ ಬಿಳಿ ಅಥವಾ ಕೆಂಪು ಕಲೆಗಳು, ಗುಣವಾಗದ ಅಲ್ಸರ್‌ಗಳು, ಸತತ ಊತ, ಧ್ವನಿ ಬದಲಾವಣೆಗಳು ಅಥವಾ ವಿವರಿಸಲಾಗದ ರಕ್ತಸ್ರಾವದ ಮುನ್ನೆಚ್ಚರಿಕೆ ಸೂಚನೆಗಳನ್ನು ಗಮನಿಸಲು ಸಲಹೆ ನೀಡಲಾಗುತ್ತದೆ. ಇದರ ಪ್ರಮುಖ ಸಂದೇಶವೆಂದರೆ: ಭಾವಿಸಿ, ನೋಡಿರಿ ಮತ್ತು ಕ್ರಮ ತೆಗೆದುಕೊಳ್ಳಿರಿ. ಕನ್ನಡಿಯ ಮುಂದೆ ಕೇವಲ ಎರಡು ನಿಮಿಷಗಳು ಜೀವ ಉಳಿಸಬಲ್ಲದು.




ಭಾರತ್ ಕ್ಯಾನ್ಸರ್ ಆಸ್ಪತ್ರೆಯ ವತಿಯಿಂದ 'ಬಾಯಿ ಕ್ಯಾನ್ಸರ್ ರಕ್ಷಣೆ' ಅಭಿಯಾನ ನಡೆಯಿತು.

ಈ ಅಭಿಯಾನ ಪ್ರಾರಂಭದ ಸಮಯದಲ್ಲಿ ಡಾ.ವೈ.ಎಸ್.ಮಾಧವಿ (ಕನ್ಸಲ್ಟೆಂಟ್ ರೇಡಿಯೇ ಷನ್ ಆಂಕಾಲಜಿಸ್ಟ್ ಅಂಡ್ ಮೆಡಿಕಲ್ ಸೂಪರಿಂಟೆಂಡೆಂಟ್), ಡಾ.ವಿಜಯ್‌ಕುಮಾರ್ (ಸೀನಿಯರ್ ಸರ್ಜಿಕಲ್ ಆಂಕಾಲಜಿಸ್ಟ್ ಮತ್ತು ರೊಬಿಟಿಕ್ ಸರ್ಜನ್), ಡಾ.ಶ್ರೀನಿವಾಸ್ (ಸೀನಿಯರ್ ಕನ್ಸಲ್ಟೆಂಟ್ ಮೆಡಿಕಲ್ ಆಂಕಾಲಜಿಸ್ಟ್), ಡಾ.ವಿನಯ್ ಕುಮಾರ್ ಮುತ್ತಗಿ (ಸೀನಿಯರ್ ಕನ್ಸಲ್ಟೆಂಟ್ ರೇಡಿಯೇಷನ್ ಆಂಕಾಲಜಿಸ್ಟ್), ಡಾ.ರಕ್ಷಿತ್ ಶೃಂಗೇರಿ (ಸರ್ಜಿಕಲ್ ಆಂಕಾಲಜಿಸ್ಟ್ ಅಂಡ್ ರೊಬೊಟಿಕ್ ಸರ್ಜನ್), ಡಾ.ಅಭಿಲಾಷ್ (ಕನ್ಸಲ್ಟೆಂಟ್ ಮೆಡಿಕಲ್ ಆಂಕಾಲಜಿಸ್ಟ್) ಮತ್ತು ಶ್ರೀ ಗೌತಮ್ ಧಮೇರಿಯಾ (ಚೀಫ್ ಆಪರೇಟಿಂಗ್ ಆಫೀಸರ್) ಉಪಸ್ಥಿತರಿದ್ದರು.

ತಂಬಾಕು ಹಾಗೂ ಮದ್ಯಪಾನದಿಂದ ಬಾಯಿ ಕ್ಯಾನ್ಸರ್ ಹೆಚ್ಚಳ ಕಾಣುತ್ತಿದೆ. ಸರಳ, ನಿಯಮಿತ ಸ್ವಯಂ–ಪರೀಕ್ಷೆಯು ಈ ರೋಗಲಕ್ಷಣಗಳನ್ನು ಮುಂಚೆಯೇ ಕಂಡುಕೊಳ್ಳಲು ಮತ್ತು ಫಲಿತಾಂಶಗಳನ್ನು ಸುಧಾರಿಸಲು ನೆರವಾಗುತ್ತದೆ ಎಂದು ಡಾ.ವೈ.ಎಸ್.ಮಾಧವಿ ಹೇಳಿದರು.

ಭಾರತದಲ್ಲಿ ತಲೆ ಮತ್ತು ಕುತ್ತಿಗೆ ಕ್ಯಾನ್ಸರ್‌ಗಳು ಗಮನಾರ್ಹ ಪ್ರಮಾಣ ಹೊಂದಿವೆ. ದುಃಖದ ವಿಷಯವೆಂದರೆ ಬಹಳ ಮುಂದುವರಿದ ಹಂತದಲ್ಲಿ ಬಹಳಷ್ಟು ರೋಗಿಗಳಲ್ಲಿ ರೋಗಪತ್ತೆಯಾಗುತ್ತದೆ. ಅರಿವು ಮತ್ತು ಪ್ರಾರಂಭಿಕ ಪತ್ತೆ ನಮ್ಮ ಅತ್ಯಂತ ಸದೃಢ ಸಾಧನಗಳು ಎಂದು ಡಾ.ವಿನಯ್ ಕುಮಾರ್ ತಿಳಿಸಿದರು.

ಬಾಯಿ ಕ್ಯಾನ್ಸರ್ ಭಾರತೀಯರಲ್ಲಿ ಸಾಮಾನ್ಯವಾಗಿ ಕಾಣುವ ಕ್ಯಾನ್ಸರ್‌ಗಳಲ್ಲಿ ಒಂದಾಗಿದೆ. ಜನರು ಸಾಮಾನ್ಯವಾಗಿ ಗುಣವಾಗದ ಬಾಯಿ ಹುಣ್ಣು ಅಥವಾ ಧ್ವನಿ ಬದಲಾವಣೆಗಳನ್ನು ನಿರ್ಲಕ್ಷಿಸುತ್ತಾರೆ. ಈ ಉಪಕ್ರಮವು ಪ್ರತಿಯೊಬ್ಬರಿಗೂ ಕನ್ನಡಿಯ ಮೂಲಕ ಪರೀಕ್ಷೆ ತ್ವರಿತ ಮತ್ತು ಮುಖ್ಯ ಎಂದು ನೆನಪಿಸುತ್ತದೆ ಎಂದು ಡಾ.ಶ್ರೀನಿವಾಸ್ ಕೆ.ಜಿ. ಹೇಳಿದರು.

ಕ್ಯಾನ್ಸರ್ ಮುಂಚೆಯೇ ಪತ್ತೆಯಾದರೆ ರೇಡಿಯೇಷನ್ ಥೆರಪಿಯು ಅತ್ಯಂತ ಪರಿಣಾಮಕಾರಿ. ಈ ಅಭಿಯಾನವು ಸಕಾಲಿಕವಾಗಿ ಕ್ರಮ ಕೈಗೊಳ್ಳುವ ಪ್ರಾಮುಖ್ಯತೆಯನ್ನು ಎತ್ತಿ ತೋರುತ್ತದೆ ಎಂದು ಡಾ.ವಿನಯ್‌ಕುಮಾರ್ ಮುತ್ತಗಿ ಹೇಳಿದರು.

ಬಾಯಿ ಕ್ಯಾನ್ಸರ್ ಬಹಳ ಸಣ್ಣದಾಗಿ ಕಾಣಿಸುವ ಸೂಚನೆಗಳಿಂದ ಪ್ರಾರಂಭವಾಗುತ್ತದೆ. ಕನ್ನಡಿಯು ಶಕ್ತಿಯುತ ಸಹವರ್ತಿಯಾಗಿದೆ. ಪ್ರತಿ ತಿಂಗಳು ಕೇವಲ 2 ನಿಮಿಷ ಗಮನಿಸುವುದು ಈ ಸೂಚನೆಗಳನ್ನು ತಡವಾಗುವ ಮುನ್ನ ಕಂಡುಕೊಳ್ಳಲು ನೆರವಾಗುತ್ತದೆ ಎಂದು ಡಾ.ರಕ್ಷಿತ್ ಶೃಂಗೇರಿ ಹೇಳಿದರು. ಈ ಉಪಕ್ರಮವು ಕ್ಯಾನ್ಸರ್ ತಡೆಯುವುದನ್ನು ಸರಳೀಕರಿಸುತ್ತದೆ. ಮಾಸಿಕ ಕನ್ನಡಿಯ ಪರೀಕ್ಷೆಯು ಜನರಿಗೆ ಅವರ ಆರೋಗ್ಯವನ್ನು ಸರಳವಾಗಿ ನಿಯಂತ್ರಿಸಲು ನೆರವಾಗುತ್ತದೆ ಎಂದು ಡಾ.ಅಭಿಲಾಷ್ ಹೇಳಿದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

# ವಿದೇಶಕ್ಕೆ ಶೂಟಿಂಗ್‌ಗೆ ತೆರಳಲು ಅನುಮತಿ ಕೋರಿ ದರ್ಶನ್ ಅರ್ಜಿ: ಮೇ 30ಕ್ಕೆ ಆದೇಶ ಕಾಯ್ದಿರಿಸಿದ ಕೋರ್ಟ್

ಬೆಂಗಳೂರು, ಮೇ 28– ಸಿನಿಮಾ ಶೂಟಿಂಗ್‌ಗಾಗಿ ವಿದೇಶಕ್ಕೆ ತೆರಳಲು ಅನುಮತಿ ಕೋರಿ ನಟ ದರ್ಶನ್ ಸಲ್ಲಿಸಿದ್ದ ಅರ್ಜಿ ವಿಚಾರಣೆಯ ಆದೇಶವನ್ನು ಕೋರ್ಟ್ ಮೇ 30 ಕ್ಕೆ ಕಾಯ್ದಿರಿಸಿದೆ.



ಇಂದು ಅರ್ಜಿ ವಿಚಾರಣೆ ನಡೆಸಿದ 64ನೇ ಸಿಸಿಎಚ್ ಕೋರ್ಟ್ ವಾದ–ಪ್ರತಿವಾದ ಆಲಿಸಿ ಮೇ 30ಕ್ಕೆ ಆದೇಶ ಕಾಯ್ದಿರಿಸಿದೆ. ಡೆವಿಲ್ ಸಿನಿಮಾ ಶೂಟಿಂಗ್‌ಗಾಗಿ ದುಬೈ ಮತ್ತು ಯೂರೋಪ್‌ಗೆ ತೆರಳಲು ಜೂನ್ 1ರಿಂದ ಜೂನ್ 25ರ ವರೆಗೆ ಅವಕಾಶಕ್ಕಾಗಿ ದರ್ಶನ್ ಮನವಿ ಸಲ್ಲಿಸಿದ್ದರು. ದರ್ಶನ್ ಅರ್ಜಿಗೆ ಎಸ್‌ಎಸ್‌ಪಿ ಆಕ್ಷೇಪಣೆ ಸಲ್ಲಿಸಿದ್ದರು. ದರ್ಶನ್ ವಿದೇಶಕ್ಕೆ ತೆರಳಿದರೆ ವಾಪಸ್ ಭಾರತಕ್ಕೆ ಬರುವುದು ಅನುಮಾನ. ಪ್ರಕರಣದ ವಿಚಾರಣೆ ನಡೆಯುತ್ತಿರುವುದರಿಂದ ವಿದೇಶಕ್ಕೆ ತೆರಳುವುದಕ್ಕೆ ಅನುಮತಿ ನೀಡದಂತೆ ಎಸ್‌ಪಿಪಿ ಕೋರ್ಟ್ ಮುಂದೆ ವಾದ ಮಂಡಿಸಿದರು. ವಾದ–ಪ್ರತಿವಾದ ಆಲಿಸಿದ ಕೋರ್ಟ್ ಆದೇಶವನ್ನು ಮೇ 30ಕ್ಕೆ ಕಾಯ್ದಿರಿಸಿದೆ. ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಆರೋಪವನ್ನು ದರ್ಶನ್ ಎದುರಿಸುತ್ತಿದ್ದಾರೆ. ಹಲವು ತಿಂಗಳುಗಳ ಜೈಲುವಾಸದ ಬಳಿಕ ದರ್ಶನ್‌ಗೆ ಕೋರ್ಟ್ ಜಾಮೀನು ನೀಡಿದೆ.

# ಅಮಾನತುಪಡಿಸಿದ್ದ ಮಾದಕ ವಸ್ತುಗಳ ನಾಶ



ಮೈಸೂರು, ಮೇ 28(ಆರ್‌ಕೆ)– ಮೈಸೂರಿನ ವಿವಿಧ ಠಾಣೆಗಳಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ಅಮಾನತುಪಡಿಸಿಕೊಂಡಿದ್ದ 19.80 ಲಕ್ಷ ರೂ. ಮೌಲ್ಯದ ಮಾದಕ ವಸ್ತುಗಳನ್ನು ಪೊಲೀಸರು ಇಂದು ವೈಜ್ಞಾನಿಕವಾಗಿ ನಾಶಪಡಿಸಿದರು.

ಮೈಸೂರು ತಾಲೂಕು, ಜಯಪುರ ಹೋಬಳಿ ಗುಜ್ಜೇಗೌಡನಪುರ ಗ್ರಾಮದ ಸರ್ವೆ ನಂಬರ್ 82ರ ಮೆ॥ ಜಿಪ್ಸ್ ಬಯೋಟೆಕ್‌ನ ಇನ್ಸಿನರೇಟರ್ ಘಟಕದಲ್ಲಿ 53 ಕೆಜಿ, 550 ಗ್ರಾಂ ಗಾಂಜಾ, 150 ಗ್ರಾಂ ಚೆರಸ್ ಅನ್ನು ಪರಿಸರ ಅಧಿಕಾರಿಗಳು, ಪಂಚಾಯ್ತಿದಾರರ ಸಮಕ್ಷಮ ನಾಶಪಡಿಸಲಾಯಿತು.

ಡ್ರಗ್ ಡಿಸ್ಪೋಸಲ್ ಸಮಿತಿ ಅಧ್ಯಕ್ಷರಾದ ಡಿಸಿಪಿ ಕೆ.ಎಸ್.ಸುಂದರ್ ರಾಜ್, ಸಿಸಿಬಿ ಎಸಿಪಿ ಮೊಹಮ್ಮದ್ ಶರೀಫ್ ರಾವ ತರ್, ಸಿಸಿಆರ್‌ಬಿ ಇನ್ಸ್‌ಪೆಕ್ಟರ್ ಮುಸ್ತಾಕ್ ಪಾಷ ಹಾಗೂ ಇತರ ಅಧಿಕಾರಿಗಳು ಈ ಸಂದರ್ಭ ಉಪಸ್ಥಿತರಿದ್ದರು.

# ಮೇ 31ರಂದು ಮೈಸೂರಲ್ಲಿ 'ಸಿತಾರ್ ಮಾಧುರ್ಯ– ಸಮೂಹ ಸಿತಾರ್ ವಾದನ'

ಮೈಸೂರು, ಮೇ 28(ಎಂಟಿವೈ)– ಮೈಸೂರಿನ ರಾಮಕೃಷ್ಣನಗರದಲ್ಲಿರುವ ರಮಾ ಗೋವಿಂದ ಕಲಾಮಂದಿರದಲ್ಲಿ ಮೇ 31ರಂದು ಸಂಜೆ 5.30ಕ್ಕೆ 'ಸಿತಾರ್ ಮಾಧುರ್ಯ– ಸಮೂಹ ಸಿತಾರ್ ವಾದನ್' ಹಾಗೂ 'ರಾಗ್ ಚಿಕಿತ್ಸಾ' ಪುಸ್ತಕ ಲೋಕಾರ್ಪಣಾ ಕಾರ್ಯಕ್ರಮ ಏರ್ಪಡಿಸಲಾಗಿದೆ.



ಸಿತಾರ್ ವಾದಕ ಡಾ.ಮೊಹಸಿನ್ ಖಾನ್

ಕಲಾ ಸಂವಹನ ಟ್ರಸ್ಟ್ ಆಯೋಜಿಸಿರುವ ಈ ಕಾರ್ಯಕ್ರಮದ ಸಾನಿಧ್ಯವನ್ನು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದು, ಮುಖ್ಯ ಅತಿಥಿಯಾಗಿ ಗಾಯಕಿ ವಿದೂಷಿ ಸಂಗೀತಾ ಕಟ್ಟಿ ಕುಲಕರ್ಣಿ, ಅಬಕಾರಿ ಜಂಟಿ ಆಯುಕ್ತ ಬಸವರಾಜ್ ಹಡಪದ್, ಬಿಬಿಎಂಪಿ ವಿಭಾ ಗೀಯ ಆಯುಕ್ತ ಡಾ.ಬಿ.ಸಿ.ಸತೀಶ್, ಕೃತಿಕಾರರೂ, ಸಿತಾರ್ ವಾದಕರೂ ಆದ ಉಸ್ತಾದ್ ಡಾ.ಮೊಹಸಿನ್ ಖಾನ್ ಪಾಲ್ಗೊಳ್ಳಲಿದ್ದು, ಕಲಾ ಸಂವಹನ ಟ್ರಸ್ಟ್‌ನ ಅಧ್ಯಕ್ಷೆ ರಾಜೇಶ್ವರಿ ವಸ್ತ್ರದ್ ಅಧ್ಯಕ್ಷತೆ ವಹಿಸಲಿದ್ದಾರೆ.

ಇದೇ ವೇಳೆ ಸಭಾ ಕಾರ್ಯಕ್ರಮಕ್ಕೂ ಮುನ್ನ ಸಿತಾರ್ ವಾದಕ ಡಾ.ಮೊಹಸಿನ್ ಖಾನ್ ಹಾಗೂ ಶಿಷ್ಯ ವೃಂದದಿಂದ ಸಮೂಹ ಸಿತಾರ್ ವಾದನದ ಕಾರ್ಯಕ್ರಮ ಜರುಗಲಿದೆ. ಉ.ನಿಸಾರ್ ಅಹ್ಮದ್, ಪಂ.ಚಿನ್ಮಯ್ ನಾಮಣ್ಣವರ್, ಚಾರುದತ್ ಮಹಾರಾಜ್ ಅವರು ಸಹಕಲಾವಿದರಾಗಿ ಪಾಲ್ಗೊಳ್ಳಲಿದ್ದಾರೆ. ಸಭಾ ಕಾರ್ಯಕ್ರಮದ ನಂತರ ಗಾಯಕಿ ವಿದೂಷಿ ಸಂಗೀತಾ ಕಟ್ಟಿ ಕುಲಕರ್ಣಿ ಅವರಿಗೆ ಗಾಯನ ಕಾರ್ಯಕ್ರಮ ನಡೆಯಲಿದೆ. ತಬಲಾದಲ್ಲಿ ಶ್ರೀಧರ್ ಮಾಂಡ್ರೆ, ಹಾರ್ಮೋನಿಯಂನಲ್ಲಿ ಸತೀಶ್ ಕೊಳ್ಳಿ ಸಹಕಾರ ನೀಡಲಿದ್ದಾರೆ.

**ಏಳನೆ ತಲೆಮಾರಿದ ಸಿತಾರ್ ವಾದಕ:** 1911ರಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ದರ್ಬಾರ್‌ನಲ್ಲಿ ಸಿತಾರ್ ನುಡಿಸಿದ್ದ, ಶ್ರೇಷ್ಠ ಸಿತಾರ್ ವಾದಕ ರಾಗಿ ಪ್ರಶಂಸೆಗೆ ಪಾತ್ರರಾಗಿದ್ದ ಉಸ್ತಾದ್ ರಹಮತ್ ಖಾನ್ ಅವರ ಮರಿ ಮೊಮ್ಮಗ ರಾಗಿರುವ ಉಸ್ತಾದ್ ಡಾ.ಮೊಹಸಿನ್ ಖಾನ್ ಅವರು ಮೈಸೂರಲ್ಲಿ ಕಲಾ ಸಂವಹನ ಟ್ರಸ್ಟ್ ಆಯೋಜಿಸಿರುವ ಸಿತಾರ್ ವಾದನ ಕಾರ್ಯಕ್ರಮದಲ್ಲಿ ಶಿಷ್ಯರೊಂದಿಗೆ ಸಿತಾರ್ ನುಡಿಸಲಿದ್ದಾರೆ. ಏಳನೇ ತಲೆಮಾರಿನ ಕಲಾವಿದರಾಗಿರುವ ಡಾ.ಮೊಹಸಿನ್ ಖಾನ್ ಯುರೋಪ್, ಜಪಾನ್, ಅಜರ್ಬೈಜಾನ್, ಈಜಿಪ್ಟ್, ನೇಪಾಳ, ರಷ್ಯಾ ಸೇರಿದಂತೆ ವಿವಿಧೆಡೆ ಸಿತಾರ್ ಕಚೇರಿ ನಡೆಸಿದ್ದಾರೆ. ಇದೀಗ ಮೈಸೂರಲ್ಲಿ ಸಿತಾರ್ ಕಲಿಸುವ ತರಗತಿ ನಡೆಸಲು ಉದ್ದೇಶಿಸಿದ್ದಾರೆ.

# ಶುಶ್ರೂಷಕರಿಗೆ ಫ್ಲಾರೆನ್ಸ್ ನೈಟಿಂಗೇಲ್ ಮಾದರಿ

## ಫ್ಲಾರೆನ್ಸ್ ನೈಟಿಂಗೇಲ್ ಜಯಂತಿ, ಅಂತರರಾಷ್ಟ್ರೀಯ ಶುಶ್ರೂಷಕರ ದಿನ ಆಚರಣೆ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮೈಸೂರು ನಿವೃತ್ತ ಶುಶ್ರೂಷಾಧಿಕಾರಿಗಳ ಸಂಘದ ವತಿಯಿಂದ ಆಯೋಜಿಸಿದ್ದ ಫ್ಲಾರೆನ್ಸ್ ನೈಟಿಂಗೇಲ್ ಜಯಂತಿ ಮತ್ತು ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಶುಶ್ರೂಷಕರಾಗಿ ಸೇವೆ ಸಲ್ಲಿಸಿದವರನ್ನು ಅಭಿನಂದಿಸಲಾಯಿತು.

ಮೈಸೂರು, ಮೇ28(ಜಿಎ)–ಶುಶ್ರೂಷಕರು ಕೇವಲ ಆರ್ಥಿಕವಾಗಿ ಮಾತ್ರವಲ್ಲ, ಅವರ ಸೇವೆಯೂ ಬಲಗೊಳ್ಳಬೇಕಿದೆ ಎಂದು ಸರ್ಕಾರಿ ಶುಶ್ರೂಕರ ಸಂಘದ ಮಾಜಿ ಅಧ್ಯಕ್ಷ ಜಿ.ಸಿದ್ದಯ್ಯ ಅಭಿಪ್ರಾಯಪಟ್ಟರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮೈಸೂರು ನಿವೃತ್ತ ಶುಶ್ರೂಷಾಧಿಕಾರಿಗಳ ಸಂಘದ ವತಿಯಿಂದ ಆಯೋಜಿಸಿದ್ದ ಫ್ಲಾರೆನ್ಸ್ ನೈಟಿಂಗೇಲ್ ಜಯಂತಿ ಮತ್ತು ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಫ್ಲಾರೆನ್ಸ್ ನೈಟಿಂಗೇಲ್ ಅವರು ಮಾಡಿದ ಸೇವೆ ವಿಶ್ವಕ್ಕೆ ಮಾದರಿಯಾಗಿದೆ. ಅವರು ಮೊದಲು ಸೇನಾ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿದರು. ನಂತರ ಬಡ್ತಿ ಪಡೆದುಕೊಂಡು ನರ್ಸಿಂಗ್ ಕ್ಷೇತ್ರಕ್ಕೆ ಕಾಲಿಟ್ಟು ಸಾಕಷ್ಟು ಕೊಡುಗೆ ನೀಡಿದ್ದಾರೆ. ಶುಶ್ರೂಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡವರು ಫ್ಲಾರೆನ್ಸ್ ನೈಟಿಂಗೇಲ್ ಅವರನ್ನು ಮಾದರಿಯಾಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇಂದು ನರ್ಸಿಂಗ್ ಕೋರ್ಸ್‌ನಲ್ಲಿ ವಿವಿಧ ಬಗೆಯ ವಿಭಾಗಗಳಿದ್ದು, ನಿಮ್ಮ ಕಾಯಕದಲ್ಲಿ ನಿಷ್ಠೆ, ಪ್ರಾಮಾಣಿಕತೆಯಿಂದ ಮಾಡಬೇಕು. ನರ್ಸ್‌ಗಳಿಗೆ ಮೊದಲು ಬಡ್ತಿ ನೀಡುತ್ತಿರಲಿಲ್ಲ. ಆದರೆ ಈಗ ಎಲ್ಲಾ ಆಸ್ಪತ್ರೆಯಲ್ಲಿ ನರ್ಸಿಂಗ್ ಸದಸ್ಯರ ಸಂಖ್ಯೆ ಹೆಚ್ಚಿಸಿದ್ದಾರೆ. ಅವರುಗಳಿಗೆ ಆರ್ಥಿಕಾಭಿವೃದ್ಧಿ ಆಗಿದೆ. ನನಗೆ ಇಂದು ಪಿಂಚಣಿ 80 ಸಾವಿರ ರೂ. ನೀಡುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಉತ್ತಮ ಸಂಬಳ ನೀಡುತ್ತಿದ್ದಾರೆ. ಇಂದು ನರ್ಸಿಂಗ್ ಕೆಲಸ ಮಾಡುತ್ತಿರುವವರಿಗೆ 1.50 ಲಕ್ಷ ರೂ. ಸಂಬಳ ಬರುತ್ತಿದ್ದು, ನರ್ಸಿಂಗ್ ಕ್ಷೇತ್ರ ಆರ್ಥಿಕವಾಗಿ ಬೆಳೆದಿದೆ ಎಂದರು.

ಇತ್ತೀಚೆಗೆ ನರ್ಸಿಂಗ್ ಕಾಲೇಜುಗಳು ಸ್ಥಾಪನೆಯಾಗುತ್ತಿದ್ದು, ಬಹಳಷ್ಟು ಆಸ್ಪತ್ರೆಯಲ್ಲಿ ನೇಮಕಾತಿ ಮಾಡಿಕೊಳ್ಳದ ಕಾರಣ ಕೆಲವು ಆಸ್ಪತ್ರೆಗಳಲ್ಲಿ ನರ್ಸ್‌ಗಳ ಕೊರತೆ ಇದ್ದು, ಇದರಿಂದ ಈಗಾಗಲೇ ಇರುವಂತಹ ನರ್ಸ್‌ಗಳಿಗೆ ಕೆಲಸದ ಒತ್ತಡ ಹೆಚ್ಚಾಗುತ್ತಿದೆ. ಈ ಸಮಸ್ಯೆಯಿಂದ ವಿದೇಶಕ್ಕೆ ತೆರಳುತ್ತಿದ್ದಾರೆ. ಸರ್ಕಾರದಿಂದ ನರ್ಸ್‌ಗಳಿಗೆ ಯಾವ ಸೌಲಭ್ಯ, ಸವಲತ್ತುಗಳಿಲ್ಲ. ಹಾಗಾಗಿ ನಾವೆಲ್ಲ ಒಗ್ಗಟ್ಟಾಗಿ ಆರ್ಥಿಕವಾಗಿ ಮಾತ್ರವಲ್ಲ ಸೇವೆಯನ್ನು ಬಲಪಡಿಸಬೇಕು ಎಂದು ತಿಳಿಸಿದರು.

**ಸೇನೆಗೆ ದೇಣಿಗೆ :** ನಮ್ಮ ರಕ್ಷಣೆ ಮಾಡುತ್ತಿರುವ ಸೈನಿಕರಿಗೆ ನಾವು ಇಲ್ಲಿಂದ ಸೇವೆ ಸಲ್ಲಿಸಬೇಕಿದೆ. ಸಂಘದ ವತಿಯಿಂದ ಏನಾದರೂ ನೀಡಿ ಎಂದ ಅವರು, ಒಂದು ಸಾವಿರ ರೂ. ನೀಡಿದರು. ನಂತರ ಕಾರ್ಯಕ್ರಮದಲ್ಲಿದ್ದ ಸಂಘದ ಎಲ್ಲಾ ಸದಸ್ಯರು ದೇಣಿಗೆ ನೀಡಿ ದೇಶಾಭಿಮಾನ ಮೆರೆದರು.


**ಅಭಿನಂದನೆ :** ಶುಶ್ರೂಷಕರಾಗಿ ಸೇವೆ ಸಲ್ಲಿಸಿ, ನಿವೃತ್ತರಾದ ಶೋಭಾ, ಜಸ್ಮೀಯಾ, ಚಂದ್ರಮ್ಮ, ಮುದ್ದುರಂಗಮ್ಮ, ವೆಂಕಟಮ್ಮ, ಜ್ಞಾನವೀಣೆ, ಲಕ್ಷ್ಮೀ , ಮಣಿದೇವಿ, ವಿದ್ಯಾ, ವಿನೋದಮ್ಮ, ಜಯಮ್ಮ,ಮೇರಿ ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಸ್ಥಾಪಕ ಅಧ್ಯಕ್ಷ ಡಾ.ಪಿ.ರಂಗಸ್ವಾಮಿ, ಗೌರವಾಧ್ಯಕ್ಷ ಕೆ.ಕೆ. ಕುಶಾಲಪ್ಪ, ಪ್ರಧಾನ ಕಾರ್ಯದರ್ಶಿ ಹೇಮಲತಾ, ಖಜಾಂಚಿ ಆಲೀಸ್ ಫ್ಲಾರೆನ್ಸ್ ಕ್ರಾಸ್ಟ, ನಿವೃತ್ತ ಶುಶ್ರೂಷಾಧಿಕಾರಿಗಳ ಸಂಘದ ಅಧ್ಯಕ್ಷೆ ಶಿವಮ್ಮ, ಗೋವಿಂದಾಚಾರಿ ಮತ್ತಿತರರು ಉಪಸ್ಥಿತರಿದ್ದರು.

# ಗುಲಾಂ ನಬಿ ಆಜಾದ್ ಆರೋಗ್ಯದಲ್ಲಿ ಏರುಪೇರು: ಕುವೈತ್‌ನಲ್ಲಿ ಆಸ್ಪತ್ರೆಗೆ ದಾಖಲು

ರಿಯಾದ್: ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಗುಲಾಂ ನಬಿ ಆಜಾದ್ ಆರೋಗ್ಯದಲ್ಲಿ ಏರುಪೇರಾಗಿದೆ. ಬಿಜೆಪಿ ಸಂಸದ ಬೈಜಯಂತ್ ಪಾಂಡಾ ನೇತೃತ್ವದ ನಿಯೋಗದಲ್ಲಿ ಆಜಾದ್ ಕುವೈತ್‌ಗೆ ತೆರಳಿದ್ದರು.

'ಆಪರೇಷನ್ ಸಿಂಧೂರ್' ಬಳಿಕ ಪಾಕಿಸ್ತಾನದ ಬಣ್ಣವನ್ನು ಜಗತ್ತಿನ ಮುಂದೆ ಬಯಲು ಮಾಡಲು ಗಲ್ಫ್ ರಾಷ್ಟ್ರಗಳಿಗೆ ಬಿಜೆಪಿ ಸಂಸದ ಬೈಜಯಂತ್ ಪಾಂಡಾ ನೇತೃತ್ವದ ಆಯೋಗ ಭೇಟಿ ನೀಡುತ್ತಿದೆ. ಕುವೈತ್‌ನಲ್ಲಿ ಆಜಾದ್ ಅವರ ಆರೋಗ್ಯ ಕೈಕೊಟ್ಟಿದ್ದು, ಆಸ್ಪತ್ರೆಗೆ ದಾಖಲಾಗಿದ್ದಾರೆ. ಆಜಾದ್ ಸದ್ಯ ವೈದ್ಯರ ಮೇಲ್ವಿಚಾರಣೆ ಯಲ್ಲಿದ್ದಾರೆ. ಸಂಸದ ಪಾಂಡಾ ಈ ಬಗ್ಗೆ ಮಾಹಿತಿ ನೀಡಿದ್ದಾರೆ.



ಸರ್ವಪಕ್ಷ ನಿಯೋಗದ ಪ್ರವಾಸದ ಮಧ್ಯದಲ್ಲಿ ಗುಲಾಂ ನಬಿ ಆಜಾದ್ ಅವರ ಆರೋಗ್ಯ ಹದಗೆಟ್ಟಿದ್ದು, ಆಸ್ಪತ್ರೆಗೆ ದಾಖಲಿಸಬೇಕಾಯಿತು. ಅವರ ಆರೋಗ್ಯ ಸ್ಥಿರವಾಗಿದ್ದು, ವೈದ್ಯಕೀಯ ಮೇಲ್ವಿಚಾರಣೆಯಲ್ಲಿದ್ದಾರೆ' ಎಂದಿದ್ದಾರೆ. ಬಹ್ರೇನ್ ಮತ್ತು ಕುವೈತ್‌ನಲ್ಲಿ ನಡೆದ ಸಭೆಯಲ್ಲಿ ನಬಿ ಭಾಗಿಯಾಗಿದ್ದರು. ಅವರ ಅನುಪಸ್ಥಿತಿಯಲ್ಲಿ ಸೌದಿ ಅರೇಬಿಯಾ ಮತ್ತು ಅಲ್ಜೀರಿಯಾದಲ್ಲಿ ಸಭೆ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ. ತಾಪಮಾನ ಹೆಚ್ಚಳದಿಂದ ಆರೋಗ್ಯದಲ್ಲಿ ವ್ಯತ್ಯಾಸವಾಗಿದೆ ಎಂದು ನಬಿ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಗುಲಾಂ ನಬಿ ಆಜಾದ್, ಕುವೈತ್‌ನಲ್ಲಿನ ತೀವ್ರ ಶಾಖದಿಂದಾಗಿ ನನ್ನ ಆರೋಗ್ಯದ ಮೇಲೆ ಪರಿಣಾಮ ಬೀರಿದ್ದರೂ, ದೇವರ ದಯೆಯಿಂದ ನಾನು ಚೆನ್ನಾಗಿದ್ದೇನೆ. ಎಲ್ಲಾ ಪರೀಕ್ಷೆಗಳ ಫಲಿತಾಂಶಗಳು ಸಾಮಾನ್ಯವಾಗಿವೆ. ನಿಮ್ಮ ಕಾಳಜಿ ಮತ್ತು ಪ್ರಾರ್ಥನೆಗಳಿಗೆ ಧನ್ಯವಾದಗಳು ಎಂದು ಬರೆದಿದ್ದಾರೆ.

# 72 ವರ್ಷದ ವೃದ್ಧೆಗೆ ಮದುವೆಯಾಗುವುದಾಗಿ ನಂಬಿಸಿ 57 ಲಕ್ಷ ರೂ ಪಡೆದು ವಂಚನೆ

ಥಾಣೆ, ಮೇ 28– ವ್ಯಕ್ತಿಯೊಬ್ಬರು ಮಹಾರಾಷ್ಟ್ರದ ಥಾಣೆ ಜಿಲ್ಲೆಯ 73 ವರ್ಷದ ಮಹಿಳೆಯೊಬ್ಬರನ್ನು ಮದುವೆಯಾಗುವುದಾಗಿ ನಂಬಿಸಿ 57 ಲಕ್ಷ ರೂ.ಗಳಿಗೂ ಹೆಚ್ಚು ಹಣ ಪಡೆದು ವಂಚಿಸಿದ ಆರೋಪವಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಡೊಂಬಿವ್ಲಿ ಪ್ರದೇಶದ ನಾನಾ ಶಂಕರ್‌ಶೇಠ್ ರಸ್ತೆಯಲ್ಲಿರುವ ವಸತಿ ಸೊಸೈಟಿಯ ನಿವಾಸಿಯಾಗಿರುವ ಸಂತ್ರಸ್ತೆ, ಪತ್ರಿಕೆಯಲ್ಲಿ ವೈವಾಹಿಕ ಜಾಹೀರಾತು ನೀಡಿದ್ದ 62 ವರ್ಷದ ವ್ಯಕ್ತಿಯನ್ನು ಸಂಪರ್ಕಿಸಿದ್ದಾರೆ. ಆ ವ್ಯಕ್ತಿ ಮಹಿಳೆಯ ವಿಶ್ವಾಸ ಗಳಿಸಿದ ನಂತರ ಪುಣೆಯಲ್ಲಿ ಮದುವೆ ಮತ್ತು ಶಾಂತಿಯುತ ಜೀವನ ನಡೆಸುವ ಭರವಸೆ ನೀಡಿದ್ದಾರೆ.

ಪುಣೆಯಲ್ಲಿ ಮನೆ ಖರೀದಿಸುವ ಉದ್ದೇಶ ಹೊಂದಿರುವುದಾಗಿ ಆ ವ್ಯಕ್ತಿ ಸಂತ್ರಸ್ತೆ ಮಹಿಳೆಗೆ ತಿಳಿಸಿದ್ದು, ಅದಕ್ಕಾಗಿ 35 ಲಕ್ಷ ರೂ.ಗಳನ್ನು ವರ್ಗಾಯಿಸುವಂತೆ ಮನವೊಲಿಸಿದ್ದಾರೆ. ಅಲ್ಲದೆ ಆಕೆಯನ್ನು ನಂಬಿಸಲು ನಕಲಿ ರಶೀದಿಗಳು ಮತ್ತು ನಕಲಿ ಆಸ್ತಿ ದಾಖಲೆಗಳನ್ನು ನೀಡಿದ್ದಾರೆ ಎಂದು ಅಧಿಕಾರಿ ಹೇಳಿದ್ದಾರೆ. ತಾತ್ಕಾಲಿಕವಾಗಿ ಮಹಿಳೆಯ ಮನೆಯಲ್ಲಿ ವಾಸಿಸಿದ ನಂತರ, ಆರೋಪಿಯು ಆಕೆಯ ಸುಮಾರು 20 ಲಕ್ಷ ರೂ. ಮೌಲ್ಯದ ಚಿನ್ನಾಭರಣಗಳನ್ನು ಕದ್ದಿದ್ದಾನೆ ಎಂದು ಆರೋಪಿಸಲಾಗಿದೆ.

ಆಕೆಯ ಡೆಬಿಟ್ ಕಾರ್ಡ್ ಅನ್ನು ಸಹ ಕದ್ದು, ಅದನ್ನು ಬಳಸಿಕೊಂಡು 2.4 ಲಕ್ಷ ರೂ.ಗಳನ್ನು ಡ್ರಾ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಳೆದ ತಿಂಗಳು ಮಹಿಳೆಯಿಂದ ಹಣ ಪಡೆದು ವಂಚಿಸಿದ ನಂತರ, ಆರೋಪಿ ಕಣ್ಮರೆಯಾಗಿದ್ದು, ಇದುವರೆಗೆ ಪತ್ತೆಯಾಗಿಲ್ಲ ಎಂದು ಅಧಿಕಾರಿ ಹೇಳಿದ್ದಾರೆ. ಸಂತ್ರಸ್ತೆಯ ದೂರಿನ ಆಧಾರದ ಮೇಲೆ, ಪೊಲೀಸರು ಸೋಮವಾರ ಆ ವ್ಯಕ್ತಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್ ಗಳಡಿಯಲ್ಲಿ ಕೇಸ್ ದಾಖಲಿಸಿದ್ದಾರೆ.

# ನಾಳೆಯಿಂದ ಬೇಸಿಗೆ ರೇಸ್‌ಗಳು





ಮೈಸೂರು, ಮೇ 28– ಬಹುನಿರೀಕ್ಷಿತ ಬೇಸಿಗೆ ರೇಸ್‌ಗಳು ಮೇ 30ರಿಂದ ಪ್ರಾರಂಭವಾಗಲಿವೆ ಎಂದು ಮೈಸೂರು ರೇಸ್ ಕ್ಲಬ್ ಲಿಮಿಟೆಡ್‌ನ ಅಧ್ಯಕ್ಷರೂ ಆದ ಸೀನಿಯರ್ ಸ್ಟೀವರ್ಡ್ ಜಿ.ವೆಂಕಟೇಶ್ ತಿಳಿಸಿದ್ದಾರೆ.

ಒಟ್ಟು 11 ದಿನಗಳ ಈ ಸಾಲಿನ ಬೇಸಿಗೆ ರೇಸ್‌ಗಳು ಆ.6ಕ್ಕೆ ಮುಕ್ತಾಯವಾಗಲಿದ್ದು, ಇದಕ್ಕಾಗಿ 4 ಕೋಟಿ ರೂ. ಸ್ಟೇಕ್ಸ್ ಹಣವನ್ನು ಘೋಷಿಸಲಾಗಿದೆ. ಈ ಸೀಸನ್‌ನ 4 ಸ್ವೀಪ್ ಸ್ಟೇಕ್ಸ್ ರೇಸ್‌ಗಳ ಪೈಕಿ ಮೂರು ರೇಸ್‌ಗಳನ್ನು ಮೂರು ವರ್ಷದ ಕುದುರೆಗಳಿಗೆ ಮೀಸಲಿಡಲಾಗಿದೆ. ಮತ್ತೊಂದು ಸ್ಟೇಕ್ಸ್ ರೇಸ್‌ನಲ್ಲಿ ದೇಶದ ವಿವಿಧ ಭಾಗಗಳಿಂದ ನಾಲ್ಕು ವರ್ಷದ ಕುದುರೆಗಳು ಭಾಗವಹಿಸಲಿವೆ ಎಂದು ಮಾಹಿತಿ ನೀಡಿದ್ದಾರೆ. ಈ ಸಾಲಿನಲ್ಲಿ ಮೈಸೂರು ಫಿಲ್ಲೀಸ್ ಟ್ರಯಲ್ ಸ್ಟೇಕ್ಸ್– 2025, ಮೈಸೂರು ಕೋಲ್ಟ್ಸ್ ಟ್ರಯಲ್ ಸ್ಟೇಕ್ಸ್–2025ರ ದಿ ಮೈಸೂರು ರೇಸ್ ಕ್ಲಬ್ ಮಿಲಿಯನ್–2025, ಮೈಸೂರು ಸಮ್ಮರ್ ಮಿಲಿಯನ್–2025 ರೇಸ್‌ಗಳು ಪ್ರಮುಖ ಆಕರ್ಷಣೆಯಾಗಿರುತ್ತವೆ. ಮೂರು ಹೊಸ ತರಬೇತುದಾರರೂ ಸೇರಿದಂತೆ ಒಟ್ಟು 22 ತರಬೇತುದಾರರು, 75 ಜಾಕಿಗಳು ಈ ಬಾರಿಯ ಬೇಸಿಗೆ ರೇಸ್‌ಗಳಲ್ಲಿ ಭಾಗವಹಿಸುವ ನಿರೀಕ್ಷೆ ಇದೆ ಎಂದು ಅವರು ತಿಳಿಸಿದ್ದಾರೆ.

# ನಿಮ್ಮ ಕಡೆ ಕರೆಂಟ್ ಇಲ್ವಾ...; ಇವರಿಗೆ ಕರೆ ಮಾಡಿ!

ಮೈಸೂರು, ಮೇ 28– ಚೆಸ್ಕಾಂ ವತಿಯಿಂದ ಕೃಷ್ಣರಾಜನಗರ, ಸಾಲಿಗ್ರಾಮ, ಪಿರಿಯಾಪಟ್ಟಣ ಮತ್ತು ಬೆಟ್ಟದಪುರ ತಾಲೂಕಿನಲ್ಲಿ ವಿದ್ಯುತ್ ವ್ಯತ್ಯಯ ಉಂಟಾದಲ್ಲಿ ತುರ್ತು ಸಹಾಯಕ್ಕಾಗಿ ಲಭ್ಯವಿರುವ ಇಂಜಿನಿಯರ್‌ಗಳು ಹಾಗೂ ಅವರ ಸಂಪರ್ಕ ಮೊಬೈಲ್ ಸಂಖ್ಯೆಗಳನ್ನು ಪ್ರಕಟಿಸಲಾಗಿದೆ. ಪ್ರಸ್ತುತ ಭಾರಿ ಮಳೆ ಹಾಗೂ ಗಾಳಿಯಿಂದ ನಾನಾ ರೀತಿಯಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗುತ್ತಿರುವುದರಿಂದ ಗ್ರಾಹಕರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಚೆಸ್ಕಾಂ ಈ ವ್ಯವಸ್ಥೆ ಮಾಡಿದೆ. ಗ್ರಾಹಕರು ಮೊಬೈಲ್ ಕರೆ ಮಾಡುವ ಮೂಲಕ ತಮ್ಮ ಅಹವಾಲುಗಳನ್ನು ಸಲ್ಲಿಸಿದರೆ, ತಕ್ಷಣವೇ ಪರಿಹಾರ ಕಲ್ಪಿಸಲು ಅನುಕೂಲವಾಗಲಿದೆ ಎಂಬುದು ಚೆಸ್ಕಾಂನ ಉದ್ದೇಶವಾಗಿದೆ.

ಕೃಷ್ಣರಾಜನಗರ ಉಪವಿಭಾಗ ವ್ಯಾಪ್ತಿಯಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) 9448994823, ಕೃಷ್ಣರಾಜನಗರ ಪಟ್ಟಣ ವ್ಯಾಪ್ತಿ ಸಹಾಯಕ ಕಿರಿಯ ಇಂಜಿನಿಯರ್(ವಿ) ಕೃಷ್ಣರಾಜನಗರ ಶಾಖೆ 9448994824, ಹೆಬ್ಬಾಳು, ಬ್ಯಾಡರಹಳ್ಳಿ, ಸಿದ್ದಾಪುರ, ಕೆಸ್ತೂರು, ಮಾವತ್ತೂರು ಕಿರಿಯ ಇಂಜಿನಿಯರ್(ವಿ) ಹೆಬ್ಬಾಳು ಶಾಖೆ 9480837527, ಹಳಿಯೂರು, ಕುಪ್ಪೆ, ಮಾಯಿಗೌಡನಹಳ್ಳಿ, ಹೊಸಕೋಟೆ ಕಿರಿಯ ಇಂಜಿನಿಯರ್(ವಿ) ಹೊಸೂರು ಶಾಖೆ 9448994826, ದೊಡ್ಡಕೊಪ್ಪಲು, ಲಾಳಂದೇವನಹಳ್ಳಿ, ಕಗ್ಗೆರೆ, ತಿಪ್ಪೂರು ಕಿರಿಯ ಇಂಜಿನಿಯರ್(ವಿ) ಬಸವರಾಜಪುರ ಶಾಖಾ 9449597490, ಹಂಪಾಪುರ, ಚಂದಗಾಲು, ಅಡಗೂರು, ಅರ್ಜುನಹಳ್ಳಿ ಹಂಪಾಪುರ ಶಾಖೆ ಸಹಾಯಕ ಇಂಜಿನಿಯರ್(ವಿ) 9448994824 ಹಾಗೂ ಸರ್ವೀಸ್ ಸ್ಟೇಷನ್ ದೂರವಾಣಿ ನಂ. 9449597498.



ಸಾಲಿಗ್ರಾಮ ಉಪವಿಭಾಗದಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) 9448994995, ಸಾಲಿಗ್ರಾಮ ಶಾಖೆ ವ್ಯಾಪ್ತಿಯ ಸಾಲಿಗ್ರಾಮ ಕರ್ಪೂರವಳ್ಳಿ ಲಕ್ಷ್ಮೀಪುರ, ತಂದ್ರೆ ಸಹಾಯಕ ಇಂಜಿನಿಯರ್ (ವಿ) 9480837504, ಮಿರ್ಲೆ ಶಾಖೆ ಕಿರಿಯ ಇಂಜಿನಿಯರ್(ವಿ) ಮಿರ್ಲೆ, ಅಂಕನಹಳ್ಳಿ, ಗಂಧನಹಳ್ಳಿ, ನರಚನಹಳ್ಳಿ ಕಿರಿಯ ಇಂಜಿನಿಯರ್(ವಿ) 9448994997, ಮಿರ್ಲೆ ಶಾಖೆಯ ಭೇರ್ಯ, ಹೊಸಅಗ್ರಹಾರ, ಮೇಲೂರು, ಮುಂಜನಹಳ್ಳಿ, ಭೇರ್ಯ ಶಾಖಾ ಕಿರಿಯ ಇಂಜಿನಿ ಯರ್ (ವಿ) 9448994998, ಹರದನಹಳ್ಳಿ, ಶೀಗೆವಾಳು, ಹೊನ್ನೇನಹಳ್ಳಿ, ಚನ್ನಂಗೆರೆ, ಹನಸೋಗೆ ಹರದನಹಳ್ಳಿ ಶಾಖೆ ಕಿರಿಯ ಇಂಜಿನಿಯರ್(ವಿ) 9449597491 ಹಾಗೂ ಸರ್ವೀಸ್ ಸ್ಟೇಷನ್ ನಂಬರ್ 9449597497.

ಪಿರಿಯಾಪಟ್ಟಣ ಉಪ ವಿಭಾಗದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) 9448994818, ಪಿರಿಯಾಪಟ್ಟಣ ಟೌನ್ ಪಿರಿಯಾಪಟ್ಟಣ ಶಾಖೆಯ ಸಹಾಯಕ ಇಂಜಿನಿಯರ್(ವಿ) 9448994819, ಬೈಲಕೊಪ್ಪ, ಕೊಪ್ಪ ಆವರ್ತಿ ಚನ್‌ಕಲ್, ಟಿಬೆಟ್ ಕ್ಯಾಂಪ್ ಬೈಲುಕೊಪ್ಪ ಶಾಖೆಯ ಸಹಾಯಕ ಇಂಜಿನಿಯರ್ (ವಿ) 9449598663, ಕಂಪಲಾಪುರ, ಕೀರನಹಳ್ಳಿ, ಪಂಚವಳ್ಳಿ, ದೊಡ್ಡಬೇಲಾಳು ಕಂಪಾಲಪುರ ಶಾಖೆಯ ಕಿರಿಯ ಇಂಜಿನಿಯರ್(ವಿ) 9480837534, ಚಿಟ್ಟೇನಹಳ್ಳಿ, ಚೌತಿ, ಮಾಲಂಗಿ, ಮುತ್ತೂರು ಚಿಟ್ಟೇನಹಳ್ಳಿ ಶಾಖೆಯ ಕಿರಿಯ ಇಂಜಿನಿಯರ್(ವಿ) 9448994820, ಹುಣಸವಾಡಿ, ನವಿಲೂರು, ಪೂನಾಡಹಳ್ಳಿ ಹುಣಸೇವಾಡಿ ಶಾಖೆಯ ಕಿರಿಯ ಇಂಜಿನಿಯರ್(ವಿ) 9449597492 ಹಾಗೂ ಸರ್ವೀಸ್ ಸ್ಟೇಷನ್ ನಂಬರ್ 9449597496.

ಬೆಟ್ಟದಪುರ ಉಪವಿಭಾಗದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) 9448994365, ಬೆಟ್ಟದಪುರ ಚಿಕ್ಕನೇರಳೆ, ಹರದೂರು ಬೆಟ್ಟದಪುರ ಶಾಖೆಯ ಸಹಾಯಕ ಇಂಜಿನಿಯರ್ (ವಿ) 9448994821, ರಾವಂದೂರು, ಮಾಕೋಡು, ಹಂಡಿತವಳ್ಳಿ ರಾವಂದೂರು ಶಾಖೆಯ ಕಿರಿಯ ಇಂಜಿನಿಯರ್(ವಿ)9448994822, ಕಿತ್ತೂರು, ಬೆಟ್ಟದತುಂಗಾ, ಅತ್ತಿಗೋಡು ಕಿತ್ತೂರು ಶಾಖೆಯ ಕಿರಿಯ ಇಂಜಿನಿಯರ್(ವಿ)9448994364, ಹೆಚ್.ಹೆಚ್. ಬಾಗಿಲು, ಆರ್. ತುಂಗಾ, ಕೋಮಲಾಪುರ, ಭುವನಹಳ್ಳಿ ಸೀಗೂರು ಶಾಖೆಯ ಕಿರಿಯ ಇಂಜಿನಿಯರ್(ವಿ) 9449597493, ಕಣಗಾಲು, ಹಲಗನಹಳ್ಳಿ, ದೊಡ್ಡಕಮರವಳ್ಳಿ, ಹಾರನಹಳ್ಳಿ, ಚಪ್ಪರದಹಳ್ಳಿ ಕಣಗಾಲು ಶಾಖೆಯ ಕಿರಿಯ ಇಂಜಿನಿಯರ್(ವಿ)9480810345 ಮತ್ತು ಸರ್ವೀಸ್ ಸ್ಟೇಷನ್ ನಂಬರ್ 9449597495 ಅನ್ನು ಸಂಪರ್ಕಿಸುವಂತೆ ಸೆಸ್ಕ್ ಪ್ರಕಟಣೆ ತಿಳಿಸಿದೆ.

# ಅಂತಿಮ ವರ್ಷದ ಪದವಿ ವಿದ್ಯಾರ್ಥಿನಿ ಹೃದಯಾಘಾತದಿಂದ ಸಾವು

ಹಾಸನ, ಮೇ 28– ಅಂತಿಮ ವರ್ಷದ ಪದವಿ ವಿದ್ಯಾರ್ಥಿನಿ ಹೃದಯಾಘಾತದಿಂದ ಸಾವನ್ನಪ್ಪಿದ ಘಟನೆ ಹಾಸನ ತಾಲೂಕಿನ ಕೆಲವತ್ತಿ ಗ್ರಾಮದಲ್ಲಿ ನಡೆದಿದೆ.



ಕೆಲವತ್ತಿ ಗ್ರಾಮದ ಪಾಪಣ್ಣ ಹಾಗೂ ಗಾಯತ್ರಿ ದಂಪತಿ ಪುತ್ರಿ ಕವನ ಕೆವಿ (21) ಮೃತ ವಿದ್ಯಾರ್ಥಿನಿ. ಕವನ ಹಾಸನ ನಗರದ ಎಂ.ಜಿ ರಸ್ತೆಯಲ್ಲಿರುವ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಿಮ ವರ್ಷದ ಬಿ.ಕಾಂ ವ್ಯಾಸಂಗ ಮಾಡುತ್ತಿದ್ದಳು. ಮೂರು ವಿಷಯಗಳ ಪರೀಕ್ಷೆ ಬರೆದಿದ್ದ ಕವನ ಇನ್ನೂ ಮೂರು ಪರೀಕ್ಷೆಗಳನ್ನು ಬರೆಯಬೇಕಿತ್ತು. ಸಂಜೆ ಮನೆಗೆ ನೀರು ತಂದ ಕವನಗೆ ದಿಢೀರ್ ಎದೆನೋವು ಕಾಣಿಸಿಕೊಂಡಿದೆ. ಈ ವೇಳೆ ಕವನ ತಾಯಿ ಬಳಿ ಕುಡಿಯಲು ನೀರು ಕೇಳಿದ್ದಾಳೆ. ತಾಯಿ ನೀರು ತಂದು ಕೊಡುವಷ್ಟರಲ್ಲಿ ಕವನ ಮನೆಯಲ್ಲಿಯೇ ಕುಸಿದು ಬಿದ್ದಿದ್ದಳು.

ಕೂಡಲೇ ಪೋಷಕರು ಆಕೆಯನ್ನು ಹಾಸನದ ಖಾಸಗಿ ಆಸ್ಪತ್ರೆಗೆ ಕರೆತಂದಿದ್ದಾರೆ. ಅಷ್ಟರಲ್ಲಾಗಲೇ ಕವನ ಕೊನೆಯುಸಿರೆಳೆದಿದ್ದಳು. ಸದ್ಯ ಮಗಳನ್ನು ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲುಮುಟ್ಟಿದೆ. ಸಹಪಾಠಿಗಳು ಹಾಗೂ ಕಾಲೇಜು ಉಪನ್ಯಾಸಕ ವರ್ಗದಲ್ಲಿಯೂ ಶೋಕ ಮಡುಗಟ್ಟಿದೆ.

# ಹೊಂದಾಣಿಕೆಯ ಜೀವನ ಮುಖ್ಯ: ಸುತ್ತೂರು ಶ್ರೀಗಳು ಅಭಿಮತ

ಮೈಸೂರು, ಮೇ 28– ಜೀವನದಲ್ಲಿ ಹೊಂದಾಣಿಕೆ ಅತಿ ಮುಖ್ಯ ಎಂದು ಶ್ರೀ ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಬಿಳಿಗಿರಿರಂಗನ ಬೆಟ್ಟದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಯುಕ್ತಾಶ್ರಯದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರದ ಸಮಾರೋಪದಲ್ಲಿ ತಿಳಿಸಿದರು.

ಜೀವನದಲ್ಲಿ ಕೇವಲ ತಪ್ಪುಗಳನ್ನು ಗುರುತಿಸುತ್ತಾ ಹೋದರೆ ಅದು ಮನಸ್ತಾಪಕ್ಕೆ ಕಾರಣವಾಗುತ್ತದೆ. ಒಳ್ಳೆಯ ಅಂಶಗಳನ್ನು ಗುರುತಿಸುತ್ತಾ ಪ್ರೋತ್ಸಾಹಿಸಿದರೆ ಬದುಕು ಸ್ವರ್ಗದಂತಿರುತ್ತದೆ. ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢವಾಗಿರಬೇಕಾದರೆ ಸಮಚಿತ್ತದಿಂದ ಇರಬೇಕು. ಪ್ರಕೃತಿ ಹಾಗೂ ಎಲ್ಲರಲ್ಲೂ ಭಗವಂತನನ್ನು ಕಾಣಬೇಕು. ಜೀವನದಲ್ಲಿ ಅತಿ ಆಸೆಯೇ ದುಃಖಕ್ಕೆ ಕಾರಣವಾಗುತ್ತದೆ. ಕಾಯಕದೊಂದಿಗೆ ಭಗವಂತನ ಸ್ಮರಣೆ ಮಾಡುತ್ತಾ ನೆಮ್ಮದಿಯಿಂದ ಜೀವನ ಸಾಗಿಸಬೇಕು. ಐವತ್ತು ವರ್ಷಗಳ ಹಿಂದೆ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಮಠಾಧಿಪತಿಗಳಿಗಾಗಿಯೇ ಶಿಬಿರವನ್ನು ಪ್ರಾರಂಭಿಸಿದರು. ಶಿಬಿರಗಳು ಮನಸ್ಸಿನ ತೊಳಲಾಟಗಳನ್ನು ನಿಯಂತ್ರಿಸಿ ನೆಮ್ಮದಿಯನ್ನು ನೀಡುತ್ತವೆ ಎಂದು ಹೇಳಿದರು.

ಮೈಸೂರು ದಕ್ಷಿಣ ವಲಯದಡಿ ಐಜಿಪಿ ಡಾ. ಎಂ.ಬಿ. ಬೋರಲಿಂಗಯ್ಯನವರು ಸುತ್ತೂರು ಶ್ರೀಮಠವು ಮಾನವ ಕಲ್ಯಾಣಕ್ಕಾಗಿ ಮಾಡುತ್ತಿರುವ ಸಾಮಾಜಿಕ ಮತ್ತು ಧಾರ್ಮಿಕ ಸೇವೆ ಅನುಪಮವಾದುದು. ಶಿಬಿರಗಳು ಬದುಕಿಗೆ ನವಚೈತನ್ಯವನ್ನು ನೀಡುತ್ತವೆ. ಅಸ್ತವ್ಯಸ್ತಗೊಂಡಿರುವ ಆಹಾರ ಪದ್ಧತಿ ಮತ್ತು ಪರಿಸರವನ್ನು ಪುನರುಜ್ಜೀವನಗೊಳಿಸಬೇಕಿದೆ. ಜೀವನದಲ್ಲಿ ಕಷ್ಟ–ನಷ್ಟ ಮತ್ತು ಕಲಹಗಳನ್ನು ಧೈರ್ಯದಿಂದ ಎದುರಿಸಬೇಕು. ಶಿಬಿರಾರ್ಥಿಗಳು ತಾವು ಇಲ್ಲಿ ಪಡೆದ ಜ್ಞಾನವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.



ಬಿಳಗಿರಿರಂಗನ ಬೆಟ್ಟದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರೊಂದಿಗೆ ಟಿ. ಹೀರಾಲಾಲ್, ಡಾ. ಎಂ.ಬಿ. ಬೋರಲಿಂಗಯ್ಯ, ಪ್ರೊ.ಎಂ.ಕೃಷ್ಣೇಗೌಡ, ಸಂಚಾಲಕರು ಮತ್ತು ಶಿಬಿರಾರ್ಥಿಗಳನ್ನು ಕಾಣಬಹುದು.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಟಿ. ಹೀರಾಲಾಲ್ ಮಾತನಾಡಿ, ಮನುಷ್ಯನ ದುರಾಸೆಗಳಿಂದ ಜೀವನ ನಾಶವಾಗುತ್ತಿದೆ. ದುರಾಸೆಯನ್ನು ಬಿಟ್ಟು ಸಮಾಜಮುಖಿಯಾಗಿ ಕಾರ್ಯ ಮಾಡಬೇಕು. ಇಂದು ಪರಿಸರದ ಉಳಿವು ಅತಿ ಅವಶ್ಯಕವಾಗಿದೆ. ಹಬ್ಬ ಹರಿದಿನಗಳಲ್ಲಿ ಇತರ ಆಚರಣೆಗಳ ಜೊತೆಗೆ ಗಿಡಗಳನ್ನು ನೆಟ್ಟು ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದರು.

ಪ್ರೊ.ಎಂ.ಕೃಷ್ಣೇಗೌಡರು, ಹಾಸ್ಯ ಎನ್ನುವುದು ಮಾನವನ ಜೀವನದ ಒಂದು ಅಮೂಲ್ಯವಾದ ಭಾವನೆ. ಅದಕ್ಕೆ ಮನುಷ್ಯನ ನೋವು, ದುಗುಡಗಳನ್ನು ಮರೆಸುವ ಶಕ್ತಿಯಿರುತ್ತದೆ. ಆಧುನಿಕ ಜೀವನದಲ್ಲಿ ಮನುಷ್ಯರು ಮಾನಸಿಕ ಒತ್ತಡದಲ್ಲಿ ಬದುಕುತ್ತಿದ್ದಾರೆ. ಇಂತಹ ಒತ್ತಡಕ್ಕೆ ಹಾಸ್ಯವೇ ಪರಮೌಷಧಿ. ಬಾಹ್ಯ ಸಮೃದ್ಧಿಗಿಂತ ಆಂತರಿಕ ಸಮೃದ್ಧಿ ಬಹಳ ಮುಖ್ಯ. ಹಾಸ್ಯವು ಸ್ನೇಹವನ್ನು ಹೆಚ್ಚಿಸುತ್ತದೆ. ಮಾನಸಿಕ ಮತ್ತು ದೈಹಿಕ ಆರೋಗ್ಯ ವೃದ್ಧಿಸುವುದರೊಂದಿಗೆ ಜೀವನವನ್ನು ಸುಂದರವಾ ಗಿಸುತ್ತದೆ ಎಂದು ತಿಳಿಸಿದರು.


ಶಿಬಿರಾರ್ಥಿಗಳಾದ ಡಾ.ಎಂ.ಸಿ. ಶಂಕರಪ್ಪ, ಶ್ರೀಮತಿ ಭವಾನಿ ನಟರಾಜ, ಶ್ರೀಮತಿ ಜಯಶ್ರೀ ಗೋಳಸಂಗಿ, ಶ್ರೀಮತಿ ಶಕುಂತಲ ರೆಡ್ಡಿ, ಶ್ರೀಮತಿ ರಾಜೇಶ್ವರಿ ಸ್ವಾಮಿ, ಬಿ.ಕೆ. ಗೋಟ್ಯಾಳ, ಎಂ.ಬಿ. ಸದಾಶಿವಯ್ಯನವರು ಅನಿಸಿಕೆಗಳನ್ನು ಹಂಚಿಕೊಂಡರು. ಎಎಸ್‌ಪಿ ಎಂ.ಎನ್. ಶ್ರೀಧರ್, ಡಿವೈಎಸ್‌ಪಿ ಎಂ. ಧರ್ಮೇಂದ್ರ, ಸರ್ಕಲ್ ಇನ್ಸ್‌ಪೆಕ್ಟರ್ ಆರ್.ಶ್ರೀಕಾಂತ್ ಮೊದಲಾದರವರು, ವಿದ್ಯಾಪೀಠದ ಅಧಿಕಾರಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು. ಎಸ್. ಪುಟ್ಟರಾಜಪ್ಪ ಸ್ವಾಗತಿಸಿದರು. ಜಿ. ಮಲ್ಲೇಶ್ ವರದಿ ಮಂಡಿಸಿದರು. ಎಂ.ಎಸ್. ಶರಣ್ ವಂದಿಸಿದರು. ಶ್ರೀಮತಿ ಶಶಿಕಲಾ ರುದ್ರಪ್ರಸಾದ್ ಮತ್ತು ತಂಡದವರು ಪ್ರಾರ್ಥಿಸಿದರು. ಎಚ್.ಎಂ.ನಾಗಭೂಷಣ ಕಾರ್ಯಕ್ರಮ ನಿರೂಪಿಸಿದರು.

## ಕೆಆರ್‌ಎಸ್ ನೀರಿನ ಮಟ್ಟ




| | |
|---|---|
| ಗರಿಷ್ಠ ಮಟ್ಟ | 124.80 ಅಡಿ |
| ಬುಧವಾರ | 95.35 ಅಡಿ |
| ಒಳಹರಿವು | 26424 ಕ್ಯೂಸೆಕ್ |
| ಹೊರಹರಿವು | 529 ಕ್ಯೂಸೆಕ್ |

## ಕಬಿನಿ ನೀರಿನ ಮಟ್ಟ



| | |
|---|---|
| ಗರಿಷ್ಠ ಮಟ್ಟ | 2284 ಅಡಿ |
| ಬುಧವಾರ | 2273 ಅಡಿ |
| ಒಳಹರಿವು | 25000 ಕ್ಯೂಸೆಕ್ |
| ಹೊರಹರಿವು | 000 ಕ್ಯೂಸೆಕ್ |

## ಹಾರಂಗಿ ನೀರಿನ ಮಟ್ಟ



| | |
|---|---|
| ಗರಿಷ್ಠ ಮಟ್ಟ | 2859 ಅಡಿ |
| ಬುಧವಾರ | 2840.55 ಅಡಿ |
| ಒಳಹರಿವು | 3852 ಕ್ಯೂಸೆಕ್ |
| ಹೊರಹರಿವು | 230 ಕ್ಯೂಸೆಕ್ |

ಮೈಸೂರು ಮಿತ್ರ ಗುರುವಾರ 29 ಮೇ 2025

# ಕತ್ತರಘಟ್ಟ ಸಜೀವ ದಹನ ಘಟನೆ ಖಂಡಿಸಿ ಪ್ರತಿಭಟನೆ

ಕೆ.ಆರ್.ಪೇಟೆ, ಮೇ 28– ತಾಲೂಕಿನ ಕತ್ತರಘಟ್ಟ ಗ್ರಾಮದಲ್ಲಿ ದಲಿತ ಯುವ ರೈತ ಜಯಕುಮಾರ್‌ರನ್ನು ಉರಿಯುತ್ತಿದ್ದ ಹುಲ್ಲಿನ ಮೆದೆಗೆ ತಳ್ಳಿ ಜೀವಂತ ದಹನ ಮಾಡಿ ಹತ್ಯೆ ಮಾಡಲಾಗಿದ್ದು. ಪ್ರಕರಣವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಸ್ಥಳಕ್ಕೆ ಗೃಹ ಸಚಿವರು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ಒತ್ತಾಯಿಸಿ ತಾಲೂಕು ದಲಿತ ಪರ ಸಂಘ ಟನೆಗಳ ಒಕ್ಕೂಟ ಹಾಗೂ ಪ್ರಗತಿಪರ ಸಂಘಟನೆಗಳ ವೇದಿಕೆಯ ವತಿಯಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಪ್ರಮುಖ ರಸ್ತೆಗಳಲ್ಲಿ ಸಾಗಿ ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ನಂತರ ಮಿನಿವಿಧಾನ ಸೌಧದ ಆವರಣದಲ್ಲಿ ಸಭೆ ನಡೆಸಿ ಕತ್ತರಘಟ್ಟ ಗ್ರಾಮದಲ್ಲಿ ದಲಿತ ಯುವಕ ಜೀವಂತ ದಹನವಾದ ಘಟನೆಯ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡಲೇ ಗಮನ ಹರಿಸಿ ತನಿಖೆಗೆ ಆದೇಶ ಹೊರಡಿಸಿ ನೊಂದ ಕುಟುಂಬಕ್ಕೆ ನ್ಯಾಯ ಒದಗಿಸಿಕೊಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.



ಸಜೀವ ದಹನ ಖಂಡಿಸಿ ಕೆ.ಆರ್.ಪೇಟೆಯಲ್ಲಿ ನಡೆಸಿದ ಪ್ರತಿಭಟನೆ.

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು, ಡಿ.ಎಸ್.ಎಸ್(ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಮೈಸೂರು ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನ ಪ್ರಕಾಶಸ್ವಾಮೀಜಿ, ಚಿತ್ರದುರ್ಗದ ಛಲವಾದಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಬಸವನಾಗದೇವ ಸ್ವಾಮೀಜಿ, ಬಿ.ಎಸ್.ಪಿ. ರಾಜ್ಯಾಧ್ಯಕ್ಷ ಡಾ.ಕೃಷ್ಣಮೂರ್ತಿ, ರಾಜ್ಯ ಎಸ್.ಸಿ ಎಸ್.ಟಿ ನೌಕರರ ಸಂಘದ ಅಧ್ಯಕ್ಷ ಚಂದ್ರಹಾಸ, ಛಲವಾದಿ ಮಹಾಸಭಾ ಮಂಡ್ಯ ಜಿಲ್ಲಾಧ್ಯಕ್ಷ ಸುರೇಶ್, ಪುರಸಭಾ ಸದಸ್ಯ ಡಿ.ಪ್ರೇಮಕುಮಾರ್, ಛಲವಾದಿ ಮಹಾಸಭಾದ ಹಾಸನ–ಮಂಡ್ಯ ಉಸ್ತುವಾರಿ ಮಾಂಬಳ್ಳಿ ಜಯರಾಮ್, ಛಲವಾದಿ ಮಹಾಸಭಾ ತಾಲೂಕು ಅಧ್ಯಕ್ಷ ಊಚನಹಳ್ಳಿ ನಟರಾಜ್, ಗೌರವಾಧ್ಯಕ್ಷ ಸೋಮಸುಂದರ್, ತಾಲೂಕು ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ರಾಜಯ್ಯ, ಸಂಚಾಲಕ ಬಸ್ತಿ ರಂಗಪ್ಪ ಸಿಪಿಐಎಂ ಜಿಲ್ಲಾ ಮುಖಂಡರಾದ ಸಿ.ಕುಮಾರಿ, ದಲಿತ ಸೇನೆ ಮಂಡ್ಯ ಜಿಲ್ಲಾಧ್ಯಕ್ಷ ಎನ್.ಜೆ.ಮಂಜು, ದಲಿತ ಸೇನೆ ಮಹಿಳಾ ಘಟಕದ ಮಂಡ್ಯ ಜಿಲ್ಲಾಧ್ಯಕ್ಷೆ ಕಮಲಾಕ್ಷಿ ನಾಗರಾಜು ಸೇರಿದಂತೆ ವಿವಿಧ ಸಂಘಟನೆಗಳ ನೂರಾರು ಮುಖಂಡರು ಹಾಗೂ ಸಾವಿರಾರು ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪ್ರತಿಭಟನೆಯ ನಂತರ ಪೊಲೀಸ್ ಅಧಿಕಾರಿ ತಿಮ್ಮಯ್ಯ ಹಾಗೂ ತಹಸೀಲ್ದಾರ್ ಡಾ.ಎಸ್.ಯು ಅಶೋಕ್ ಅವರಿಗೆ ಮನವಿ ಸಲ್ಲಿಸಲಾಯಿತು.

## ಜೂ.1ರಂದು ನಾಲ್ವಡಿ ಜಯಂತಿ ಅಂಗವಾಗಿ ಅಕ್ಷರ ಜಾತ್ರೆ, ಪ್ರಶಸ್ತಿ ಪ್ರದಾನ

**ಮಂಡ್ಯ:** ಡಾ.ಜೀಶಂಪ ಸಾಹಿತ್ಯ ವೇದಿಕೆ ಹಾಗೂ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಫಿಲಂ ವತಿಯಿಂದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ 12ನೇ ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಹಾಗೂ ಸಾಹಿತಿ ಎಸ್.ಕೃಷ್ಣ ಸ್ವರ್ಣಸಂದ್ರ ಅವರ ನೇಗಿಲಧರ್ಮ ಕೃತಿ ಬಿಡುಗಡೆ ಸಮಾರಂಭವನ್ನು ಜೂ.1 ರಂದು ಬೆಳಿಗ್ಗೆ 10.30ಕ್ಕೆ ನಗರದ ಕರ್ನಾಟಕ ಸಂಘದ ಆವರಣದಲ್ಲಿರುವ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

12ನೇ ಕನ್ನಡ ಅಕ್ಷರ ಜಾತ್ರೆ ಸಮ್ಮೇಳನಾಧ್ಯಕ್ಷತೆಯನ್ನು ಸಾಹಿತಿ, ಚಿಂತಕ ಹಾಗೂ ವಿಧಾನಪರಿಷತ್ ಮಾಜಿ ಸದಸ್ಯ ಡಿ.ಎಸ್. ವೀರಯ್ಯ ವಹಿಸಲಿದ್ದು, ಸಮಾರಂಭವನ್ನು ಮೈಸೂರು ವಿವಿಯ ಮಾಜಿ ಸಿಂಡಿಕೇಟ್ ಸದಸ್ಯರಾದ ಡಾ.ಈ.ಸಿ.ನಿಂಗರಾಜೇಗೌಡ ನೆರವೇರಿಸಲಿದ್ದು, ಸಾಹಿತಿ ಹಾಗೂ ವೈದ್ಯ ಡಾ.ಚಂದ್ರಶೇಖರ್ ಪ್ರಧಾನ ಭಾಷಣ ಮಾಡಲಿದ್ದಾರೆ. ನೇಗಿಲ ಧರ್ಮ ಕೃತಿ ಯನ್ನು ಕಿತ್ತೂರು ರಾಣಿ ಚನ್ನಮ್ಮ ವಿವಿಯ ಪ್ರಾಧ್ಯಾಪಕ ಡಾ.ಹೆಚ್.ಟಿ.ಪೋತೆ ಬಿಡುಗಡೆ ಮಾಡುವರು. ಬನ್ನಂಗಾಡಿ ಸಿದ್ದಲಿಂಗಯ್ಯ ಭಾಗವಹಿಸಲಿದ್ದಾರೆ.

# ಭ್ರಷ್ಟಾಚಾರ ಕ್ಯಾನ್ಸರ್‌ಗಿಂತಲೂ ದೊಡ್ಡ ಕಾಯಿಲೆ: ಉಪ ಲೋಕಾಯುಕ್ತ ವೀರಪ್ಪ

ಮಂಡ್ಯ, ಮೇ 28– ಭ್ರಷ್ಟಾಚಾರ ಕ್ಯಾನ್ಸರ್‌ಗಿಂತಲೂ ಮಹಾಮಾರಿ ಕಾಯಿಲೆಯಿದ್ದ ಹಾಗೆ. ಒಂದು ವೇಳೆ ಕ್ಯಾನ್ಸರ್ ಕಾಯಿಲೆ ಹೊಂದಿರುವವರನ್ನು ಗುಣಪಡಿಸಬಹುದು ಆದರೆ ಭ್ರಷ್ಟಾಚಾರ ಎಂಬ ಕಾಯಿಲೆ ಹೊಂದಿರುವವರನ್ನು ಗುಣ ಪಡಿಸಲಾಗುವುದಿಲ್ಲ. ಅಧಿಕಾರಿಗಳು ಭ್ರಷ್ಟಾಚಾರ ಎಂಬ ಕಾಯಿಲೆಯಿಂದ ದೂರವಿರಿ. ಇಲ್ಲವಾದರೆ ಭಯದಲ್ಲಿ ಬದುಕುವ ಪರಿಸ್ಥಿತಿ ಬರಬಹುದು ಎಂದು ನ್ಯಾಯಮೂರ್ತಿ ಹಾಗೂ ಉಪ ಲೋಕಾಯುಕ್ತ ಬಿ.ವೀರಪ್ಪ ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಬುಧವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದ್ದ ಸಾರ್ವಜನಿಕರಿಂದ ದೂರು ಹಾಗೂ ಅಹವಾಲು ಸ್ವೀಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭ್ರಷ್ಟಾಚಾರದ ಹಾದಿಯಲ್ಲಿ ಸಾಗಿದರೆ ದೇಶದ ಅಭಿವೃದ್ಧಿಗೆ ಕಂಟಕವಾಗುತ್ತದೆ. ಸಮಾಜದಲ್ಲಿ ಸಮಾನತೆಗೆ ಶ್ರಮಿಸಿದ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಇನ್ನಿತರೆ ಗಣ್ಯರನ್ನು ಅಗೌರವಿಸಿದಂತೆ. ಕುವೆಂಪು ಅವರ ಎಲ್ಲಾದರೂ ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು ಎಂಬ ನುಡಿಯಂತೆ ಅಧಿಕಾರಿಗಳು ಎಲ್ಲಾದರೂ ಇರು ಎಂತಾದರು ಇರು ಎಂದೆಂದಿಗೂ ಭ್ರಷ್ಟಾಚಾರ ವಿರೋಧಿಯಾಗಿರು ಎಂಬ ಧ್ಯೇಯ ವಾಕ್ಯವನ್ನು ಅಳವಡಿಸಿಕೊಳ್ಳಬೇಕಾಗಿದೆ ಎಂದರು.



ಉಪಲೋಕಾಯುಕ್ತರಾದ ನ್ಯಾಯಮೂರ್ತಿ ಬಿ.ವೀರಪ್ಪ ಮಾತನಾಡುತ್ತಿರುವುದು.

ರಾಜ್ಯದ ಪ್ರತಿಯೊಬ್ಬ ಪ್ರಜೆಯು ಅನ್ಯಾಯದ ವಿರುದ್ಧ, ಭ್ರಷ್ಟಾಚಾರದ ವಿರುದ್ಧ ಹಾಗೂ ದೂರಾಡಳಿತದ ವಿರುದ್ಧ ಲೋಕಾಯುಕ್ತ ಕಚೇರಿಗೆ ತಲುಪಿ ದೂರು ನೀಡುವ ಅಧಿಕಾರವನ್ನು ಹೊಂದಿದ್ದಾರೆ. ಯಾರಿಗೂ ಹೆದರದೆ ಧೈರ್ಯವಾಗಿ ನಿಮ್ಮ ದೂರುಗಳನ್ನು ಯಾವ ಸಮಯದಲ್ಲಾದರೂ, ಯಾವ ಸಂದರ್ಭದಲ್ಲಾದರೂ ಲೋಕಾಯುಕ್ತ ಕಚೇರಿಗೆ ಭೇಟಿ ನೀಡಿ ಸಲ್ಲಿಸಿ ಎಂದು ಸಾರ್ವಜನಿಕರಿಗೆ ತಿಳಿಸಿದರು.

ನಮ್ಮ ಭಾರತ ದೇಶ ಎಲ್ಲಾ ಧರ್ಮದವರನ್ನು ಹೊಂದಿರುವ ದೇಶವಾಗಿದ್ದು ಪ್ರತಿಯೊಂದು ಧರ್ಮದವರಿಗೂ ಸಮಾನತೆಯನ್ನು ನೀಡಿದೆ. ಸಮಾನತೆಯನ್ನು ಬಳಸಿಕೊಂಡು ಅನ್ಯಾಯದ ವಿರುದ್ಧ ಧ್ವನಿ ಎತ್ತಿ ಎಂದು ಸಾರ್ವಜನಿಕರನ್ನು ಉದ್ದೇಶಿಸಿ ಆತ್ಮಸ್ಥೈರ್ಯದ ಮಾತುಗಳನ್ನು ಹೇಳಿದ ಅವರು, ಅಧಿಕಾರಿಗಳು ಕರ್ತವ್ಯ ನಿಭಾಯಿಸದೆಯಿದ್ದಲ್ಲಿ ಅನರ್ಹ ಎಂದು ಅಮಾನತು ಮಾಡಬಹುದು. ಅಧಿಕಾರಿಗಳ ವಿರುದ್ಧ ದೂರು ಬಂದಲ್ಲಿ ನೋಟಿಸ್ ಕಳುಹಿಸಲಾಗುವುದು ಹಾಗೂ ಒಂದು ತಿಂಗಳಿನ ಗಡುವು ನಂತರವು ಕೆಲಸ ನಿರ್ವಹಿಸದೆ ಇದ್ದಲ್ಲಿ ಕರ್ತವ್ಯಲೋಪ ಎಂದು 6 ತಿಂಗಳು ಜೈಲು ಶಿಕ್ಷೆಯನ್ನು ಸಹ ವಿಧಿಸಲಾಗುವುದು ಎಂದು ಅಧಿಕಾರಿಗಳಿಗೆ ಎಚ್ಚರಿಸಿದರು.

# ನಿವೃತ್ತ ಐಎಎಸ್ ಅಧಿಕಾರಿ ಉಮಾಶಂಕರ್‌ಗೆ 'ಪಾಂಡವ ಉಮಾಶಂಕರ' ಪ್ರಶಸ್ತಿ ಪ್ರದಾನ

ಪಾಂಡವಪುರ, ಮೇ 28– ನಿವೃತ್ತ ಐಎಎಸ್ ಅಧಿಕಾರಿ ಎಸ್.ಆರ್.ಉಮಾಶಂಕರ್ ಅವರು ಉತ್ತಮ ಅಧಿಕಾರಿಯಾಗಿದ್ದರು. ದಕ್ಷ ಆಡಳಿತ ನಡೆಸಿ ಒಂದು ಕಪ್ಪುಚುಕ್ಕೆ ಇಲ್ಲದಂತೆ ನಿವೃತ್ತರಾಗುವ ಮೂಲಕ ಬದುಕಿನಲ್ಲಿ ಸಾರ್ಥಕತೆ ಕಂಡುಕೊಂಡಿದ್ದಾರೆ ಎಂದು ಶ್ರೀಕ್ಷೇತ್ರ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ಶ್ರೀನಿರ್ಮಲಾ ನಂದನಾಥ ಸ್ವಾಮೀಜಿ ಗುಣಗಾನ ಮಾಡಿದರು.

ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ಪಾಂಡವ ಬಳಗದ ವತಿಯಿಂದ ನಿವೃತ್ತ ಐಎಎಸ್ ಅಧಿಕಾರಿ ಎಸ್.ಆರ್. ಉಮಾಶಂಕರ್ ಅವರಿಗೆ ಉತ್ತಮ 'ಪಾಂಡವ ಉಮಾಶಂಕರ' ಎಂಬ ಬಿರುದಿನೊಂದಿಗೆ ನಡೆಸಲಾದ ತವರಿನ ಸನ್ಮಾನ ಅಭಿನಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಮಾತನಾಡಿ, ಎಚ್‌ಡಿಕೆ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಎಸ್.ಆರ್. ಉಮಾಶಂಕರ್ ಅವರು ಶಿಕ್ಷಣ ಇಲಾಖೆಯಲ್ಲಿ ಜವಾಬ್ದಾರಿ ನಿರ್ವಹಿಸುವ ವೇಳೆ ಸಾವಿರಾರು ಶಾಲೆ, ಕಾಲೇಜುಗಳನ್ನು ಮಂಜೂರು ಮಾಡಿ ರಾಜ್ಯದಲ್ಲಿ ಶೈಕ್ಷಣಿಕ ಕ್ರಾಂತಿಯನ್ನೇ ನಡೆಸಿದರು. ಅದರಲ್ಲಿ ಮೇಲುಕೋಟೆ ವಿಧಾನಸಭಾ ಕ್ಷೇತ್ರಕ್ಕೆ 12 ಪ್ರೌಢಶಾಲೆ, 5 ಪಿಯು ಕಾಲೇಜು, 3 ಡಿಗ್ರಿ ಕಾಲೇಜುಗಳನ್ನು ಮಂಜೂರು ಮಾಡಿಕೊಟ್ಟರು. ಅಲ್ಲದೆ ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ನೆರವು ನೀಡಿದ್ದಾರೆ. ಅಧಿಕಾರಿಯಾಗಿ ಆಡಳಿತ ನಡೆಸಿದ 33 ವರ್ಷದಲ್ಲಿ ಒಂದೇ ಒಂದು ಕಪ್ಪುಚುಕ್ಕೆ ಇಲ್ಲದಂತೆ ಪ್ರಾಮಾಣಿಕವಾಗಿ ಕೆಲಸ ಮಾಡಿ ಜಿಲ್ಲೆಗೆ ಹೆಸರು ತಂದುಕೊಡುವ ಕೆಲಸ ಮಾಡಿದ್ದಾರೆ ಎಂದು ಹೇಳಿದರು.



ನಿವೃತ್ತ ಐಎಎಸ್ ಅಧಿಕಾರಿ ಎಸ್.ಆರ್.ಉಮಾಶಂಕರ್ ದಂಪತಿಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ ನೇತೃತ್ವದಲ್ಲಿ ಪಾಂಡವ ಉಮಾಶಂಕರ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಅಭಿನಂದನೆ ಸ್ವೀಕರಿಸಿ ಎಸ್.ಆರ್. ಉಮಾಶಂಕರ್ ಮಾತನಾಡಿ, ನನ್ನ ಅಧಿಕಾರದ ಅವಧಿಯಲ್ಲಿ ನಾನು ಎಂದು ಹಣ, ಅಧಿಕಾರದ ವ್ಯಾಮೋಹಕ್ಕೆ ಒಳಗಾಗಿ ಯಾರ ಹಿಂದೆ ಹೋದವನಲ್ಲ, ನನಗೆ ಸಿಕ್ಕಂತ ಅವಕಾಶದಲ್ಲಿ ಪ್ರಾಮಾಣಿಕವಾಗಿ ಜನಸೇವೆ ಮಾಡಿ, ಅದೇ ಪ್ರಾಮಾಣಿಕತೆಯಿಂದ ನಿವೃತ್ತಿ ಹೊಂದಿದ್ದೇನೆ. ನನ್ನ ಕೆಲಸ ನನಗೆ ಆತ್ಮತೃಪ್ತಿ, ಸಾರ್ಥಕತೆಯ ಭಾವನ್ನು ಮೂಡಿಸಿದೆ, ಆತ್ಮ ಸಾಕ್ಷಿಗೆ ವಿರುದ್ದವಾಗಿ ನಾನೆಂದು ಕೆಲಸ ಮಾಡಿಲ್ಲದ ಎಂದು ತಿಳಿಸಿದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ, ಪ್ರೊ.ಎಂ.ಕೃಷ್ಣೇಗೌಡ ಮಾತನಾಡಿದರು. ಇದೇ ವೇಳೆ ನಿವೃತ್ತ ಐಎಎಸ್ ಅಧಿಕಾರಿ ಎಸ್.ಆರ್.ಉಮಾಶಂಕರ್ ಅವರಿಗೆ ಉತ್ತಮ ಪಾಂಡವ ಉಮಾಶಂಕರ ಎಂಬ ಬಿರುದು ನೀಡಿ ತವರಿನ ಸನ್ಮಾನ ಮಾಡಿ ಅಭಿನಂದಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನ ಪಟ್ಟಣ ಐದು ದೀಪದ ವೃತ್ತದಿಂದ ತೆರೆದ ವಾಹನಗಳೊಂದಿಗೆ ಮೆರವಣಿಗೆ ನಡೆಸಲಾಯಿತು, ಸೋಬಾನೆ ರಾಜೇಶ್ ಅವರ ಕಲಾತಂಡಗಳು ಭಾಗವಹಿಸಿದ್ದವು.

# 6 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ

ಮಂಡ್ಯ, ಮೇ28– ಮಂಡ್ಯ ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 6 ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ರವಿಕುಮಾರ್ ಗಣಿಗ ಗುದ್ದಲಿ ಪೂಜೆ ನೆರವೇರಿಸಿದರು.

ಮಂಡ್ಯ ನಗರಸಭಾ ವ್ಯಾಪ್ತಿಯ ಕಲ್ಲಹಳ್ಳಿಯ 7ನೇ ವಾರ್ಡ್‌ನಲ್ಲಿ 25 ಲಕ್ಷದ ರಸ್ತೆ ಅಭಿವೃದ್ಧಿಗೆ, ಹೊಸಹಳ್ಳಿಯ 16ನೇ ವಾರ್ಡ್‌ನಲ್ಲಿ 25 ಲಕ್ಷದ ರಸ್ತೆ ಅಭಿವೃದ್ಧಿಗೆ, ಹೌಸಿಂಗ್ ಬೋರ್ಡ್ 17ನೇ ವಾರ್ಡ್‌ನ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ 25 ಲಕ್ಷ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ, ಗಾಂಧೀನಗರ 18ನೇ ವಾರ್ಡ್‌ನ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ 25 ಲಕ್ಷ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಮುಂದುವರೆದಂತೆ ಗ್ರಾಮಾಂತರ ಪ್ರದೇಶದಲ್ಲಿ ದೊಡ್ಡಕೊತ್ತಗೆರೆ ಗ್ರಾಮದಲ್ಲಿ ಅಂದಾಜು 25 ಲಕ್ಷರೂಗಳಲ್ಲಿ ಅಂಗನವಾಡಿ ಕಟ್ಟಡಕ್ಕೆ ಶಂಕುಸ್ಥಾಪನೆ, ದೊಡ್ಡ ಗರುಡನಹಳ್ಳಿ ಪಂಚಾಯತ್ ವ್ಯಾಪ್ತಿಯ ಚಾಕನಹಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ 25 ಲಕ್ಷ ವೆಚ್ಚದಲ್ಲಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿ, ಬಾಳೆ ನಹಳ್ಳಿ ಗ್ರಾಮದಿಂದ ಮಾಚಗೌಡನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಗೆ 4 ಕೋಟಿ 55 ಲಕ್ಷದ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.



ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸುತ್ತಿರುವ ಶಾಸಕ ರವಿಕುಮಾರ್ ಗಣಿಗ.

ಇದೇ ಸಂದರ್ಭದಲ್ಲಿ ಸಾರ್ವಜನಿಕರ ಅವಾಲುಗಳನ್ನು ಸ್ವೀಕರಿಸಿ ಸ್ಥಳದಲ್ಲೇ ಪರಿಹರಿಸಬಹುದಾದ ಸಮಸ್ಯೆಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿ ಮೂಲಕ ಮಾತನಾಡಿ ಕೂಡಲೇ ಕ್ರಮ ವಹಿಸುವಂತೆ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್, ಮಾಜಿ ಅಧ್ಯಕ್ಷ ಎಚ್.ಎಸ್. ಮಂಜು ಹಾಗು ಮುಖಂಡರು ಉಪಸ್ಥಿತರಿದ್ದರು.

## ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಹುದ್ದೆಗಳಿಗೆ ಅರ್ಜಿ ಆಹ್ವಾನ

ಮಂಡ್ಯ, ಮೇ 27– ವಿಕಲಚೇತನರ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಪಾಂಡವಪುರ ತಾಲೂಕಿನ ಮೇಲುಕೋಟೆ, ಹಳೆಬೀಡು ಮತ್ತು ದೊಡ್ಡಬ್ಯಾಡರಹಳ್ಳಿಗಳಲ್ಲಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಹುದ್ದೆಗಳು ಖಾಲಿಯಿದ್ದು, ಮಾಸಿಕ ಗೌರವಧನ ಪಾವತಿ ಆಧಾರದ ಮೇಲೆ ಸ್ಥಳೀಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅರ್ಹ ವಿಕಲಚೇತನರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 8088071558/08232–231090 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

# ಹೃದಯಾಘಾತ, ಬ್ರೈನ್ ಸ್ಟ್ರೋಕ್‌ಗೆ ಒಳಗಾಗುತ್ತಿದ್ದಾರೆ

ಬ್ಲಡ್ ಪ್ರೆಷರ್, ಬ್ಲಡ್ ಕೊಲೆಸ್ಟ್ರಾಲ್, ಶರೀರದ ತೂಕ–ಸೊಂಟದ ಸುತ್ತಳತೆ ಮತ್ತು ಅತಿ ಆಸೆ ಕಡಿಮೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

**ಒತ್ತಡವೂ ಧೂಮಪಾನ:** ಹಲವು ಕಾಯಿಲೆಗಳಿಗೆ ಒತ್ತಡವೇ ಪ್ರಮುಖ ಕಾರಣ. ವಿದ್ಯಾರ್ಥಿ ಜೀವನ, ವೃತ್ತಿ, ಸಂಸಾರ, ಹೀಗೆ ಎಲ್ಲೆಡೆ ಒತ್ತಡ. ಈಗ ಜನರಿಗೆ ತಾಳ್ಮೆಯೇ ಇಲ್ಲ. ಎಲ್ಲವೂ ತಕ್ಷಣಕ್ಕೇ ಆಗಬೇಕು. ಹಿಂದೆ ಸರ್ಕಾರಿ ನೌಕರರು ನಿವೃತ್ತಿ ಅಂಚಿನಲ್ಲಿ ಮನೆ ಕಟ್ಟುತ್ತಿದ್ದರು. ಈಗ ಪ್ರೊಬೇಷನರಿ ಅವಧಿಯಲ್ಲೇ ಮನೆ ಕಟ್ಟಿಸುವ ತವಕ. ಯುವ ಜನತೆಯಲ್ಲೂ ಹಂತ ಹಂತವಾಗಿ ಬೆಳೆಯುವ ಮನಃಸ್ಥಿತಿ ಇಲ್ಲ. ಸಹಿಸುವ ಗುಣ, ಸಂತೃಪ್ತ ಭಾವ ಇಲ್ಲ. ಬೇರೆಯವರು ಸಂತೋಷವಾಗಿದ್ದಾರೆ ಎನ್ನುವ ಚಿಂತೆಯಲ್ಲೇ ತಮ್ಮ ಸಂತೋಷ ಹಾಳು ಮಾಡಿಕೊಳ್ಳುತ್ತಾರೆ. ಈ ರೀತಿಯ ಒತ್ತಡದಿಂದಲೇ ಕಾಯಿಲೆಗಳು ಜಾಸ್ತಿಯಾಗಿವೆ. ಆದ್ದರಿಂದಲೇ ಒತ್ತಡವನ್ನು ಹೊಸ ರೀತಿಯ ಧೂಮಪಾನ ಎಂದು ಪರಿಗಣಿಸಲಾಗುತ್ತಿದೆ ಎಂದು ಹೇಳಿದರು.

**ವಾರ್ಷಿಕ ತಪಾಸಣೆ ಅಗತ್ಯ:** ದೇಶದಲ್ಲಿ 15 ಕೋಟಿಗಿಂತ ಹೆಚ್ಚು ಜನರಿಗೆ ಮಧುಮೇಹ ಇದೆ. ಇನ್ನೂ 15 ಕೋಟಿ ಜನ ಅದರ ಅಂಚಿನಲ್ಲಿದ್ದಾರೆ. 20–22 ಕೋಟಿ ಜನರಿಗೆ ರಕ್ತದೊತ್ತಡ(ಬಿಪಿ) ಸಮಸ್ಯೆ ಇದೆ. ಈಗಿನ ಪರಿಸ್ಥಿತಿಯಲ್ಲಿ 35 ವರ್ಷ ತುಂಬಿದ ಪುರುಷರು ಹಾಗೂ 45 ವರ್ಷ ತುಂಬಿದ ಮಹಿಳೆಯರು ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವ ದಂತೆ ಪ್ರತೀ ವರ್ಷ ವೈದ್ಯಕೀಯ ತಪಾಸಣೆ ಮಾಡಿಕೊಳ್ಳಬೇಕು. ಮಧುಮೇಹ ಹಾಗೂ ಬಿಪಿಯನ್ನು ನಿಯಂತ್ರಣದಲ್ಲಿಟ್ಟು ಕೊಳ್ಳಬೇಕು. ಆರು S(ಎಸ್)ಗಳಾದ ಶುಗರ್(ಸಕ್ಕರೆ), ಸ್ಟ್ರೆಸ್ (ಒತ್ತಡ), ಸಾಲ್ಟ್ (ಉಪ್ಪು), ಸ್ಪಿರಿಟ್ (ಮದ್ಯ), ಸ್ಮೋಕಿಂಗ್ (ಧೂಮಪಾನ) ಹಾಗೂ ಸೆಡೆಂಟರಿ ಆಕ್ಟಿವಿಟೀಸ್(ಹೆಚ್ಚು ಕುಳಿತುಕೊಳ್ಳುವುದು)ಗಳನ್ನು ಕಡಿಮೆ ಮಾಡಬೇಕು. ವ್ಯಾಯಾಮ, ಬಿಸಿಲಲ್ಲಿ ನಡೆಯುವುದು, ನಿದ್ದೆ, ವಿಶ್ರಾಂತಿ, ಆಗಾಗ ಉಪವಾಸ, ಹಣ್ಣು–ತರಕಾರಿ ಸೇವನೆಯಂತಹ ಔಷಧವಲ್ಲದ ಔಷಧಗಳನ್ನು ಬಳಸಬೇಕು. ಜೊತೆಗೆ ಕೃತಜ್ಞತೆ, ಕುಟುಂಬದವರೊಂದಿಗೆ ಆಹಾರ ಸೇವನೆ, ಉತ್ತಮರ ಗೆಳೆತನ, ಸಂತೃಪ್ತಿ, ಯೋಗ, ನಗುವುದನ್ನೂ ರೂಢಿಸಿಕೊಂಡರೆ ಕಾಯಿಲೆಗಳು ಕಡಿಮೆಯಾಗುತ್ತವೆ ಎಂದರು.

**ನಾಲಿಗೆ ಹಿಡಿತದಲ್ಲಿರಬೇಕು:** ದಾರ ಹಾಗೂ ನಾಲಿಗೆ ಉದ್ದ ಇರಬಾರದು. ದಾರವನ್ನು ಸುತ್ತಿಡುವಂತೆ ನಾಲಿಗೆಯನ್ನು ಹಿಡಿತದಲ್ಲಿಡಬೇಕು. ಶರೀರದಲ್ಲಿ ಸವೆಯದ ಅಂಗವೆಂದರೆ ಅದು ನಾಲಿಗೆ ಮಾತ್ರ ನಾಲಿಗೆ ಹರಿಬಿಟ್ಟು ವೃತ್ತಿ, ಸಮಾಜ, ಸಂಸಾರ ಹಾಗೂ ಸಾರ್ವಜನಿಕ ಜೀವನದಲ್ಲಿ ತೊಂದರೆ ಅನುಭವಿಸುತ್ತಾರೆ. ಸಜ್ಜನರ ಜೊತೆ ಮನಸ್ಸು ಬಿಚ್ಚಿ ಮಾತನಾಡಬೇಕು. ದುರ್ಜನರ ಜೊತೆ ಮೌನವಾಗಿರಬೇಕು. ನಾಲಿಗೆಗೆ ಗಾಯ ಆದರೆ ವಾಸಿಯಾಗುತ್ತದೆ, ಆದರೆ ನಾಲಿಗೆಯಿಂದ ಆದ ಗಾಯ ಮಾಯುವುದಿಲ್ಲ. ನಾವೀಗ ಬೇರೆಯವರೊಂದಿಗೆ ಮಾತನಾಡುವುದು ಕಡಿಮೆಯಾಗಿ ಬೇರೆಯ ವರ ಮಾತನಾಡುವುದೇ ಹೆಚ್ಚಾಗಿದೆ. ಆದರೆ ನಾಲಿಗೆ ಶಿಸ್ತು ಹೇಗಿರಬೇಕು ಎಂಬುದಕ್ಕೆ ದಿವಂಗತ ಎಸ್.ಎಂ.ಕೃಷ್ಣ ಅವರು ಉದಾಹರಣೆಯಾಗಿದ್ದರು. ಅಮೆರಿಕಾದಲ್ಲಿ ಅತ್ಯಾಧುನಿಕ ತರಬೇತಿ ಪಡೆದು, ಸಂಶೋಧನೆಯಲ್ಲಿ ಮುಂಚೂಣಿಯಲ್ಲಿದ್ದ ಡಾ.ಶುಶ್ರುತ ಗೌಡ, ಅಲ್ಲಿ ನ್ಯೂರೋ ಸರ್ಜನ್ ಆಗಿ ಮುಂದುವರೆಯುವ ಅವಕಾಶ ತೊರೆದು ತಾಯ್ನಾಡಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ನ್ಯೂರೋ ಝೋನ್‌ಗೆ ಮಾದರಿ ವ್ಯಕ್ತಿಯಾಗಿದ್ದ ಎಸ್.ಎಂ.ಕೃಷ್ಣ ಅವರ ಹೆಸರು ಇಟ್ಟಿರುವುದರಲ್ಲಿ ವೈವಿಧ್ಯತೆ, ವಿಶೇಷತೆ ಇದೆ. ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡಿರುವ ಉತ್ತಮ ಘಟಕದಿಂದ ಜನತೆಗೆ ಅನುಕೂಲವಾಗಲಿದೆ ಎಂದು ಆಶಿಸಿದರು.

**ಮೂಲವೃತ್ತಿ ಬಿಡಲ್ಲ:** ನಾನು ಲೋಕಸಭೆ ಸದಸ್ಯನಾದರೂ ಸೋಮವಾರ ಹಾಗೂ ಬುಧವಾರ ಹೃದ್ರೋಗ ವೈದ್ಯಕೀಯ ವೃತ್ತಿಯನ್ನು ಮುಂದುವರೆಸಿದ್ದೇನೆ. ಯಾವ ಕಾರಣಕ್ಕೂ ನಾನು ಮೂಲವೃತ್ತಿ ಬಿಡೋದಿಲ್ಲ. ಜನಪ್ರತಿನಿಧಿಯಾಗಿಯೂ ಸಂಸತ್‌ನಲ್ಲಿ ಚರ್ಚೆ ಮಾಡಿ, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಕೆಲಸ ಮಾಡುವ ನರ್ಸ್‌ಗಳ ವೇತನ 12ರಿಂದ 22 ಸಾವಿರ, ವೈದ್ಯರಿಗೆ 50ರಿಂದ 60 ಸಾವಿರಕ್ಕೆ ಹೆಚ್ಚಿಸಲು ಶ್ರಮಿಸಿದ್ದೇನೆ. ಇಷ್ಟಪಟ್ಟು ಕೆಲಸ ಮಾಡುವುದರಿಂದ ದಣಿವಾಗುವುದಿಲ್ಲ ಎಂದರು.

**ಯೋಧರಿಗೆ ಸನ್ಮಾನ:** ಕಾರ್ಯಕ್ರಮದಲ್ಲಿ ಕಾರ್ಗಿಲ್ ಯುದ್ಧದಲ್ಲಿ ಭಾಗಿಯಾಗಿದ್ದ ನಿವೃತ್ತ ಕರ್ನಲ್ ರವಿ ಹಾಗೂ ನಾಯಕ್ ರವಿ ಅವರನ್ನು ಸನ್ಮಾನಿಸ ಲಾಯಿತು. ಇದಕ್ಕೂ ಮುನ್ನ ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ.ಕೃಷ್ಣ ಅವರ ಧರ್ಮಪತ್ನಿ ಪ್ರೇಮಾ ಕೃಷ್ಣ ಅವರು ನ್ಯೂರೋ ಝೋನ್ ಕೇಂದ್ರದ ಉದ್ಘಾಟನೆ ನೆರವೇರಿಸಿದರು. ಶಾಸಕ ಜಿ.ಟಿ.ದೇವೇಗೌಡರು, ಪಬ್ಲಿಕ್ ಟಿವಿ ಸುದ್ದಿ ವಾಹಿನಿಯ ಚೇರ್ಮನ್ ಹೆಚ್.ಆರ್.ರಂಗನಾಥ್, ನ್ಯೂರೋ ಝೋನ್ ಮುಖ್ಯಸ್ಥ ಡಾ.ಶುಶ್ರುತಗೌಡ ಹಾಗೂ ಶ್ರೀಮತಿ ಧನ್ಯಾ ಶುಶ್ರುತ ಮತ್ತಿತರರಿದ್ದರು.

# ಮಕ್ಕಳನ್ನು ಸಂಭ್ರಮದಿಂದ ಸ್ವಾಗತಿಸಿ

ಶಾಲಾ ಆರಂಭೋತ್ಸವಕ್ಕೆ ಕೈಜೋಡಿಸುವಂತೆ ಸೂಚಿಸಿದ್ದಾರೆ. ಅಲ್ಲದೆ, ಗ್ರಾಮೀಣ ಭಾಗದಲ್ಲಿ ಮಕ್ಕಳ ಜತೆ ಶಿಕ್ಷಕರು ಶಾಲೆ ಪ್ರಾರಂಭಕ್ಕೂ ಮುನ್ನ ವಿಶೇಷ ದಾಖಲಾತಿ ಆಂದೋಲನ ನಡೆಸಬೇಕು. ಶಾಲಾ ಕಟ್ಟಡಗಳಿಗೆ ತಳಿರು–ತೋರಣ, ರಂಗೋಲಿ ಬಿಡಿಸಿ ಮಕ್ಕಳಿಗೆ ಸಂಭ್ರಮದ ಸ್ವಾಗತ ನೀಡಬೇಕು. ಶಾಲಾ ಮೊದಲ ದಿನದಿಂದಲೇ ಬಿಸಿ ಊಟ ಹಾಗೂ ಮೊಟ್ಟೆ, ಬಾಳೆಹಣ್ಣು, ರಾಗಿ ಮಾಲ್ಟ್ ವಿತರಿಸಬೇಕು. 2025–26ನೇ ಸಾಲಿನಿಂದ ರಾಗಿ ಮಾಲ್ಟ್ ಅನ್ನು ವಾರದ ಐದು ದಿನಗಳು ಮಕ್ಕಳಿಗೆ ವಿತರಿಸಬೇಕು. ಅಲ್ಲದೆ ಈಗಾಗಲೆ ಅಗತ್ಯ ಪಠ್ಯಪುಸ್ತಕಗಳನ್ನು ಶಾಲೆಗಳಿಗೆ ಸರಬರಾಜು ಮಾಡಲಾಗಿದ್ದು, ಸೂಕ್ತ ಸಮಯದಲ್ಲಿ ವಿದ್ಯಾರ್ಥಿಗಳಿಗೆ ವಿತರಿಸುವಂತೆ ಸೂಚಿಸಿದ್ದಾರೆ.

ಆಯಾಯ ತಾಲೂಕಿನಲ್ಲಿ ಮಿಂಚಿನ ಸಂಚಾರ ಕೈಗೊಂಡು ಶಾಲಾ ಪ್ರಾರಂಭೋತ್ಸವದ ಸಿದ್ದತೆ ಪರಿಶೀಲನೆ ನಡೆಸಬೇಕು. ಶಾಲಾ ಪ್ರಾರಂಭೋತ್ಸವಕ್ಕೆ ಆಯಾಯ ಕ್ಷೇತ್ರದ ಶಾಸಕರು, ಸ್ಥಳೀಯ ಜನಪ್ರತಿನಿಧಿಗಳು, ಎಸ್‌ಡಿಎಂಸಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು, ಊರಿನ ಮುಖಂಡರ ಉಪಸ್ಥಿತಿಗೆ ಕ್ರಮ ಜರುಗಿಸಬೇಕು. ಈ ವೇಳೆ ಶಿಕ್ಷಕರು ಹಾಜರಿದ್ದು, ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ನಿರ್ದೇಶಿಸಿದ್ದಾರೆ.

**ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಿಎಂ ಸನ್ಮಾನ:** 2025–25ನೇ ಸಾಲಿನ ಶಾಲಾ ಪ್ರಾರಂಭೋತ್ಸವವನ್ನು, ಎರಡು ವರುಷ; ಶಿಕ್ಷಣದಲ್ಲಿ ಹರುಷ ಶೀರ್ಷಿಕೆಯಡಿ ಬೆಂಗಳೂರಿನ ಆಡುಗೋಡಿಯ ಅಯ್ಯಪ್ಪ ಗಾರ್ಡನ್‌ನ ಪಟೇಲ್ ಮುನಿಚಿನ್ನಪ್ಪ ಪ್ರೌಢಶಾಲಾ ಆವರಣದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮೇ 29ರಂದು ಬೆಳಗ್ಗೆ 10 ಗಂಟೆಗೆ ಉದ್ಘಾಟಿಸಲಿದ್ದಾರೆ. ಈ ವೇಳೆ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳಿಸಿದ 40ಕ್ಕೂ ವಿದ್ಯಾರ್ಥಿಗಳ ಸನ್ಮಾನಿಸಲಾಗುತ್ತಿದೆ.

# ನನ್ನನ್ನ CM ಮಾಡಿ

ಅಧ್ಯಕ್ಷ ಸ್ಥಾನಕ್ಕೆ ಮಾಜಿ ಸಂಸದ ಹಾಗೂ ನನ್ನ ಸಹೋದರ ಡಿ.ಕೆ.ಸುರೇಶ್ ಅವರನ್ನು ನೇಮಿಸುವಂತೆ ನೀವುಗಳು ಮುಖ್ಯಮಂತ್ರಿ ಅವರಿಗೆ ಸಲಹೆ ನೀಡಿ. ಕಾರ್ಯಕರ್ತರ ಒತ್ತಾಯಕ್ಕೆ ಮಣಿದು ಸುರೇಶ್ ಒಕ್ಕೂಟಕ್ಕೆ ಆಯ್ಕೆಗೊಂಡಿದ್ದಾರೆ. ಹಾಲಿ ಅಧ್ಯಕ್ಷರ ಆಡಳಿತಾವಧಿ ಜೂನ್‌ಗೆ ಮುಗಿಯಲಿದೆ. ನಂತರ ನಡೆಯುವ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ನನ್ನ ಸಹೋದರ ಸ್ಪರ್ಧಿಸಲಿದ್ದಾರೆ ಎಂದಿದ್ದಾರೆ. ಶಿವಕುಮಾರ್ ಮಾತಿಗೆ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸಹ ಸಮ್ಮತಿಸಿದ್ದಾರೆ. ಡಿಸಿಎಂ ಮಾತನ್ನು ತಾಳ್ಮೆಯಿಂದ ಆಲಿಸಿದ ವೇಣುಗೋಪಾಲ್, ನವೆಂಬರ್ ವೇಳೆಗೆ ನಿಮಗೆ ದಕ್ಕಬೇಕಾದ ಸ್ಥಾನ ದೊರೆಯಲಿದೆ, ನೀವು ಆತಂಕಗೊಳ್ಳುವುದು, ದುಡುಕುವುದು ಬೇಡ, ಸಮಾಧಾನದಿಂದಿರಿ ಎಂದು ಸಲಹೆ ನೀಡಿದ್ದಾರೆ ಎಂದು ಮೂಲಗಳು ಅಭಿಪ್ರಾಯಪಟ್ಟಿವೆ.

# ಸರ್ಕಾರಿ ಕಾಮಗಾರಿ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇ.4ರಷ್ಟು ಮೀಸಲು ಮಸೂದೆ ಎರಡನೇ ಸಲವೂ ವಾಪಸ್

ಬೆಂಗಳೂರು, ಮೇ 28– ಸರ್ಕಾರಿ ಕಾಮಗಾರಿಗಳ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇ.4ರಷ್ಟು ಮೀಸಲು ಕಲ್ಪಿಸುವ ಉದ್ದೇಶದ 'ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಪಿಪಿ) ತಿದ್ದುಪಡಿ ವಿಧೇಯಕ'ವನ್ನು ರಾಷ್ಟ್ರಪತಿಯವರ ಪರಾಮರ್ಶೆಗೆ ಕಾದಿರಿಸಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಎರಡನೇ ಬಾರಿಗೆ ರಾಜ್ಯ ಸರಕಾರಕ್ಕೆ ವಾಪಾಸ್ ಕಳಿಸಿದ್ದಾರೆ.



ಗೆಹ್ಲೋಟ್

ಈ ಮೂಲಕ ರಾಜ್ಯಪಾಲರಿಂದಲೇ ಈ ವಿಧೇಯಕಕ್ಕೆ ಅಂಕಿತ ಪಡೆದು ಜಾರಿಗೊಳಿಸುವ ರಾಜ್ಯ ಸರ್ಕಾರದ ಪ್ರಯತ್ನಕ್ಕೆ ಹಿನ್ನಡೆಯಾದಂತಾಗಿದೆ. ಮಾರ್ಚ್‌ನಲ್ಲಿ ನಡೆದ ಅಧಿವೇಶನದಲ್ಲಿ ಅಂಗೀಕಾರ ವಾಗಿದ್ದ ವಿಧೇಯಕವನ್ನು ಸರಕಾರ ಏ.1ರಂದು ರಾಜ್ಯಪಾಲರ ಅಂಕಿತಕ್ಕೆ ಸಲ್ಲಿಸಿತ್ತು. ಅದನ್ನು ಪರಿಶೀಲಿಸಿದ್ದ ರಾಜ್ಯಪಾಲರು ಅಂಕಿತ ಹಾಕದೆ ಆರು ಪುಟಗಳ ಪತ್ರದೊಂದಿಗೆ ಕಡತ ಹಿಂದಿರುಗಿಸಿದ್ದರು.

ಧರ್ಮಾಧಾರಿತ ಮೀಸಲು ಕಲ್ಪಿಸಲು ಸಂವಿಧಾನದಲ್ಲಿ ಅವಕಾಶವಿಲ್ಲ. ಸಾಂವಿಧಾನಿಕ ತೊಡಕು, ನಿರ್ಬಂಧಗಳು ಇರುವುದರಿಂದ ಪ್ರಸ್ತಾಪಿತ ವಿಧೇಯಕಕ್ಕೆ ಅಂಕಿತ ಹಾಕುವ ಬದಲು, ರಾಷ್ಟ್ರಪತಿಗಳ ಪರಾಮರ್ಶೆಗೆ ಬಿಡುವುದು ಸೂಕ್ತವೆಂದು ಭಾವಿಸಿದ್ದೇನೆ ಎಂಬುದಾಗಿಯೂ ರಾಜ್ಯಪಾಲರು ಉಲ್ಲೇಖಿಸಿದ್ದರು. ಈ ನಡುವೆ ಕೇಂದ್ರ ಸರ್ಕಾರದ ಕಾಯಿದೆಗೆ ವ್ಯತಿರಿಕ್ತವಾಗಿರದ ಹಾಗೂ ರಾಜ್ಯಕ್ಕೆ ಸಂಬಂಧಪಟ್ಟ ಕಾಯಿದೆಗಳ ತಿದ್ದುಪಡಿಗೆ ರೂಪಿಸಿದ ವಿಧೇಯಕಗಳನ್ನು ರಾಷ್ಟ್ರಪತಿಗಳ ಅನುಮೋದನೆಗೆ ಕಳುಹಿಸುವ ಅಗತ್ಯವಿಲ್ಲ ಎಂಬುದಾಗಿ ತಮಿಳುನಾಡು ಸರ್ಕಾರ ಮತ್ತು ಅಲ್ಲಿನ ರಾಜ್ಯಪಾಲರ ನಡುವಿನ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಇತ್ತೀಚೆಗೆ ಮಹತ್ವದ ತೀರ್ಪು ನೀಡಿದೆ. ಈ ಪ್ರಕರಣವನ್ನು ಉಲ್ಲೇಖಿಸಿ ಸರ್ಕಾರವು ಅಂಕಿತ ಹಾಕುವಂತೆ ಮೇ 15ರಂದು ರಾಜ್ಯಪಾಲರಿಗೆ ಕಡತವನ್ನು 2ನೇ ಬಾರಿಗೆ ಕಳುಹಿಸಿತ್ತು.

# ಜನೌಷಧಿ ಕೇಂದ್ರ ಮುಚ್ಚಬೇಡಿ

ಬೆಂಗಳೂರು, ಮೇ 28– ಕರ್ನಾಟಕದಲ್ಲಿ ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳನ್ನು ಮುಚ್ಚಬಾರದು ಎಂದು ಒತ್ತಾಯಿಸಿ ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.



ವಿ.ಸೋಮಣ್ಣ

ಈ ಕೇಂದ್ರಗಳಲ್ಲಿ ಉತ್ತಮ ಗುಣಮಟ್ಟದ ಔಷಧಿಗಳು ಹಾಗೂ ಸರ್ಜಿಕಲ್ ಐಟಂಗಳು ರೋಗಿಗಳಿಗೆ ಅತ್ಯಂತ ಕಡಿಮೆ ದರದಲ್ಲಿ ದೊರಕುತ್ತಿತ್ತು. ಖಾಸಗಿಯವರ ಒತ್ತಡಕ್ಕೆ ಮಣಿದು ಈ ಕೇಂದ್ರಗಳನ್ನು ಮುಚ್ಚಲು ಸರ್ಕಾರ ಮುಂದಾಗಿದೆ ಎಂದು ಅವರು ದೂರಿದ್ದಾರೆ. ಸಿದ್ದರಾಮಯ್ಯ ದೀರ್ಘಕಾಲದ ರಾಜಕೀಯ ಅನುಭವ ಹೊಂದಿದ್ದಾರೆ. ಆದರೆ, ಅವರು ಬಡವರು ಹಾಗೂ ತಳವರ್ಗದ ಜನರ ಹಿತ ಕಾಯುತ್ತಿಲ್ಲ. ಸರ್ಕಾರದ ನಿರ್ಧಾರವನ್ನು ಕೂಡಲೇ ಮರುಪರಿಶೀಲನೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ. ಇದು ಬಡವರ ವಿರೋಧಿ ಕ್ರಮವಾಗಿದ್ದು, ಇದು ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಿಗೆ ನೋವುಂಟು ಮಾಡುತ್ತದೆ ಎಂದಿದ್ದಾರೆ.

# ಬೆಂಬಲ ಬೆಲೆ ಹೆಚ್ಚಳಕ್ಕೆ ಕೇಂದ್ರ ಸಂಪುಟ ಒಪ್ಪಿಗೆ

ಮತ್ತು ಮಹಾರಾಷ್ಟ್ರದಾದ್ಯಂತ ಪ್ರಮುಖ ರಸ್ತೆ ಮತ್ತು ರೈಲು ಯೋಜನೆಗಳಿಗೆ ಹಸಿರು ನಿಶಾನೆ ಸೇರಿದಂತೆ ಕೃಷಿ ಮತ್ತು ಮೂಲ ಸೌಕರ್ಯದ ಮೇಲೆ ಪರಿಣಾಮ ಬೀರುವ ಹಲವಾರು ಮಹತ್ವದ ಕ್ರಮಗಳನ್ನು ಕೇಂದ್ರ ಸಚಿವ ಸಂಪುಟ ಇಂದು ಅನುಮೋದಿಸಿದೆ. ಖಾರಿಫ್ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಹೆಚ್ಚಳವು ವೆಚ್ಚಕ್ಕಿಂತ ಶೇ.50ರಷ್ಟು ಲಾಭದ ಅಂತರವನ್ನು ಖಚಿತಪಡಿಸುತ್ತದೆ. ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗದ ಶಿಫಾರಸುಗಳ ಆಧಾರದ ಮೇಲೆ 2025–26ರ ಋತುವಿನ ಖಾರಿಫ್ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಸಂಪುಟ ಅನುಮೋದಿಸಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಬೆಳೆಗಳ ಅಂದಾಜು ಖರೀದಿ ವೆಚ್ಚವು 2.07 ಲಕ್ಷ ಕೋಟಿ ರೂ.ಗಳಷ್ಟಿದೆ. ಕಳೆದ 10–11 ವರ್ಷಗಳಲ್ಲಿ ಖಾರಿಫ್ ಬೆಳೆಗಳ ಕನಿಷ್ಠ ಬೆಂಬಲ ಬೆಲೆಗಳಲ್ಲಿ ಭಾರೀ ಏರಿಕೆ ಕಂಡುಬಂದಿದೆ. ಪ್ರಧಾನಿ ಮೋದಿ ರೈತರು ತಮ್ಮ ಉತ್ಪಾದನಾ ವೆಚ್ಚಕ್ಕಿಂತ ಕನಿಷ್ಠ ಶೇ.50 ರಷ್ಟು ಲಾಭವನ್ನು ಪಡೆಯುವುದನ್ನು ಖಚಿತಪಡಿಸಿದ್ದಾರೆ. ಬಡ್ಡಿ ಸಬ್ಸಿಡಿ ಯೋಜನೆ ಯಡಿ ಸಬ್ಸಿಡಿ ಕೃಷಿ ಸಾಲಗಳು ಮುಂದು ವರಿಯಲಿವೆ. ರೈತರಿಗೆ ರಿಯಾಯಿತಿ ಬಡ್ಡಿದರದಲ್ಲಿ ಅಲ್ಪಾವಧಿಯ ಸಾಲವನ್ನು ಒದಗಿಸುವ ಬಡ್ಡಿ ಸಬ್ಸಿಡಿ ಯೋಜನೆಯ ಮುಂದುವರಿಕೆಗೆ ಸಂಪುಟ ಅನುಮೋದನೆ ನೀಡಿದೆ.

# ಈಗ ಚುನಾವಣೆ ನಡೆದರೂ ಬಿಜೆಪಿ 150ರಿಂದ 155 ಸ್ಥಾನ ಗೆಲ್ಲಲಿದೆ!

**ಬಿಜೆಪಿ ರಾಜ್ಯ ಉಸ್ತುವಾರಿ ಡಾ.ರಾಧಾಮೋಹನ್ ದಾಸ್ ಅಗರ್ವಾಲ್ ವಿಶ್ವಾಸ**

ಬೆಂಗಳೂರು, ಮೇ 28(ಕೆಎಂಶಿ)– ಕರ್ನಾಟಕದಲ್ಲಿ ಜನರ ಒಲವು ಬಿಜೆಪಿ ಕಡೆ ತಿರುಗಿದ್ದು, ವಿಧಾನ ಸಭೆಗೆ ಈಗಲೇ ಚುನಾವಣೆ ನಡೆದರೆ ಪಕ್ಷ 150 ರಿಂದ 155 ಸ್ಥಾನಗಳಲ್ಲಿ ಗೆಲ್ಲಲಿದೆ ಎಂಬುದಾಗಿ ಸಮೀಕ್ಷೆಗಳು ತಿಳಿಸಿವೆ ಎಂದು ಪಕ್ಷದ ಕರ್ನಾಟಕ ರಾಜ್ಯ ಉಸ್ತುವಾರಿ ಡಾ.ರಾಧಾ ಮೋಹನ್ ದಾಸ್ ಅಗರ್ವಾಲ್ ತಿಳಿಸಿದ್ದಾರೆ.



ರಾಧಾ ಮೋಹನ್

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಉತ್ತಮ ಪ್ರದರ್ಶನ ನೀಡಿರಲಿಲ್ಲ. ಹಾಗಾಗಿ ಕಾಂಗ್ರೆಸ್ ಬಹುಮತ ಪಡೆದಿತ್ತು. ನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವ ಮತ್ತು ಸ್ಥಳೀಯ ನಾಯಕತ್ವದಲ್ಲಿ ಪಕ್ಷ ಚುನಾವಣೆ ಎದುರಿಸಿತ್ತು, ನಾವು 135 ಕ್ಷೇತ್ರಗಳಲ್ಲಿ ಮುನ್ನಡೆ ಪಡೆದಿದ್ದೆವು ಎಂದರು. ವಿಧಾನಸಭಾ ಚುನಾವಣೆಯಲ್ಲಿ ತಪ್ಪು ನಿರ್ಣಯ ಮಾಡಿದ್ದು ಕರ್ನಾಟಕದ ಜನತೆಗೆ ಒಂದೇ ವರ್ಷದಲ್ಲಿ ಅರಿವಾಯಿತು. ಇದೀಗ ವಿಧಾನಸಭಾ ಚುನಾವಣೆ ನಡೆದರೆ ಸಮೀಕ್ಷೆಗಳ ಪ್ರಕಾರ ಬಿಜೆಪಿ ಸರ್ಕಾರ ರಚಿಸುವ ಸಾಧ್ಯತೆ ಇದೆ.

ರಾಜ್ಯದ ಆಡಳಿತದಲ್ಲಿ ಭ್ರಷ್ಟಾಚಾರ ತೀವ್ರವಾಗಿದೆ, ಮುಸ್ಲೀಂ ತುಷ್ಟೀಕರಣ ಗರಿಷ್ಠ ಪ್ರಮಾಣಕ್ಕೆ ತಲುಪಿದೆ. ಇದೇ ಸ್ಥಿತಿ ಮುಂದುವರೆದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಕನಿಷ್ಠ ಸೀಟುಗಳಿಗೆ ಕುಸಿಯಲಿದೆ. ಕಾಂಗ್ರೆಸ್ ಕಳೆದ 2 ವರ್ಷಗಳ ಆಡಳಿತದ ಸಾಧನೆ ಸಮಾವೇಶ ಮಾಡಿತು. ಇನ್ನೊಂದೆಡೆ ಸರ್ಕಾರದ ವಿಫಲತೆಗಳ ಕುರಿತು ಬಿಜೆಪಿ ಜನರಿಗೆ ಮಾಹಿತಿ ಕೊಟ್ಟಿತು. ಅಲ್ಲದೆ, ನಾವು ಚಾರ್ಜ್‌ಶೀಟ್ ಬಿಡುಗಡೆ ಮಾಡಿದ್ದೆವು. ಸತ್ಯಾಂಶಗಳನ್ನು ಜನರಿಗೆ ತಿಳಿಸಿದ್ದರಿಂದ ಕಾಂಗ್ರೆಸ್ ಆತಂಕಗೊಂಡಿತು. ಅದು ಜನರಿಗೆ ಉತ್ತರ ಕೊಡಬೇಕಿತ್ತು. ಪ್ರಜಾಪ್ರಭುತ್ವದಲ್ಲಿ ಆರೋಪ–ಪ್ರತ್ಯಾರೋಪ ಸಾಮಾನ್ಯ ಪ್ರಕ್ರಿಯೆ, ಬಿಜೆಪಿ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಲಾಗಿದೆ ಎಂದರು.

# ರಾಜ್ಯದ 4 ಜಿಲ್ಲೆಯಲ್ಲಿ 1741 ಕೋಟಿ ಹೂಡಿಕೆ: 63 ಯೋಜನೆಗೆ ಅನುಮೋದನೆ

ಬೆಂಗಳೂರು, ಮೇ 28(ಕೆಎಂಶಿ)– ರಾಜ್ಯದ ಪ್ರಮುಖ 4 ಜಿಲ್ಲೆಗಳಲ್ಲಿ 1,741.60 ಕೋಟಿ ರೂ. ಬಂಡವಾಳ ಹೂಡಿಕೆಯ ಒಟ್ಟು 63 ಯೋಜನೆಗಳಿಗೆ ಅನುಮೋದನೆ ನೀಡಿದ್ದು, 7,219 ಜನರಿಗೆ ಉದ್ಯೋಗಾವಕಾಶ ದೊರೆಯಲಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ.



ಎಂ.ಬಿ.ಪಾಟೀಲ್

ಸಚಿವರ ಅಧ್ಯಕ್ಷತೆಯಲ್ಲಿ ನಡೆದ 153ನೇ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆ ದಕ್ಷಿಣ ಕನ್ನಡ, ತುಮಕೂರು, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಅತ್ಯಾಧುನಿಕ ಫೀಡ್ ಪ್ಲ್ಯಾಂಟ್, ಪ್ರಿ–ಫ್ಯಾಬ್ರಿಕೇಟೆಡ್ ಮ್ಯಾಡುಲರ್, ಬಸ್ ಬಾಡಿ ಬಿಲ್ಡಿಂಗ್, ವೈಮಾಂತರಿಕ್ಷ ಹಾಗೂ ರಕ್ಷಣಾ ವಲಯಕ್ಕೆ ಸಂಬಂಧಿಸಿದ ಎಲೆಕ್ಟ್ರಾನಿಕ್ ಸಿಸ್ಟಮ್ಸ್ ಮತ್ತು ಬಿಡಿಭಾಗ ತಯಾರಿಕೆ ಸೇರಿದಂತೆ 60 ಯೋಜನೆಗಳು ಮತ್ತು ಹೆಚ್ಚುವರಿ ಬಂಡವಾಳ ಹೂಡಿಕೆ 3 ಯೋಜನೆಗಳು ಒಳಗೊಂಡಂತೆ ಒಟ್ಟು 63 ಯೋಜನೆಗಳಿಗೆ ಅನುಮೋದನೆ ನೀಡಲಾಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿಯಲ್ಲಿ 97.52 ಕೋಟಿ ರೂ. ವೆಚ್ಚದ ಪ್ರಿ–ಫ್ಯಾಬ್ರಿಕೇಟೆಡ್ ಮಾಡ್ಯುಲರ್ ಪ್ರಾಡಕ್ಟ್ಸ್ ಘಟಕ, ತುಮಕೂರು ಜಿಲ್ಲೆ ಹಿರೇಹಳ್ಳಿಯಲ್ಲಿ 91.2 ಕೋಟಿ ರೂ. ವೆಚ್ಚದ ಟ್ರಾನ್ಸ್‌ಫಾರ್ಮರ್ ರೇಡಿಯೇಟರ್ ತಯಾರಿಕಾ ಘಟಕ, ದಕ್ಷಿಣ ಕನ್ನಡ ಜಿಲ್ಲೆ ಮೂಡುಬಿದಿರೆ ತಾಲೂಕಿನಲ್ಲಿ 125.88 ಕೋಟಿ ರೂ. ವೆಚ್ಚದ ಅತ್ಯಾಧುನಿಕ ಫೀಡ್ ಪ್ಲ್ಯಾಂಟ್ ಸ್ಥಾಪನೆಯಾಗಲಿದೆ.

ಅಲ್ಲದೆ, 50 ಕೋಟಿ ರೂ.ಗಳಿಗೂ ಹೆಚ್ಚು ಮೊತ್ತದ ಬಂಡವಾಳ ಹೂಡಿಕೆಯ 7 ಪ್ರಮುಖ ಬೃಹತ್ ಹಾಗೂ ಮಧ್ಯಮ ಯೋಜನೆಗಳಿಗೆ ಅನುಮೋದನೆ ನೀಡಿದ್ದು, ಇವುಗಳಿಂದ 593.80 ಕೋಟಿ ರೂ. ಬಂಡವಾಳ ಹೂಡಿಕೆಯಾಗಲಿದ್ದು, 2,093 ಜನರಿಗೆ ಉದ್ಯೋಗಾವಕಾಶ ದೊರೆಯಲಿದೆ. 15 ಕೋಟಿ ರೂ.ಗಳಿಂದ 50 ಕೋಟಿ ರೂ. ಒಳಗಿನ 53 ಹೊಸ ಯೋಜನೆಗಳಿಗೆ ಅನುಮೋದನೆ ನೀಡಿದ್ದು, ಇವುಗಳಿಂದ ರಾಜ್ಯದಲ್ಲಿ ಒಟ್ಟು 1,106.6 ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆಯಾಗಲಿದೆ. ಅಲ್ಲದೆ, 4,961 ಜನರಿಗೆ ಉದ್ಯೋಗಾವಕಾಶ ದೊರೆಯಲಿವೆ. ಹೆಚ್ಚುವರಿ ಬಂಡವಾಳ ಹೂಡಿಕೆಯ 3 ಯೋಜನೆಗಳಿಂದ 41.20 ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆಯಾಗಲಿದ್ದು, 165 ಜನರಿಗೆ ಉದ್ಯೋಗ ದೊರೆಯಲಿವೆ.

## ಅಖಂಡ ಮಹಾ ಸುದರ್ಶನ ಹೋಮ



ಮೈಸೂರಿನ ವಿಜಯನಗರದ ಶ್ರೀ ಯೋಗಾನರಸಿಂಹ ಸ್ವಾಮಿ ದೇವಾಲಯದಲ್ಲಿ ಮೇ 27ರ ಮಂಗಳವಾರ ಶ್ರೀ ಸ್ವಾಮಿಯ ಕುಂಭಾಭಿಷೇಕ ಮಹೋತ್ಸವದ ಅಂಗವಾಗಿ ಅಖಂಡ ಮಹಾ ಸುದರ್ಶನ ಹೋಮ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು. ಈ ಪೂಜಾ ಮಹೋತ್ಸವದಲ್ಲಿ ರಘುಲಾಲ್ ಅಂಡ್ ಕಂಪನಿ ಮಾಲೀಕರಾದ ರಘುಲಾಲ್ ರಾಘವನ್ ದಂಪತಿ ಪಾಲ್ಗೊಂಡಿದ್ದರು. ಈ ವೇಳೆ ದೇವಾಲಯದ ಸಂಸ್ಥಾಪಕರಾದ ಪ್ರೊ.ಭಾಷ್ಯಂ ಸ್ವಾಮೀಜಿ, ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಇನ್ನಿತರರು ಉಪಸ್ಥಿತರಿದ್ದರು.

## ವಿಕ್ರಾಂತ್ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಸರ್ವ ಸದಸ್ಯರ ಸಭೆ ನಾಳೆ

ಮೈಸೂರು,ಮೇ 28–ವಿಕ್ರಾಂತ್ ಬಡಾವಣೆಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸರ್ವಸದಸ್ಯರ ಸಭೆ ಮೇ 30 (ಶುಕ್ರವಾರ) ಬೆಳಗ್ಗೆ 10 ಗಂಟೆಗೆ ಮೊಗರಳ್ಳಿಯಲ್ಲಿ ನಡೆಯಲಿದೆ. ಶ್ರೀ ಗೊಲ್ಲಾಳೇಶ್ವರಿ ಅಮ್ಮನವರ ಪೂಜಾ ಮಹೋತ್ಸವದೊಂದಿಗೆ ವಿಕ್ರಾಂತ್ ಬಡಾವಣೆ ಅಭಿವೃದ್ಧಿಗೆ ಗುದ್ದಲಿ ಪೂಜೆ ಸಹ ನೆರವೇರಲಿದೆ. ಇದರಲ್ಲಿ ಬಡಾವಣೆ ಏಳಿಗೆಗಾಗಿ ಸಂಘದ ಪರ ವಕಾಲತು ವಹಿಸಿದ್ದ ವಕೀಲರು ಪಾಲ್ಗೊಳ್ಳಲಿದ್ದಾರೆ ಎಂದು ಸಂಘದ ಅಧ್ಯಕ್ಷ ಎಂ.ಕೆ.ಸ್ವಾಮಿಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಟ ಜಯಪ್ರಕಾಶ್‌ಗೆ ಸನ್ಮಾನ...




ಡೇರಿಂಗ್ ಸ್ಟಾರ್ ಎಸ್.ಜಯಪ್ರಕಾಶ್ (ಜೆಪಿ) ನಟಿಸಿರುವ 'ಭಗೀರಥ' ಚಲನಚಿತ್ರ ಶತದಿನೋತ್ಸವ ಆಚರಿಸಿದ ಹಿನ್ನೆಲೆಯಲ್ಲಿ ಒಂಟಿಕೊಪ್ಪಲು ದೇವಾಲಯ ಟ್ರಸ್ಟ್‌ನ ಪದಾಧಿಕಾರಿಗಳು ನಟ ಜಯಪ್ರಕಾಶ್ ಅವರನ್ನು ಸನ್ಮಾನಿಸಿದರು. ಈ ವೇಳೆ ಮಾಜಿ ಕಾರ್ಪೊರೇಟರ್ ಎಸ್‌ಬಿಎಂ ಮಂಜು, ನಾಗರಾಜ್, ಟ್ರಸ್ಟ್‌ನ ಪದಾಧಿಕಾರಿಗಳಾದ ಶ್ರೀಕಂಠ, ಬಸವರಾಜು, ನೀಲಕಂಠ, ರವಿಕುಮಾರ್, ನಟರಾಜ್, ಮಹೇಶ್‌ಗೌಡ, ಸುಬ್ಬಣ್ಣ, ಮಹೇಶ್ ಇನ್ನಿತರರು ಉಪಸ್ಥಿತರಿದ್ದರು.

## ಇಂದು ಸ್ವಯಂಪ್ರೇರಿತ ರಕ್ತದಾನ ಶಿಬಿರ

**ಮೈಸೂರು:** ಪ್ರಜ್ಞಾವಂತ ನಾಗರಿಕ ವೇದಿಕೆ, ಜೀವಧಾರ ರಕ್ತನಿಧಿ ಕೇಂದ್ರದ ವತಿಯಿಂದ ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಜಯಂತಿ ಅಂಗವಾಗಿ ಮೇ 29ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 2ರವರೆಗೆ ಜೀವಧಾರ ರಕ್ತನಿಧಿ ಕೇಂದ್ರದಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಬಿಜೆಪಿ ನಗರ ಅಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹಾದೇವಸ್ವಾಮಿ, ಬಿಜೆಪಿ ಮುಖಂಡ.ಆರ್ ರಘು ಕೌಟಿಲ್ಯ, ಮಾಜಿ ಮೇಯರ್ ಸಂದೇಶಸ್ವಾಮಿ, ಬಿಜೆಪಿ ನಗರ ಉಪಾಧ್ಯಕ್ಷೆ ಹೇಮಾ ನಂದೀಶ್, ರಾಕೇಶ್ ಭಟ್, ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಭಾಗವಹಿಸಲಿದ್ದಾರೆ.

## ಕೊಡಗಲ್ಲಿ ವ್ಯಾಪಕ ಮಳೆ: ದುಬಾರೆ ಆನೆ ಶಿಬಿರದತ್ತ ಪ್ರವಾಸಿಗರಿಗೆ ನಿರ್ಬಂಧ



ದುಬಾರೆ ಆನೆ ಕ್ಯಾಂಪ್ ಬಳಿ ಕಾವೇರಿ ನದಿ ಹರಿಯುತ್ತಿರುವ ದೃಶ್ಯ.

ಮೈಸೂರು, ಮೇ 28(ಎಂಟಿವೈ)– ಕೊಡಗಲ್ಲಿ ಸುರಿಯುತ್ತಿರುವ ವ್ಯಾಪಕ ಮಳೆಯಿಂದಾಗಿ ಕುಶಾಲನಗರದ ದುಬಾರೆ ಸಾಕಾನೆ ಶಿಬಿರಕ್ಕೆ ಪ್ರವಾಸಿಗರ ನಿರ್ಬಂಧಿಸಲಾಗಿದೆ.

ಬಿರುಗಾಳಿಯೊಂದಿಗೆ ಧಾರಾಕಾರ ಮಳೆ ಸುರಿಯುತ್ತಿದ್ದು, ರಸ್ತೆಗೆ ಮರಗಳು ಉರುಳಿ ಬೀಳುತ್ತಿವೆ. ಕಾವೇರಿ ನದಿಯಲ್ಲಿ ನೀರಿನ ಮಟ್ಟ ಹೆಚ್ಚಾಗುತ್ತಿರುವುದರಿಂದ ದುಬಾರೆ ಆನೆ ಕ್ಯಾಂಪ್‌ಗೆ ಪ್ರವಾಸಿಗರನ್ನು ಬೋಟ್‌ನಲ್ಲಿ ಕರೆದೊಯ್ಯಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಬುಧವಾರ (ಮೇ 28)ದಿಂದ ಅನಿರ್ದಿಷ್ಟಾವಧಿಗೆ ದುಬಾರೆ ಆನೆ ಕ್ಯಾಂಪ್‌ಗೆ ಪ್ರವಾಸಿಗರ ನಿಷೇಧಿಸಿರುವುದಾಗಿ ಮಡಿಕೇರಿ ವಿಭಾಗದ ಡಿಸಿಎಫ್ ಅಭಿಷೇಕ್ ತಿಳಿಸಿದ್ದಾರೆ.

**ಪ್ರಮುಖ ಆಕರ್ಷಣೆ:** ಕುಶಾಲನಗರದಲ್ಲಿರುವ ದುಬಾರೆ ಆನೆ ಕ್ಯಾಂಪ್ ಪ್ರವಾಸಿಗರ ಆಕರ್ಷಣೀಯ ಕೇಂದ್ರ. ರಾಜ್ಯ ಮಾತ್ರವಲ್ಲದೆ ಹೊರರಾಜ್ಯಗಳಿಂದಲೂ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದೆ. ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಆನೆಗಳೂ ಸೇರಿದಂತೆ ಶಿಬಿರದಲ್ಲಿ ಹಲವು ಆನೆಗಳಿವೆ. ಕಾವೇರಿ ನದಿ ತೀರದಲ್ಲಿರುವ ಈ ಆನೆ ಕ್ಯಾಂಪ್‌ಗೆ ಬೋಟ್ ಮೂಲಕ ತೆರಳಬೇಕಾಗಿದ್ದು, ಆದರೆ, ಕಾವೇರಿ ಕಣಿವೆಯಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿರುವುದಲ್ಲದೆ, ರಭಸವಾಗಿ ಹರಿಯುತ್ತಿರುವುದರಿಂದ ಪ್ರವಾಸಿಗರ ಸುರಕ್ಷಿತ ದೃಷ್ಟಿಯಿಂದ ಪ್ರವಾಸಿಗರಿಗೆ ನಿರ್ಬಂಧ ವಿಧಿಸಲಾಗಿದೆ.

### ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ '70'; ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜನೆ

# ಆಣ್ವಿಕ ಔಷಧ ಕ್ಷೇತ್ರದ ಬಗ್ಗೆ ಹೆಚ್ಚಿನ ಸಂಶೋಧನೆ ಅಗತ್ಯ

### ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಲಹೆ

ಮೈಸೂರು, ಮೇ28(ಬಿಎಲ್‌ಯು)– ಆಣ್ವಿಕ ಔಷಧ ಕ್ಷೇತ್ರದ ಬಗ್ಗೆ ಹೆಚ್ಚಿನ ಸಂಶೋಧನೆ ಅತ್ಯಗತ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಅಭಿಪ್ರಾಯಪಟ್ಟರು.

ನಗರದ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳೂ ಆದ ಅಂತರರಾಷ್ಟ್ರೀಯ ಖ್ಯಾತಿಯ ವಿಜ್ಞಾನಿ ಪ್ರೊ. ಕೆ.ಎಸ್.ರಂಗಪ್ಪನವರ 70ನೇ ಜನ್ಮದಿನದ ಹಿನ್ನೆಲೆಯಲ್ಲಿ ಏರ್ಪಡಿಸಲಾಗಿರುವ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ, ಎನ್‌ಸಿಐಎಂಎಂ ಆಯೋಜಿಸಿದ್ದ ಆಣ್ವಿಕ ಔಷಧ ಕ್ಷೇತ್ರದ ಹೊಸ ಸವಾಲುಗಳು ಮತ್ತು ನಾವೀನ್ಯತೆಗಳು ಕುರಿತ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಆಣ್ವಿಕ ಔಷಧದ ಬಗ್ಗೆ ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳು ಈ ಕ್ಷೇತ್ರದ ಹಿರಿಯ ವಿಜ್ಞಾನಿಗಳ ಜೊತೆ ಸಮಾಲೋಚನೆ ನಡೆಸಿ ಅವರ ಮಾರ್ಗದರ್ಶನ ಪಡೆಯಬೇಕು ಎಂದು ಕಿವಿಮಾತು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯವು ಜಾಗತಿಕವಾಗಿ ದೀರ್ಘ ಕಾಲದ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದೆ. ಇಂತಹ ಮಹತ್ವದ ಸಂವಾದಕ್ಕೆ ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತಿರುವುದು ಇದಕ್ಕೆ ಸ್ಪಷ್ಟ ನಿದರ್ಶನವಾಗಿದೆ ಎಂದು ಪ್ರೊ.ಲೋಕನಾಥ್ ಅಭಿಪ್ರಾಯಪಟ್ಟರು.

ಇಂದು ಮತ್ತು ನಾಳೆ ಇಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಆಣ್ವಿಕ ವಿಚಾರಕ್ಕೆ ಸಂಬಂಧಿಸಿದಂತೆ ಹಲವು ವಿಚಾರಗಳು ಮಂಡನೆಯಾಗಲಿದ್ದು, ಹೊಸ ವಿಚಾರಗಳಿಗೆ ಬೆಳಕಾಗಲಿದೆ ಎಂದರು.

ಆಣ್ವಿಕ ಕ್ಷೇತ್ರದ ಮುಂದೆ ಹಲವು ಸವಾಲುಗಳಿದ್ದು, ವೈಜ್ಞಾನಿಕ ಸಂಶೋಧನೆ ಮೂಲಕ ಇವುಗಳನ್ನು ಪರಿಹಾರ ಮಾಡಬೇಕು. ಇದಕ್ಕೆ ಇಂದು ಮತ್ತು ನಾಳೆ ನಡೆಯುವ ಸಮ್ಮೇಳನ ವೈಜ್ಞಾನಿಕ ಜ್ಞಾನವನ್ನು ಹೆಚ್ಚಿಸಲಿದೆ ಎಂದು ಹೇಳಿದರು.


ಇದೇ ವೇಳೆ ಮಾತನಾಡಿದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಅವರು, ತಮ್ಮ ವಿದ್ಯಾರ್ಥಿ ಜೀವನ ಹಾಗೂ ತಾವು ಎದುರಿಸಿದ ಸವಾಲುಗಳನ್ನು ವಿವರಿಸಿದರು. ನಾನು ಅಮೇರಿಕಾದಲ್ಲಿ ಉನ್ನತ ವ್ಯಾಸಂಗ ಮುಗಿಸಿ ಭಾರತಕ್ಕೆ ಬಂದ ಸಂದರ್ಭದಲ್ಲಿ ಪ್ರೊ.ಗೋವರ್ಧನ್ ಮೆಹ್ತಾ ನೀಡಿದ ಸಹಕಾರವನ್ನು ಸ್ಮರಿಸಿದರು.

ಅಂದು ಪ್ರೊ.ಮೆಹ್ತಾ ಅವರು ಸಂಶೋಧನೆಗೆ ನೀಡಿದ 5 ಲಕ್ಷ ರೂಪಾಯಿ ಇಂದು ಕೋಟಿಗಟ್ಟಲೆ ಬೆಲೆ ಬಾಳುವ ಫಲಿತಾಂಶ ನೀಡಿದೆ. ಇದಕ್ಕೆ ನಾನು ಪ್ರೊ. ಮೆಹ್ತಾಗೆ ಕೃತಜ್ಞನಾಗಿದ್ದೇನೆ ಎಂದು ಹೇಳಿದರು.

ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್‌ನ ಮಾಜಿ ನಿರ್ದೇಶಕರೂ ಆದ ಖ್ಯಾತ ವಿಜ್ಞಾನಿ ಪ್ರೊ.ಗೋವರ್ಧನ್ ಮೆಹ್ತಾ ಮಾತನಾಡಿ, ವಿಜ್ಞಾನ ಕ್ಷೇತ್ರದಲ್ಲಿ ಹೆಚ್ಚು ಸಂಶೋಧನೆಗಳು ನಡೆಯಬೇಕು. ಪರಿಣಾಮಕಾರಿಯಾದ ಸಂಶೋಧನೆ ಅತ್ಯಗತ್ಯವಾಗಿದ್ದು, ಮುಂದಿನ ಭವಿಷ್ಯಕ್ಕೆ ಇದು ದಾರಿದೀಪವಾಗಿದೆ ಎಂದು ಅಭಿಪ್ರಾಯಪಟ್ಟರು.

ಯಾವುದೇ ರೀತಿಯ ಸಂಶೋಧನೆ ಯಶಸ್ವಿಯಾಗಿ ಸಾಗಬೇಕಾದರೆ ಮಾರ್ಗದರ್ಶಕರು ಪ್ರಮುಖ ಪಾತ್ರ ವಹಿಸುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರೊ.ರಂಗಪ್ಪ ಅವರು ದಾಖಲೆ ನಿರ್ಮಾಣ ಮಾಡಿದ್ದಾರೆ ಎಂದರು.

ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸಂಶೋಧನಾ ಪ್ರಾಧ್ಯಾಪಕ ಪ್ರೊ.ಟಿ.ಪಿ.ಸಿಂಗ್, ಸೆಂಟ್ರಲ್ ಡ್ರಗ್ ರಿಸರ್ಚ್ ಇನ್ಸಿಟ್ಯೂಟ್‌ನ ಮಾಜಿ ನಿರ್ದೇಶಕ ಪ್ರೊ.ತಾಪಸ್ ಕುಮಾರ್ ಕುಂಡು, ಸನ್ ಫಾರ್ಮಾದ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಟಿ.ರಾಜಾಮನ್ನಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.




ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಎನ್‌ಸಿಐಎಂಎಂ ಆಯೋಜಿಸಿದ್ದ ಆಣ್ವಿಕ ಔಷಧ ಕ್ಷೇತ್ರದ ಹೊಸ ಸವಾಲುಗಳು ಮತ್ತು ನಾವೀನ್ಯತೆಗಳು ಕುರಿತ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್‌ನ ಮಾಜಿ ನಿರ್ದೇಶಕರೂ ಆದ ಖ್ಯಾತ ವಿಜ್ಞಾನಿ ಪ್ರೊ.ಗೋವರ್ಧನ್ ಮೆಹ್ತಾ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು.

### ತಮಿಳಿನಿಂದ ಕನ್ನಡ ಹುಟ್ಟಿತು ಎಂಬ ಹೇಳಿಕೆ ಖಂಡಿಸಿ

## ಮೈಸೂರಲ್ಲಿ ಕಮಲ್‌ಹಾಸನ್ ವಿರುದ್ಧ ಪ್ರತಿಭಟನೆ

ಮೈಸೂರು, ಮೇ28(ಜಿಎ)–ತಮಿಳಿನಿಂದ ಕನ್ನಡ ಹುಟ್ಟಿತು ಎಂದು ತಮಿಳು ನಟ ಕಮಲ್‌ಹಾಸನ್ ನೀಡಿರುವ ಹೇಳಿಕೆ ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ಮೈಸೂರಿನ ಹಳೆ ಡಿಸಿ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಿತು.

ಸಾವಿರಾರು ವರ್ಷಗಳ ಭವ್ಯ ಇತಿಹಾಸವಿರುವ, ಸ್ವತಂತ್ರ ಲಿಪಿ ಹೊಂದಿರುವ, ಶಾಸ್ತ್ರೀಯ ಸ್ಥಾನಮಾನ ಹೊಂದಿರುವ ಶ್ರೀಮಂತ ಭಾಷೆ ಕನ್ನಡ. ಕೋಟ್ಯಾಂತರ ಕನ್ನಡಿಗರ ಜೀವನಾಡಿ ಆಗಿರುವ ಹೆಮ್ಮೆಯ ಕನ್ನಡ ಭಾಷೆಗೆ ಕಮಲ್‌ಹಾಸನ್ ಅವರು ತಮಿಳಿನಿಂದ ಕನ್ನಡ ಹುಟ್ಟಿದ್ದು ಎಂದು ಹೇಳಿ ಕನ್ನಡ ಭಾಷೆಗೆ ಅವಮಾನಿಸಿರುವುದು ಅತ್ಯಂತ ಖಂಡನೀಯ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ನಮ್ಮ ಕನ್ನಡ ಭಾಷೆಯಲ್ಲಿ 52 ಅಕ್ಷರಗಳಿವೆ. ಆದರೆ ತಮಿಳು ಭಾಷೆಯಲ್ಲಿ ಕೇವಲ 18 ಅಕ್ಷರಗಳಿವೆ. ಕನ್ನಡದ ಬಗ್ಗೆ ಅರಿಯದ, ಭಾಷೆಗಳ ಬಗ್ಗೆ ಜ್ಞಾನ ಇಲ್ಲದ ಕಮಲಹಾಸನ್ ಈ ರೀತಿ ಹೇಳಿಕೆ ನೀಡಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ. ಬಹುಶಃ ಸಂಸ್ಕೃತ ಬಿಟ್ಟರೆ ಕನ್ನಡ ಭಾಷೆ ಬಹಳ ಪ್ರಾಚೀನ ಭಾಷೆ. ಅದಕ್ಕಾಗಿ ಕನ್ನಡ ಭಾಷೆಗೆ 8 ಜ್ಞಾನಪೀಠ ಪ್ರಶಸ್ತಿಗಳು ಲಭಿಸಿವೆ. ಅಲ್ಲದೆ, ಇತ್ತೀಚೆಗೆ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಸಹ ನಮ್ಮ ಕನ್ನಡಕ್ಕೆ ಸಿಕ್ಕಿದೆ ಎಂಬುದನ್ನು ಕಮಲಹಾಸನ್ ಅರಿಯಬೇಕಿದೆ ಎಂದರು.

ಕೂಡಲೇ ಕಮಲ್‌ಹಾಸನ್ ಕನ್ನಡಿಗರ ಹಾಗೂ ಕನ್ನಡ ಭಾಷೆ ಬಗ್ಗೆ ಕ್ಷಮೆ ಕೇಳಬೇಕು. ಇಲ್ಲವಾದರೆ ಮುಂದಿನ ವಾರ ತೆರೆ ಕಾಣಲಿರುವ ಅವರ ಸಿನಿಮಾವನ್ನು ರಾಜ್ಯಾದ್ಯಂತ ಬಹಿಷ್ಕರಿಸಿ ಬಿಡುಗಡೆಯಾಗದಂತೆ ತಡೆಹಿಡಿಯುತ್ತೇವೆಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಕರ್ನಾಟಕ ಸೇನಾಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಗೋಲ್ಡ್ ಸುರೇಶ್, ಪ್ರಭುಶಂಕರ, ನೇಹಾ, ಬೋಗಾದಿ ಸಿದ್ದೇಗೌಡ, ಕೃಷ್ಣಪ್ಪ, ಗಿರೀಶ್, ಶಿವಕುಮಾರ್, ಗಣೇಶ್, ಹನುಮಂತಯ್ಯ, ಮೂರ್ತಿ ಲಿಂಗಯ್ಯ, ದರ್ಶನ್ ಗೌಡ, ಕೃಷ್ಣೇಗೌಡ, ರವೀಶ್, ಪ್ರಭಾಕರ್, ನಾಗರಾಜ್, ಶಿವಾಂಗೌಡ, ರಘು ಅರಸ್, ಎಳನೀರು ರಾಮಣ್ಣ ಮತ್ತಿತರರಿದ್ದರು.



ಕರ್ನಾಟಕ ಸೇನಾಪಡೆಯಿಂದ ಕಮಲ್‌ಹಾಸನ್ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

## ಜೂ.4, ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆ

ಮೈಸೂರು, ಮೇ 28– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜೂನ್ 4ರಂದು ರಾಜ್ಯ ಮಟ್ಟದಲ್ಲಿ 'ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ'ಯನ್ನು ಮೈಸೂರಿನಲ್ಲಿ ಆಯೋಜಿಸಲಾಗಿದ್ದು, ಈ ಸಂಬಂಧ ಆ ದಿನದಂದು ಬೆಳಗ್ಗೆ 8.30 ಗಂಟೆಗೆ 'ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಜೀವನ ಮತ್ತು ಸಾಧನೆಗಳ ಕುರಿತು' ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಕಲಾಮಂದಿರದಲ್ಲಿ ಆಯೋಜಿಸಲಾಗಿದೆ.

ಈ ಸ್ಪರ್ಧೆಯನ್ನು 6 ರಿಂದ 13 ವರ್ಷ ಮತ್ತು 14ರಿಂದ 18 ವರ್ಷಗಳ ವಯೋಮಿತಿಗೆ ಒಳಪಟ್ಟಂತೆ ಎರಡು ವಿಭಾಗಗಳಲ್ಲಿ ನಡೆಸಲಾಗುತ್ತಿದ್ದು, ಭಾಗವಹಿಸುವ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ಪ್ರತಿ ವಿಭಾಗದಲ್ಲಿ ತಲಾ ಮೂರು (ಪ್ರಥಮ, ದ್ವಿತೀಯ, ತೃತೀಯ) ಬಹುಮಾನ ನೀಡಲಾಗುತ್ತದೆ. ವಿಜೇತರಿಗೆ ಪ್ರಶಸ್ತಿ ಪತ್ರ, ಪುಸ್ತಕಗಳು ಹಾಗೂ ನಗದು ರೂಪದಲ್ಲಿ ಬಹುಮಾನವನ್ನು 'ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ'ಯ ದಿನದಂದೆ ಬೆಳಗ್ಗೆ 11.30 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ನಡೆಯುವ ಸಭಾ ಕಾರ್ಯಕ್ರಮದಲ್ಲಿ ನೀಡಲಾಗುವುದು.

ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವ ಆಸಕ್ತರು URL https://forms.gle/SkMT6PYZbAt6yizv6 ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ. ಮಾಹಿತಿಗಾಗಿ ಕಚೇರಿ ದೂ.ಸಂ: 0821–2513225 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ಮೈಸೂರಲ್ಲಿ ವಾಣಿಜ್ಯ ವಾಹನಗಳಿಗೆ ಫಿಟ್‌ನೆಸ್ ಸರ್ಟಿಫಿಕೇಟ್ ನೀಡುವ ಪ್ರಕ್ರಿಯೆ ಸ್ಥಗಿತ

### ಎಂಓಆರ್‌ಟಿಪಿಹೆಚ್ ಸೇವೆಗೆ ನಿರ್ಬಂಧ ವಿಧಿಸಿರುವುದರಿಂದ ಚಲನ್ ಸೃಜಿಸಲು ತೊಂದರೆ; ಎಟಿಎಸ್‌ನಲ್ಲೇ ಚಲನ್ ಸೃಜಿಸಬೇಕೆಂಬುದು ಸರ್ಕಾರದ ಆದೇಶ: ಆರ್‌ಟಿಓ (ಪಶ್ಚಿಮ) ಸ್ಪಷ್ಟನೆ

ಮೈಸೂರು, ಮೇ 28(ಆರ್‌ಕೆ)– ಸಂಚಾರಕ್ಕೆ ಸಾಮರ್ಥ್ಯ ಹೊಂದಿದೆ ಎಂದು ವಾಣಿಜ್ಯ ವಾಹನಗಳಿಗೆ ಫಿಟ್‌ನೆಸ್ ಸರ್ಟಿಫಿಕೇಟ್ (ಎಫ್‌ಸಿ) ನೀಡುವ ಪ್ರಕ್ರಿಯೆ ಮೈಸೂರು ಆರ್‌ಟಿಓ ಕಚೇರಿಯಲ್ಲಿ ಸ್ಥಗಿತಗೊಂಡಿದೆ.

ಕಳೆದ 10 ದಿನಗಳಿಂದ ಹಳದಿ ನಂಬರ್ ಪ್ಲೇಟ್ ಹೊಂದಿರುವ ವಾಣಿಜ್ಯ ವಾಹನಗಳಿಗೆ ಎಫ್‌ಸಿ ನೀಡದಿರುವುದರಿಂದ ಆಟೋ, ಟೆಂಪೋ, ಟ್ರಕ್, ಲಾರಿ, ಕೆಎಸ್‌ಆರ್‌ಟಿಸಿ ಬಸ್, ಖಾಸಗಿ ಬಸ್‌ಗಳ ಸಂಚಾರಕ್ಕೆ ತೊಂದರೆಯಾಗಿದ್ದು, ಮಾಲೀಕರು ಪರದಾಡುತ್ತಿದ್ದಾರೆ. ವಾಹನಗಳ ಎಫ್‌ಸಿ ಮಾಡಿಸಲು ಬರುವ ಮಾಲೀಕರು ರಾಜೀವ್‌ನಗರ ಆರ್‌ಟಿಓ (ಪೂರ್ವ) ಕಚೇರಿಯ ಸ್ವಯಂಚಾಲಿತ ಪರೀಕ್ಷಾ ಕೇಂದ್ರ (ಎಟಿಎಸ್)ದಲ್ಲಿ ನಿತ್ಯ ಸಾಲುಗಟ್ಟಿ ನಿಂತು ನಿರಾಸೆಯಿಂದ ಹಿಂತಿರುಗುತ್ತಿದ್ದಾರೆ.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ (ಉತ್ತರ) ನೀಡಿರುವ ಮಾರ್ಗಸೂಚಿಗಳನ್ನು ಪಾಲಿಸದಿರುವುದು ವಾಣಿಜ್ಯ ವಾಹನಗಳ ತಪಾಸಣಾ ಪ್ರಕ್ರಿಯೆ ಸ್ಥಗಿತಗೊಳಿಸಲು ಪ್ರಮುಖ ಕಾರಣವಾಗಿದೆ. 2022ರ ಏಪ್ರಿಲ್ 5ರಂದು ಸಚಿವಾಲಯ ಹೊರಡಿಸಿದ್ದ ಅಧಿಸೂಚನೆಯಲ್ಲಿ 2023ರ ಏಪ್ರಿಲ್ ಮಾಹೆಯಿಂದ ಸ್ವಯಂಚಾಲಿತ ಪರೀಕ್ಷಾ ಕೇಂದ್ರಗಳ ಮೂಲಕವೇ ಫಿಟ್‌ನೆಸ್ ತಪಾಸಣೆ ಮಾಡಬೇಕೆಂದು ಕಡ್ಡಾಯಗೊಳಿಸಲಾಗಿತ್ತು. ಮಧ್ಯಮ ಸರಕು ಸಾಗಣೆ ವಾಹನಗಳು, ಮೋಟಾರು ವಾಹನಗಳು ಮತ್ತು ಲಘು ಮೋಟಾರು ವಾಹನಗಳಿಗೆ 2024ರ ಜೂನ್ 1ರಿಂದ ಫಿಟ್‌ನೆಸ್ ಪರೀಕ್ಷೆಯನ್ನು ಕಡ್ಡಾಯ ಮಾಡಲಾಗಿತ್ತು.

ಅಲ್ಲದೇ, 8 ವರ್ಷ ಹಳೆಯದಾದ ವಾಣಿಜ್ಯ ವಾಹನ (ಸಾರಿಗೆ)ಗಳು 2 ವರ್ಷ ಅವಧಿಗೆ ಫಿಟ್‌ನೆಸ್ ಪ್ರಮಾಣ ಪತ್ರ ನವೀಕರಿಸಬೇಕೆಂದು ಅಧಿಸೂಚನೆಯಲ್ಲಿ ಉಲ್ಲೇಖಿಸಲಾಗಿದೆ. ಆದಾಗ್ಯೂ ಖಾಸಗಿ ವಾಹನ (ಸಾರಿಗೆಯೇತರ)ಗಳಿಗೆ ಫಿಟ್‌ನೆಸ್ ಪರೀಕ್ಷೆಯನ್ನು ನೋಂದಣಿ ದಿನಾಂಕದಿಂದ 15 ವರ್ಷಗಳ ನಂತರ ಮಾಡಲಾಗುತ್ತದೆ.

ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದ ಬಳಿಕ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ನೆಲಮಂಗಲ ಆರ್‌ಟಿಓ ಕಚೇರಿ, ಮೈಸೂರಿನ ಪೂರ್ವ ಮತ್ತು ಪಶ್ಚಿಮ ಆರ್‌ಟಿಓ, ಧಾರವಾಡ ಪೂರ್ವ ಮತ್ತು ಪಶ್ಚಿಮ ಆರ್‌ಟಿಓ ಕಚೇರಿಗಳ ಸ್ವಯಂಚಾಲಿತ ಪರೀಕ್ಷಾ ಕೇಂದ್ರಗಳಲ್ಲಿ ಫಿಟ್‌ನೆಸ್ ಪ್ರಮಾಣಪತ್ರಗಳಿಗಾಗಿ ಚಲನ್ ಸೃಜನೆಯಾಗುತ್ತಿತ್ತು. ಆದರೆ, ಕಳೆದ 10 ದಿನಗಳಿಂದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಆರ್‌ಟಿಓಗಳಲ್ಲಿ ಚಲನ್ ಸೃಜನೆ ಪ್ರಕ್ರಿಯೆಯನ್ನು ನಿರ್ಬಂಧಿಸಿರುವುದರಿಂದ ವಾಹನಗಳ ಫಿಟ್‌ನೆಸ್ ಪ್ರಕ್ರಿಯೆಯು ಸ್ಥಗಿತಗೊಂಡಿದೆ.



> "ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಚಲನ್ ಸೃಜಿಸುವ ತಂತ್ರಾಂಶವನ್ನು ದೆಹಲಿಯಲ್ಲಿ ಸ್ಥಗಿತಗೊಳಿಸಿರುವುದರಿಂದ ಕಳೆದ 10 ದಿನಗಳಿಂದ ವಾಣಿಜ್ಯ ವಾಹನಗಳ ಎಫ್‌ಸಿ ಮಾಡಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದ್ದು, ಅತೀ ಶೀಘ್ರ ಸಮಸ್ಯೆ ಬಗೆಹರಿಯಲಿದೆ.
> – ಸಿ.ಎನ್.ರಾಮಚಂದ್ರ, ಆರ್‌ಟಿಓ (ಪಶ್ಚಿಮ), ಮೈಸೂರು

## ನಾಳೆ ಕೋವಿಡ್–19 ಕುರಿತು ಡಿಹೆಚ್‌ಓ ಜೊತೆ ಫೋನ್–ಇನ್ ಕಾರ್ಯಕ್ರಮ

ಮೈಸೂರು, ಮೇ 28– ಪ್ರಸ್ತುತ ಕೋವಿಡ್–19 ಕುರಿತು ಮೇ 30 ರಂದು ಬೆಳಗ್ಗೆ 11.30 ರಿಂದ 12.30ರವರೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಅವರ ಜೊತೆ ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮವನ್ನು ಮೈಸೂರಿನ ಜೆಎಸ್‌ಎಸ್ ರೇಡಿಯೋ 91.2ಎಫ್‌ಎಂ ಸಮುದಾಯ ಬಾನುಲಿ ಕೇಂದ್ರದಲ್ಲಿ ಆಯೋಜಿಸಲಾಗಿದೆ.



ಡಾ.ಕುಮಾರಸ್ವಾಮಿ

ಸಾರ್ವಜನಿಕರು ಹಾಗೂ ಆರೋಗ್ಯ ಕಾರ್ಯಕರ್ತರು ಕೋವಿಡ್–19 ಕುರಿತು ಯಾವುದೇ ಪ್ರಶ್ನೆಗಳು, ಆತಂಕ, ಅನುಮಾನಗಳು ಇದ್ದಲ್ಲಿ ಅಥವಾ ಸಲಹೆ ಬೇಕಿದ್ದಲ್ಲಿ ಮೊಬೈಲ್ 8296725912, 0821–2546563 ಸಂಖ್ಯೆಗೆ ಕರೆ ಮಾಡಿ ನೇರವಾಗಿ ಜಿಲ್ಲಾ ಆರೋಗ್ಯಾಧಿಕಾರಿಗಳ ಜೊತೆ ಮಾತನಾಡಬಹುದು.

ಜೆಎಸ್‌ಎಸ್ ರೇಡಿಯೋವನ್ನು ಪ್ಲೇಸ್ಟೋರ್‌ನಲ್ಲಿ ಲಭ್ಯವಿರುವ ಆ್ಯಪ್ ಮೂಲಕವೂ ವಿಶ್ವದ ಯಾವುದೇ ಮೂಲೆಯಲ್ಲಾದರೂ ಆಲಿಸಬಹುದು.

# ದೇಶ – ವಿದೇಶ

## ಕುಡಿದು ಡ್ಯಾನ್ಸ್ ಮಾಡುವಂತೆ ಆಸ್ಟ್ರೇಲಿಯಾ ನೂತನ ಸಂಸದೆಗೆ ಒತ್ತಾಯ


**ಆಸ್ಟ್ರೇಲಿಯಾ:** ಆಸ್ಟ್ರೇಲಿಯಾದಲ್ಲಿರುವ ಮುಸ್ಲಿಂ ಸಂಸದೆ ಫಾತಿಮಾ ಪೇಮನ್ ಅವರು ಮದ್ಯಪಾನ ಮಾಡಿ ನೃತ್ಯ ಮಾಡಲು ಒತ್ತಾಯಿಸಲಾಯಿತು ಎಂದು ಸಂಸದೀಯ ಕಾವಲುಗಾರರಿಗೆ ದೂರು ನೀಡಿದ್ದಾರೆ. ನನ್ನ ಪುರುಷ ಸಹೋದ್ಯೋಗಿಗಳಲ್ಲಿ ಒಬ್ಬರು ನನ್ನನ್ನು ಮದ್ಯಪಾನ ಮಾಡಿ ಮೇಜಿನ ಮೇಲೆ ನೃತ್ಯ ಮಾಡಲು ಕೇಳಿದ್ದಾರೆ ಎಂದು ಫಾತಿಮಾ ಆರೋಪಿಸಿದ್ದಾರೆ.



ಸೆನೆಟರ್ ಫಾತಿಮಾ ಪೇಮನ್ (30) ಮದ್ಯಪಾನ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಅಧಿಕೃತ ಸಮಾರಂಭದಲ್ಲಿ ಕುಡಿದು ಟೈಟಾದ ನಂತರ ತಮ್ಮ ಹಿರಿಯ ಸಹೋದ್ಯೋಗಿ ಹಲವಾರು ಅನುಚಿತ ಕಾಮೆಂಟ್‌ಗಳನ್ನು ಮಾಡಿದ್ದಾರೆ ಎಂದು ಅವರು ಹೇಳಿಕೊಂಡಿದ್ದಾರೆ. ನೀವು ಸ್ವಲ್ಪ ಮದ್ಯಪಾನ ಮಾಡಿ ಮೇಜಿನ ಮೇಲೆ ನೃತ್ಯ ಮಾಡುವುದನ್ನು ನೋಡೋಣ ಎಂದು ಹೇಳಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಪೇಮನ್ ಅಫ್ಘಾನಿಸ್ತಾನದಲ್ಲಿ ಜನಿಸಿದ್ದು ಆಸ್ಟ್ರೇಲಿಯಾದ ಸಂಸತ್ತಿನಲ್ಲಿ ಹಿಜಾಬ್ ಧರಿಸಿದ ಮೊದಲ ಮುಸ್ಲಿಂ ಸಂಸದೆ ಆಗಿದ್ದಾರೆ. ಸ್ವತಂತ್ರ ಸಂಸದೆ ಪೇಮನ್ ಗಾಜಾದಲ್ಲಿ ಪ್ಯಾಲೆಸ್ಟೀನಿಯನ್ನರಿಗೆ ಸಹಾಯ ಮಾಡುವಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಿಸಿ 2024ರಲ್ಲಿ ಎಡಪಂಥೀಯ ಲೇಬರ್ ಸರ್ಕಾರದಿಂದ ಬೇರ್ಪಟ್ಟರು.

## ಅತ್ಯಾಚಾರ ಆರೋಪಿಗೆ ಸುಪ್ರೀಂ ಮಧ್ಯಂತರ ಜಾಮೀನು

**ನವದೆಹಲಿ:** 40 ವರ್ಷದ ಮಹಿಳೆ ಮೇಲೆ ಅತ್ಯಾಚಾರ ಎಸಗಿದ 23 ವರ್ಷದ ಆರೋಪಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ನೀಡಿದೆ. 9 ತಿಂಗಳಿಂದ ಜೈಲಿನಲ್ಲಿದ್ದರೂ ಆರೋಪಿ ವಿರುದ್ಧ ಆರೋಪಗಳನ್ನು ಸಾಬೀತುಪಡಿಸಲು ಆಗಿಲ್ಲ ಎಂದು ಹೇಳಿದೆ ಅಲ್ಲದೆ ಅತ್ಯಾಚಾರವಾಗಿದೆ ಎಂದು ಹೇಳುವ ಮಹಿಳೆ ಮಗುವಲ್ಲ, ಒಂದು ಕೈಯಿಂದ ಚಪ್ಪಾಳೆ ಹೊಡೆಯಲು ಸಾಧ್ಯವಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿದೆ. ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಸತೀಶ್ ಚಂದ್ರ ಶರ್ಮಾ ಅವರನ್ನೊಳಗೊಂಡ ಪೀಠವು, ಒಂದೇ ಕೈಯಿಂದ ಚಪ್ಪಾಳೆ ತಟ್ಟಲು ಸಾಧ್ಯವಿಲ್ಲ. ನೀವು ಯಾವ ಆಧಾರದ ಮೇಲೆ ಐಪಿಸಿ ಸೆಕ್ಷನ್ 376ರ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದೀರಿ. ಆಕೆ ಮಗುವಲ್ಲ. ಮಹಿಳೆಗೆ 40 ವರ್ಷ. ಅವರಿಬ್ಬರು ಒಟ್ಟಿಗೆ ಜಮ್ಮುವಿಗೆ 7 ಸಲ ಹೋಗಿದ್ದರು. ಆಕೆಯ ಪತಿಯೇ ಆಕ್ಷೇಪವೆತ್ತಲಿಲ್ಲ, ಹೀಗಿರುವಾಗ ಇದನ್ನು ಅತ್ಯಾಚಾರ ಎಂದು ಹೇಗೆ ಕರೆಯುವಿರಿ ಎಂದು ಕಟು ಶಬ್ದಗಳಲ್ಲಿ ನ್ಯಾಯಾಧೀಶರು ಛೀಮಾರಿ ಹಾಕಿದ್ದಾರೆ. ಆರೋಪಿ 9 ತಿಂಗಳಿಂದ ಜೈಲಿನಲ್ಲಿದ್ದು, ಪ್ರಕರಣದಲ್ಲಿ ಆರೋಪಗಳನ್ನು ಹೊರಿಸಲಾಗಿಲ್ಲವಾದ್ದರಿಂದ ಇದು ಮಧ್ಯಂತರ ಜಾಮೀನು ನೀಡಲು ಸೂಕ್ತವಾದ ಪ್ರಕರಣ ಎಂದು ಸುಪ್ರೀಂಕೋರ್ಟ್ ಹೇಳಿದೆ.



## ಇರಾನ್‌ನಲ್ಲಿ ಮೂವರು ಭಾರತೀಯರ ಅಪಹರಣ

**ಟೆಹ್ರಾನ್:** ಪಂಜಾಬ್‌ನ ಸಂಗ್ರೂರ್, ಹೋಶಿಯಾರ್‌ಪುರ್ ಮತ್ತು ಎಸ್‌ಬಿಎಸ್ ನಗರದಿಂದ ಇರಾನ್‌ಗೆ ತೆರಳಿದ್ದ ಮೂವರು ಭಾರತೀಯರು ನಾಪತ್ತೆಯಾಗಿರುವುದಾಗಿ ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರಿ ಕಚೇರಿ ತಿಳಿಸಿದೆ.



ನಾಪತ್ತೆಯಾದವರನ್ನು ಸಂಗ್ರೂರ್ ನಿವಾಸಿ ಹುಶನ್‌ಪ್ರೀತ್‌ಸಿಂಗ್, ಎಸ್‌ಬಿಎಸ್ ನಗರದ ಜಸ್ಪಾಲ್ ಸಿಂಗ್ ಮತ್ತು ಹೋಶಿಯಾರ್‌ಪುರ್‌ನ ಅಮೃತ್ ಪಾಲ್ ಸಿಂಗ್. ಭಾರತದಿಂದ ಟೆಹ್ರಾನ್‌ಗೆ ಈ ಮೂವರು ಭೇಟಿ ನೀಡಿದ್ದರು. ಆದರೆ ಇವರು ಟೆಹ್ರಾನ್‌ಗೆ ಬಂದಿಳಿದ ಸ್ವಲ್ಪ ಸಮಯದಲ್ಲೇ (ಮೇ 1) ನಾಪತ್ತೆಯಾಗಿರುವುದಾಗಿ ವರದಿ ವಿವರಿಸಿದೆ. ದುಬೈ–ಇರಾನ್ ಮಾರ್ಗದ ಮೂಲಕ ಮೂವರನ್ನು ಆಸ್ಟ್ರೇಲಿಯಾಕ್ಕೆ ಕಳುಹಿಸುವುದಾಗಿ ಪಂಜಾಬ್ ಏಜೆಂಟ್ ಭರವಸೆ ನೀಡಿದ್ದ. ಅದರಂತೆ ಮೂವರಿಗೂ ಇರಾನ್‌ನಲ್ಲಿ ವಾಸ್ತವ್ಯ ಹೂಡಲು ಅವಕಾಶ ಕಲ್ಪಿಸಿಕೊಡುವುದಾಗಿಯೂ ಹೇಳಿದ್ದ. ಆದರೆ ಮೂವರು ಟೆಹ್ರಾನ್ ತಲುಪುತ್ತಿದ್ದಂತೆಯೇ ಅಪಹರಿಸಲ್ಪಟ್ಟಿರುವುದಾಗಿ ವರದಿಯೊಂದು ವಿವರಿಸಿದೆ. ಅಪಹರಿಸಲ್ಪಟ್ಟವರ ಶೋಧ ಕಾರ್ಯ ನಡೆಯುತ್ತಿದೆ ಎಂದು ರಾಯಭಾರಿ ಕಚೇರಿ ತಿಳಿಸಿದೆ.


## ನಟ ಕಮಲ್‌ಹಾಸನ್ ರಾಜ್ಯಸಭಾ ಸ್ಥಾನದ ಅಭ್ಯರ್ಥಿ

**ಚೆನ್ನೈ:** ಡಿಎಂಕೆ ಪಕ್ಷವು ಮಕ್ಕಳ್ ನೀಧಿ ಮೈಯಂ ಪಕ್ಷಕ್ಕೆ ಒಂದು ರಾಜ್ಯಸಭಾ ಸ್ಥಾನವನ್ನು ಹಂಚಿಕೆ ಮಾಡಿದ್ದು, ಅದರ ಸಂಸ್ಥಾಪಕ ಮತ್ತು ನಟ ಕಮಲ್‌ಹಾಸನ್ ಅವರನ್ನು ಸಂಸತ್ತಿನ ಮೇಲ್ಮನೆಗೆ ಅಭ್ಯರ್ಥಿಯಾಗಿ ಹೆಸರಿಸಲಾಗಿದೆ. ಮಕ್ಕಳ್ ನೀಧಿ ಮೈಯಂ ಪಕ್ಷದಿಂದ ಕಮಲ್‌ಹಾಸನ್ ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ಆಯ್ಕೆ ಮಾಡಲು ನಾವು ನಿರ್ಣಯ ಅಂಗೀಕರಿಸಿದ್ದೇವೆ ಎಂದು ಮಕ್ಕಳ್ ನೀಧಿ ಮೈಯಂ ನಾಯಕ ಮುರಳಿ ಅಪ್ಪಾಸ್ ಹೇಳಿದ್ದಾರೆ. ಇದಲ್ಲದೆ, ಜೂನ್ 19ರಂದು ನಡೆಯಲಿರುವ ರಾಜ್ಯಸಭಾ ಚುನಾವಣೆಗೆ ಆಡಳಿತಾರೂಢ ಡಿಎಂಕೆ ಒಕ್ಕೂಟವು ತನ್ನ ಮೂವರು ಅಭ್ಯರ್ಥಿಗಳನ್ನು ಹೆಸರಿಸಿದೆ. ಡಿಎಂಕೆ ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ ಸಲ್ಮಾ, ಅಡ್ವೋಕೇಟ್ ಪಿ ವಿಲ್ಸನ್ ಮತ್ತು ಎಸ್‌ಆರ್ ಶಿವಲಿಂಗಂ ರಾಜ್ಯಸಭಾ ಚುನಾವಣೆಯ ಅಭ್ಯರ್ಥಿಗಳಾಗಿದ್ದಾರೆ. 234 ಸದಸ್ಯ ಬಲದ ತಮಿಳುನಾಡು ವಿಧಾನಸಭೆಯಲ್ಲಿ, ರಾಜ್ಯಸಭಾ ಸ್ಥಾನವನ್ನು ಪಡೆಯಲು ಪ್ರತಿ ಅಭ್ಯರ್ಥಿಗೆ ಕನಿಷ್ಠ 34 ಮತಗಳು ಬೇಕಾಗುತ್ತವೆ. 158 ಶಾಸಕರನ್ನು ಹೊಂದಿರುವ ಡಿಎಂಕೆ ನೇತೃತ್ವದ ಇಂಡಿಯಾ ಬಣ (ಡಿಎಂಕೆ: 133, ಕಾಂಗ್ರೆಸ್: 17, ವಿಸಿಕೆ: 4, ಸಿಪಿಐ: 2, ಸಿಪಿಎಂ: 2) 4 ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆಯಿದೆ.



## ಫ್ರಾನ್ಸ್‌ನಲ್ಲಿ ಅನಿವಾರ್ಯ ಪರಿಸ್ಥಿತಿಯಲ್ಲಿ ದಯಾಮರಣಕ್ಕೆ ಅನುಮತಿ

**ಫ್ರಾನ್ಸ್:** ದಯಾಮರಣದ ವಿಧೇಯಕಕ್ಕೆ ಫ್ರಾನ್ಸ್‌ನ ಕೆಳಮನೆ ಮಂಗಳವಾರ ಅಂಗೀಕಾರ ನೀಡಿದೆ. ರಾಷ್ಟ್ರೀಯ ಅಸೆಂಬ್ಲಿಯಲ್ಲಿ ದೀರ್ಘ–ಚರ್ಚೆ ನಡೆದು ಮತಕ್ಕೆ ಹಾಕಲಾಯಿತು. ಈ ಮೂಲಕ ಪ್ರಮುಖ ವಿಚಾರವಾಗಿ ಮಂಡಿಸಲಾಗದ ವಿಧೇಯಕಕ್ಕೆ ಅಂಗೀಕಾರ ಸಿಕ್ಕಿದೆ.



ತೀರಾ ಅನಿವಾರ್ಯ ಸಂದರ್ಭದಲ್ಲಿ ಮಾರಕ ಔಷಧಗಳನ್ನು ತೆಗೆದುಕೊಳ್ಳಲು ಅನುಮತಿ ನೀಡುವ ಪ್ರಸ್ತಾವಿತ ಕ್ರಮವು, ಜೀವನ ಅಂತ್ಯಗೊಳಿಸಿಕೊಳ್ಳಲು ನೆರವು ಅಥವಾ ಅವಕಾಶ ಕಲ್ಪಿಸಿಕೊಡಲಿದೆ. ಯಾರಿಗೆ ಔಷಧವನ್ನೂ ತೆಗೆದುಕೊಳ್ಳಲು ಸಾಧ್ಯವಿಲ್ಲವೋ ಅಂತಹವರು ಮಾತ್ರ ವೈದ್ಯರು ಅಥವಾ ನರ್ಸ್‌ಗಳ ಸಹಾಯ ಪಡೆಯಲು ಈ ಕಾನೂನು ಅವಕಾಶ ಕಲ್ಪಿಸಿ ಕೊಡಲಿದೆ.ವಿಧೇಯಕದ ಪರವಾಗಿ 305 ಮತಗಳು ಮತ್ತು ವಿರುದ್ಧವಾಗಿ 199 ಮತಗಳು ಬಂದಿದ್ದು, ಇದನ್ನು ಸೆನೆಟ್‌ಗೆ ಕಳುಹಿಸಲಾಗುತ್ತದೆ. ಅಲ್ಲಿ ಸಂಪ್ರದಾಯವಾದಿಗಳು ವಿಧೇಯಕದಲ್ಲಿ ಕೆಲ ಬದಲಾವಣೆ ಅಥವಾ ತಿದ್ದುಪಡಿ ಮಾಡಲು ಪ್ರಯತ್ನಿಸಬಹುದು. ಫ್ರಾನ್ಸ್‌ನ ದೀರ್ಘ ಮತ್ತು ಸಂಕೀರ್ಣ ಪ್ರಕ್ರಿಯೆಯ ಮಧ್ಯೆ ಈ ಕ್ರಮದ ಕುರಿತು ನಿರ್ಣಾಯಕ ನಿರ್ಧಾರ ಅಥವಾ ಅಂಗೀಕಾರ ಪಡೆದುಕೊಳ್ಳಲು ಕೆಲವು ತಿಂಗಳುಗಳ ಕಾಲ ತೆಗೆದುಕೊಳ್ಳಬಹುದು.

# ವಿಕೋಪಗಳ ಪರಿಹಾರಕ್ಕೆ ಎನ್‌ಡಿಆರ್‌ಎಫ್ ತಂಡ ಸಿದ್ಧ

ಮಡಿಕೇರಿ, ಮೇ 28–ಮುಂಗಾರು ಅವಧಿಯಲ್ಲಿ ಜಿಲ್ಲೆಯಲ್ಲಿ ತಲೆದೋರುವ ಎಲ್ಲಾ ರೀತಿಯ ವಿಕೋಪಗಳನ್ನು ಸಮರ್ಥ ವಾಗಿ ಎದುರಿಸಲು ಯೋಧರ ತಂಡ ಸನ್ನದ್ಧವಾಗಿದೆ ಎಂದು 10ನೇ ಬೆಟಾಲಿಯನ್ ಎನ್‌ಡಿಆರ್‌ಎಫ್ ತಂಡದ ಇನ್ಸ್‌ಪೆಕ್ಟರ್ ಜಿ.ಡಿ. ಹರಿಶ್ಚಂದ್ರ ಪಾಂಡೆ ಅಭಯ ನೀಡಿದ್ದಾರೆ.

ನಗರದ ಪೊಲೀಸ್ ಸಮುದಾಯ ಭವನ ಮೈತ್ರಿಯಲ್ಲಿ ವಾಸ್ತವ್ಯ ಹೂಡಿರುವ ಎನ್‌ಡಿಆರ್‌ಎಫ್ ಯೋಧರು ತಾವು ತಂದಿರುವ ವಿವಿಧ ರಕ್ಷಣಾ ಪರಿಕರಗಳು ಹಾಗೂ ಉಪಕರಣಗಳನ್ನು, ಸನ್ನದ್ದ ಸ್ಥಿತಿಯಲ್ಲಿಡುವ ಮೂಲಕ ಕರ್ತವ್ಯ ನಿರ್ವಹಣೆಗೆ ಸಿದ್ದರಾಗಿದ್ದಾರೆ. ಭೂ ಕುಸಿತ, ಪ್ರವಾಹ, ಕಟ್ಟಡ ಕುಸಿತವಾದ ಸಂದರ್ಭಗಳಲ್ಲಿ ಬಳಸುವ ಲೈಫ್ ಜಾಕೆಟ್‌ಗಳು, ಮೋಟಾರ್ ಬೋಟ್‌ಗಳು, ರ್‍ಯಾಫ್ಟ್‌ಗಳು, ಮರ ಕತ್ತರಿಸುವ ಯಂತ್ರಗಳು, ಹಗ್ಗಗಳು, ಸರ್ಚ್ ಲೈಟ್‌ಗಳು, ಕಟ್ಟಡ ಕುಸಿತದ ಸಂದರ್ಭ ಬಳಸುವ ವಿವಿಧ ಬಗೆಯ ಕಟ್ಟರ್‌ಗಳು, ಆಕ್ಸಿಜನ್ ಸಿಲಿಂಡರ್‌ಗಳು, ಸ್ಟ್ರೆಚ್ಚರ್‌ಗಳು, ಜನ ರೇಟರ್, ಜೀವ ರಕ್ಷಕ ಔಷಧಿಗಳ ಸಹಿತ ರಕ್ಷಣಾ ಉಪಕರಣಗಳನ್ನು ಎನ್‌ಡಿಆರ್‌ಎಫ್ ಯೋಧರು ಸನ್ನದ್ಧ ಸ್ಥಿತಿಯಲ್ಲಿರಿಸಿದ್ದಾರೆ.



ಎನ್‌ಡಿಆರ್‌ಎಫ್ ಯೋಧರು ತಮ್ಮಲ್ಲಿನ ರಕ್ಷಣಾ ಪರಿಕರಗಳು ಹಾಗೂ ಉಪಕರಣಗಳನ್ನು ಸನ್ನದ್ಧ ಸ್ಥಿತಿಯಲ್ಲಿಡುತ್ತಿರುವುದು

**ಅಪಾಯಕಾರಿ ಸ್ಥಳ ಗುರುತು**

ಈಗಾಗಲೇ ಗುರುತು ಮಾಡಲಾಗಿರುವ ಎಲ್ಲಾ ಅಪಾಯಕಾರಿ ಪ್ರದೇಶಗಳಿಗೆ ತೆರಳಿ ಅಲ್ಲಿನ ವಾಸ್ತವ ಸ್ಥಿತಿ, ಭೌಗೋಳಿಕ ಲಕ್ಷಣಗಳು, ವಿಕೋಪ ಎದುರಾದಲ್ಲಿ ರಕ್ಷಣಾ ಕಾರ್ಯ ಹೇಗೆ ನಡೆಸಬೇಕೆಂದು ಯೋಜನೆ ರೂಪಿಸಲಾಗುತ್ತಿದೆ. ಜಿಲ್ಲೆಯ ಜನತೆ ಮತ್ತು ಜಿಲ್ಲಾಡಳಿತ ಯಾವುದೇ ಆತಂಕಪಡುವ ಅಗತ್ಯವಿಲ್ಲ ಎಂದು ಪಾಂಡೆ ಅಭಯ ನೀಡಿದರು.

14 ವರ್ಷಗಳ ಬಳಿಕ ಅವಧಿಗೂ ಮುನ್ನವೇ ಮುಂಗಾರು ಕಾಲಿಟ್ಟಿದ್ದು, ರಾಜ್ಯ ಸರಕಾರ ಮತ್ತು ಜಿಲ್ಲಾಡಳಿತದ ಕೋರಿಕೆ ಮೇರೆಗೆ ಮೇ ತಿಂಗಳ ಮೂರನೇ ವಾರದಲ್ಲೇ ಎನ್‌ಡಿಆರ್‌ಎಫ್ ರಕ್ಷಣಾ ತಂಡ ಜಿಲ್ಲೆಯಲ್ಲಿ ನಿಯೋಜನೆಯಾಗಿದೆ. ಪ್ರಾಕೃತಿಕ ವಿಕೋಪಗಳನ್ನು ಎದುರಿಸುವ ಪರಿಣಿತಿ ಪಡೆದಿರುವ 30 ಯೋಧರ ತಂಡ ಭೂ ಕುಸಿತ, ಪ್ರವಾಹ ಸಂದರ್ಭ ರಕ್ಷಣಾ ಕಾರ್ಯಾಚರಣೆ ನಡೆಸಲಿದೆ ಎಂದು ಎನ್‌ಡಿಆರ್‌ಎಫ್ ತಂಡದ ಅಧಿಕಾರಿ ಜಿ.ಡಿ. ಹರೀಶ್ಚಂದ್ರ ಪಾಂಡೆ ಮಾಹಿತಿ ನೀಡಿದರು.

## ಹಾನಿಗೊಂಡ ಮನೆಗೆ ಜಿಲ್ಲಾಧಿಕಾರಿ ಭೇಟಿ



**ಮಡಿಕೇರಿ:** ಮರ ಬಿದ್ದು ಮೃತಪಟ್ಟ ವಿರಾಜಪೇಟೆ ತಾಲೂಕಿನ ಅಮ್ಮತ್ತಿ ಹೋಬಳಿಯ ಬಾಡಗ ಬಾಣಂಗಾಲ ಗ್ರಾಮದ ಜನತಾ ಕಾಲೋನಿಯ ಪೊನ್ನಚಂಡ ವಿಷ್ಣು ಬೆಳ್ಳಿಯಪ್ಪ ಅವರ ನಿವಾಸಕ್ಕೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಘಟನೆ ಕುರಿತು ಮಾಹಿತಿ ಪಡೆದ ಜಿಲ್ಲಾಧಿಕಾರಿಗಳು ಮೃತರ ಕುಟುಂಬಕ್ಕೆ 5 ಲಕ್ಷ ರೂಗಳ ಪರಿಹಾರ ಒದಗಿಸುವ ಆದೇಶ ಪ್ರತಿಯನ್ನು ಹಸ್ತಾಂತರಿಸಿದರು.

## ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅಭಿನಂದನೆ

ನಾಪೋಕ್ಲು, ಮೇ 28- ಎಸ್‌ಎಸ್‌ಎಲ್‌ಸಿಯಲ್ಲಿ ಶೇಕಡ 100 ಫಲಿತಾಂಶ ಪಡೆದ ವಿದ್ಯಾರ್ಥಿಗಳಿಗೆ ಶಾಲಾ ಆಡಳಿತ ಮಂಡಳಿ ಹಾಗೂ ಶಿಕ್ಷಕರ ವತಿಯಿಂದ ಅಭಿನಂದನಾ ಕಾರ್ಯಕ್ರಮವನ್ನು ನಡೆಸಲಾಯಿತು.

ಅಭಿನಂದನ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದಲ್ಲಿ 619 ಅಂಕಗಳಿಸಿ ತೃತೀಯ ಸ್ಥಾನ ಗಳಿಸಿದ ವಿದ್ಯಾರ್ಥಿನಿ ಕೂರನ ಇಂಚರ ಕಿಶೋರ್, ಶಾಲಾ ಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದ ಕೇಕಡ ಮೋಕ್ಷ ದೋಣಪ್ಪ ಹಾಗೂ ತೃತೀಯ ಸ್ಥಾನ ಪಡೆದ ಮಚ್ಚಂಡ ಚಕ್ಷ ಕಾವೆರಮ್ಮ ಇವರನ್ನು ಸನ್ಮಾನಿಸಲಾಯಿತು.

ಪರೀಕ್ಷೆಯಲ್ಲಿ ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆಗಳನ್ನು ನೀಡಿ ಗೌರವಿಸಲಾಯಿತು. ಶಾಲಾ ವ್ಯವಸ್ಥಾಪಕ ನಾಟೋಳಂಡ ವಿಜು, ಮುಖ್ಯ ಶಿಕ್ಷಕ ಕುದುಪಜೆ ಕವನ್ ಹಾಗೂ ಶಿಕ್ಷಕ ವೃಂದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಜಿಲ್ಲೆಯಲ್ಲಿ ಮಳೆ ಬಿರುಸು; ರೆಡ್ ಅಲರ್ಟ್ ಘೋಷಣೆ

**ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಮತ್ತೆ ಮಳೆ ಬಿರುಸು ಪಡೆಯುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಭಾರತೀಯ ಹವಾಮಾನ ಇಲಾಖೆ ಮೇ.29 ಮತ್ತು 30ರಂದು ಜಿಲ್ಲೆಯಾದ್ಯಂತ 'ರೆಡ್ ಅಲರ್ಟ್' ಘೋಷಣೆ ಮಾಡಿದೆ. ಈ ಅವಧಿಯಲ್ಲಿ 204.5 ಮಿ.ಮೀ ಅಧಿಕ ಮಳೆ ಸುರಿಯಲಿದ್ದು, ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ.

ಈಗಾಗಲೇ ಸುರಿದ ಮಳೆಗಾಳಿಗೆ ಜಿಲ್ಲೆಯಲ್ಲಿ ನೂರಾರು ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದು, ಮಳೆಯಿಂದ ದುರಸ್ಥಿ ಕಾರ್ಯಕ್ಕೆ ಅಡ್ಡಿ ಎದುರಾಗಿದೆ. ನಗರ, ಪಟ್ಟಣ ಪ್ರದೇಶಗಳಲ್ಲೇ 594 ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಜೊತೆಯಲ್ಲೇ ವಿದ್ಯುತ್ ಮಾರ್ಗಗಳ ಮತ್ತು ಪರಿವರ್ತಕಗಳಿಗೆ ಹಾನಿಯಾಗಿದೆ. ಮಳೆ ಗಾಳಿಯ ನಡುವೆಯೇ ಹಗಲಿರುಳು ಲೈನ್‌ಗಳ ದುರಸ್ಥಿ ಕಾರ್ಯ ನಡೆಸಲಾಗುತ್ತಿದ್ದು, ಸಾರ್ವಜನಿಕರು ಸಹಕರಿಸುವಂತೆ ಚೆಸ್ಕಾಂ ಮನವಿ ಮಾಡಿದೆ.



ಮಳೆಯಿಂದ ವಿದ್ಯುತ್ ಕಂಬ ಉರುಳಿ ಬಿದ್ದಿದೆ.

## ಹುಟ್ಟುಹಬ್ಬದ ಸಿಹಿ ಹಂಚಿ ಕೊನೆಗೆ ಆತ್ಮಹತ್ಯೆಗೆ ಶರಣಾದ ವಿದ್ಯಾರ್ಥಿನಿ



**ಗೋಣಿಕೊಪ್ಪ:** ಸ್ನೇಹಿತರಿಗೆ ತನ್ನ ಹುಟ್ಟುಹಬ್ಬದ ಸಿಹಿ ಹಂಚಿದ ಬಳಿಗ ವಿದ್ಯಾರ್ಥಿನಿ ಆತ್ಮಹತ್ಯೆಗೆ ಶರಣಾಗಿರುವ ಘಟನೆಯೊಂದು ಪೊನ್ನಂಪೇಟೆ ತಾಲೂಕಿನ ಹಳ್ಳಿಗಟ್ಟು ಗ್ರಾಮದಲ್ಲಿ ನಡೆದಿದೆ.

ಇಲ್ಲಿನ ಸಿಐಟಿ ಕಾಲೇಜಿನಲ್ಲಿ ಪ್ರಥಮ ವರ್ಷದ ಎ.ಐ.ಎಂ.ಎಲ್ ವ್ಯಾಸಂಗ ಮಾಡುತ್ತಿದ್ದ ತೇಜಸ್ವಿನಿ(19) ಎಂಬಾಕೆಯೇ ಆತ್ಮಹತ್ಯೆಗೆ ಶರಣಾಗಿದ್ದಾಳೆ.

ಮೂಲತಃ ರಾಯಚೂರು ಮೂಲದ ಮಹಾಂತಪ್ಪ ಎಂಬುವವರ ಏಕೈಕ ಪುತ್ರಿಯಾಗಿರುವ ಈಕೆ ಮೂರು ದಿನಗಳ ಹಿಂದೆ ಸ್ನೇಹಿತೆಯರಿಗೆ ತನ್ನ ಹುಟ್ಟುಹಬ್ಬದ ಪಾರ್ಟಿ ಆಚರಿಸಿಕೊಂಡಿದ್ದಳೆನ್ನಲಾಗಿದೆ. ಈಕೆ ಪಾರ್ಟಿಗೆ ಬರದಿರುವ ಉಳಿದ ಸ್ನೇಹಿತೆಯರಿಗೂ ಸಿಹಿ ವಿತರಿಸಿ ಸಂಜೆ 4 ಗಂಟೆ ಸಮಯದಲ್ಲಿ ಹಾಸ್ಟೆಲ್‌ಗೆ ಮರಳಿದ್ದಾಳೆ. ನಂತರ ತನ್ನ ಕೊಠಡಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದುಬಂದಿಲ್ಲ. ಪೊನ್ನಂಪೇಟೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಮೊಕದ್ದಮೆ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

## ಆದಿವಾಸಿ ಕುಟುಂಬಗಳಿಗೆ ಆಧಾರ್ ಕಾರ್ಡ್ ತಲುಪಿಸಿ: ಡಾ.ಎನ್.ವಿ.ಪ್ರಸಾದ್

ಮಡಿಕೇರಿ, ಮೇ 28–ಕುಡಿಯ ಸೇರಿದಂತೆ ಲೈನ್‌ಮನೆಗಳಲ್ಲಿ ವಾಸಿಸುವ ಎಲ್ಲಾ ಆದಿವಾಸಿ ಕುಟುಂಬಗಳಿಗೆ ಆಧಾರ್ ಕಾರ್ಡ್ ಮಾಡಿಸುವಂತಾಗಬೇಕು. ಜೊತೆಗೆ ಸರ್ಕಾರದ ಸೌಲಭ್ಯಗಳು ಆದಿವಾಸಿ ಜನರಿಗೆ ತಲುಪುವಂತಾಗಬೇಕು ಎಂದು ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಗಿರಿಜನ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಜೊತೆ ಚರ್ಚಿಸಿ ಆಧಾರ್ ಕಾರ್ಡ್ ಮಾಡಿಸುವ ಸಂಬಂಧ ತುರ್ತು ಕ್ರಮ ವಹಿಸುವಂತೆ ಐಟಿಡಿಪಿ ಇಲಾಖೆ ಅಧಿಕಾರಿಗೆ ನಿರ್ದೇಶನ ನೀಡಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 2, ಸಮುದಾಯ ಆರೋಗ್ಯ ಕೇಂದ್ರದಲ್ಲಿ 16, ಜನರಲ್ ವಿಭಾಗದಲ್ಲಿ 12 ವೈದ್ಯರ ಹುದ್ದೆಗಳು ಖಾಲಿ ಇದ್ದು, ಯಾರೂ ಮುಂದೆ ಬರುತ್ತಿಲ್ಲ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ಹೇಳಿದರೆ, ಜಿಲ್ಲೆಯಲ್ಲಿ 1,16,772 ಮಂದಿ ಗೃಹಲಕ್ಷ್ಮಿ ಯೋಜನೆಯಡಿ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಟರಾಜು ತಿಳಿಸಿದರು.

ಶನಿವಾರಸಂತೆ ಬಸ್ ನಿಲ್ದಾಣ ಕಾಮಗಾರಿ ಪ್ರಗತಿ ಹಾಗೂ ಕುಶಾಲನಗರದಲ್ಲಿ ಬಸ್ ಡಿಪೋ ಕಾಮಗಾರಿ ಪ್ರಾತಿ ಸಂಬಂಧಿಸಿದಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಪ್ರಶ್ನಿಸಿದಾಗ ಸೆಪ್ಟೆಂಬರ್ ಅಂತ್ಯದೊಳಗೆ ಈ ಎರಡು ಕಾಮಗಾರಿಗಳು ಪೂರ್ಣಗೊಳ್ಳಲಿವೆ ಎಂದು ಕೆಎಸ್‌ಆರ್‌ಟಿಸಿ ಘಟಕದ ವ್ಯವಸ್ಥಾಪಕ ಮೆಹಬೂಬ್ ಅಲಿ ಉತ್ತರಿಸಿದರು. ಅನ್ನಭಾಗ್ಯ ಯೋಜನೆಯಡಿ 10 ಕೆ.ಜಿ.ಅಕ್ಕಿಯನ್ನು ವಿತರಿಸಲಾಗುತ್ತಿದೆ ಎಂದು ಕುಮುದಾ ಶರತ್ ತಿಳಿಸಿದರು.

ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿ.ಪಂ ಸಿಇಒ ಆನಂದ್ ಪ್ರಕಾಶ್ ಮೀನಾ, ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಉಪ ವಿಭಾಗಾಧಿಕಾರಿ ವಿನಾಯಕ ನರ್ವಡೆ ಅವರು ಹಲವು ಮಾಹಿತಿ ನೀಡಿದರು.

ಜಿ.ಪಂ ಉಪಕಾರ್ಯದರ್ಶಿ ಅಬ್ದುಲ್ ನಬಿ, ಲೋಕೋಪಯೋಗಿ ಇಲಾಖೆಯ ಇಇ ಇಬ್ರಾಹಿಂ, ಪಂಚಾಯತ್‌ರಾಜ್ ಎಂಜಿನಿಯರ್ ಇಇ ನಾಯಕ್, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ರಂಗಧಾಮಪ್ಪ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಶೇಖರ್, ಐಟಿಡಿಪಿ ಇಲಾಖಾ ಅಧಿಕಾರಿ ಹೊನ್ನೇಗೌಡ, ಜಿಪಂ ಸಹಾಯಕ ಕಾರ್ಯದರ್ಶಿ ಜೀವನ್ ಕುಮಾರ್, ಪಶುಪಾಲನೆ ಇಲಾಖೆ ಉಪ ನಿರ್ದೇಶಕ ಲಿಂಗರಾಜ ದೊಡ್ಡಮನಿ, ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಮುತ್ತಪ್ಪ, ಮೀನುಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಸಚಿನ್, ತಹಶೀಲ್ದಾರ್ ಪ್ರವೀಣ್ ಕುಮಾರ್, ಕಿರಣ್ ಗೌರಯ್ಯ, ಕೃಷ್ಣಮೂರ್ತಿ, ಮೋಹನ್ ಕುಮಾರ್, ಅನಂತ ಶಂಕರ್, ತಾಪಂ ಇಒಗಳಾದ ಪರಮೇಶ್ವರ, ಅಪ್ಪಣ್ಣ, ಜಿಲ್ಲಾ ಸರ್ಜನ್ ಡಾ.ನುಂಜುಂಡಯ್ಯ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಮಂಜುಳ, ಲೀಡ್ ಬ್ಯಾಂಕ್ ವ್ಯವಸ್ಥಾಪಕ ಗಂಗಾಧರ ನಾಯಕ್, ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಕೃಷ್ಣಮೂರ್ತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿ.ಟಿ.ವಿಸ್ಮಯಿ, ಉಪಸ್ಥಿತರಿದ್ದರು.

## ಕುಶಾಲನಗರದಲ್ಲಿ ಜೂ.9, ಪುರಸಭಾ ಕಚೇರಿ ಉದ್ಘಾಟನೆ

**ಕುಶಾಲನಗರ:** ಪಟ್ಟಣದಲ್ಲಿ ನಿರ್ಮಾಣಗೊಂಡಿರುವ ನೂತನ ಪುರಸಭೆ ಹಾಗೂ ವಾಣಿಜ್ಯ ಮಳಿಗೆಗಳ ಉದ್ಘಾಟನೆಯನ್ನು ಜೂ.9 ರಂದು ನಡೆಸಲು ತೀರ್ಮಾನಿಸಲಾಯಿತು.

ಜಯಲಕ್ಷ್ಮಿ ಚಂದ್ರು ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪುರಸಭಾ ಕಚೇರಿ ಕಟ್ಟಡ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಉದ್ಘಾಟನೆ ಮಾಡುವ ಬಗ್ಗೆ ಹಾಗೂ ನೂತನ ಕಟ್ಟಡಕ್ಕೆ ಸ್ಥಳಾಂತರಿಸುವ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು. ಸದಸ್ಯ ಪ್ರಮೋದ್ ಮುತ್ತಪ್ಪ ಮಾತನಾಡಿ, ಪುರಸಭೆ ಕಟ್ಟಡ ಎರಡನೇ ಹಂತದ ಕಾಮಗಾರಿ ಅಂತಿಮ ಹಂತದಲ್ಲಿದೆ. 1.82. ಕೋಟಿ ರೂ.ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ. ನೂತನ ಕಟ್ಟಡಕ್ಕೆ ವಿಶೇಷ ಪೂಜೆಯೊಂದಿಗೆ ಅದ್ದೂರಿಯಾಗಿ ಸಮಾರಂಭ ನಡೆಸುವಂತೆ ಸದಸ್ಯರು ಅಧ್ಯಕ್ಷರಿಗೆ ಸಲಹೆ ನೀಡಿದರು.

ಸದಸ್ಯ ಡಿ.ಕೆ.ತಿಮ್ಮಪ್ಪ ಹಾಗೂ ಜೈವರ್ಧನ್ ಮಾತನಾಡಿ ನೂತನ ಪುರಸಭೆ ಕಚೇರಿಯ ರಸ್ತೆ ಹಾಗೂ ವಾಹನ ನಿಲುಗಡೆ ವ್ಯವಸ್ಥೆ ಸರಿಯಾಗಿ ನಡೆದಿಲ್ಲ.ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಸಹಾಯಕ ಎಂಜಿನಿಯರ್ ಅರ್ಬಜ್ ಅಹಮದ್ ಮಾತನಾಡಿ, ಇದೀಗ ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ರಸ್ತೆ ನಿರ್ಮಿಸಲು ಸಾಧ್ಯವಾಗಿಲ್ಲ ಎಂದರು.

ಮುಖ್ಯಾಧಿಕಾರಿ ಗಿರೀಶ್ ಮಾತನಾಡಿ, ಟೋಲ್‌ಗೇಟ್‌ನಿಂದ ತಾವರೆಕೆರೆವರೆಗೆ ಪಾದಚಾರಿ ಮಾರ್ಗ ಹಾಗೂ ಚರಂಡಿ ವ್ಯವಸ್ಥೆ ಕಲ್ಪಿಸಲು ರೂ.5.37 ಕೋಟಿ ವೆಚ್ಚದಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದೆ ಎಂದರು.

## ವಿವೇಕಾನಂದ ವಿದ್ಯಾಸಂಸ್ಥೆಯಿಂದ ಕೌಶಿಕ್‌ಗೆ ಸನ್ಮಾನ



ಸಿಇಟಿಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದ ವಿದ್ಯಾರ್ಥಿ ಕೌಶಿಕ್‌ರನ್ನು ವಿವೇಕಾನಂದ ವಿದ್ಯಾಸಂಸ್ಥೆ ಸನ್ಮಾನಿಸಿತು.

**ಕುಶಾಲನಗರ:** ಸಿಇಟಿ ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಹಾಗೂ ರಾಜ್ಯದಲ್ಲಿ 875ನೇ ಸ್ಥಾನ ಗಳಿಸಿದ ವಿವೇಕಾನಂದ ಪಿಯು ಕಾಲೇಜಿನ ವಿದ್ಯಾರ್ಥಿ ಕೌಶಿಕ್‌ರನ್ನು ವಿವೇಕಾನಂದ ವಿದ್ಯಾಸಂಸ್ಥೆ ಸನ್ಮಾನಿಸಿತು.

ಕಾಲೇಜು ಆವರಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಎನ್.ಎನ್ ಶಂಭುಲಿಂಗಪ್ಪ ಮತ್ತು ಪಿಯು ಕಾಲೇಜ್ ಪ್ರಾಂಶುಪಾಲ ಕ್ಲಾರಾ ರೇಷ್ಮಾ ವಿದ್ಯಾರ್ಥಿ ಕೌಶಿಕ್‌ರನ್ನು ಪೋಷಕರೊಂದಿಗೆ ಸನ್ಮಾನಿಸಿದರು.

ವಿಜ್ಞಾನ ವಿಭಾಗದಲ್ಲಿ ಶೇ.96 ಅಂಕ ಪಡೆದಿರುವ ಈತನ ಸಾಧನೆಯ ಬಗ್ಗೆ ಸಂಸ್ಥೆಯ ಅಧ್ಯಕ್ಷ ಶಂಭುಲಿಂಗಪ್ಪ ಸಂತಸ ವ್ಯಕ್ತಪಡಿಸಿ ಶುಭ ಹಾರೈಸಿದರು. ಉನ್ನತ ವ್ಯಾಸಂಗಕ್ಕೆ ಸಹಾಯ ಹಸ್ತ ನೀಡುವ ಭರವಸೆ ವ್ಯಕ್ತಪಡಿಸಿದರು.

ಕುಶಾಲನಗರ ಗೊಂದಿ ಬಸವನಹಳ್ಳಿಯ ನಿವಾಸಿ ಆಟೋ ಚಾಲಕರಾಗಿರುವ ಗಂಗರಾಜು ಮತ್ತು ಲತಾ ಮಣಿ ದಂಪತಿಗಳ ಪುತ್ರ. ತಾನು ಇಂಜಿನಿಯರಿಂಗ್ ವಿಭಾಗದಲ್ಲಿ ಉನ್ನತ ಮಟ್ಟದ ಶಿಕ್ಷಣ ಪಡೆಯುವ ಗುರಿ ಹೊಂದಿರುವುದಾಗಿ ವಿದ್ಯಾರ್ಥಿ ಕೌಶಿಕ್ ಅಭಿಪ್ರಾಯ ವ್ಯಕ್ತಪಡಿಸಿದರು.

ಸಂಸ್ಥೆಯ ಆಡಳಿತ ಅಧಿಕಾರಿ ಮಹೇಶ್ ಅಮೀನ್, ಎಂಜಿಎಂ ಪದವಿ ಕಾಲೇಜಿನ ಪ್ರಾಂಶುಪಾಲ ಟಿ.ಎ ಲಿಖಿತ, ಬೋಧಕ, ಬೋಧಕೇತರ ಸಿಬ್ಬಂದಿ ಪಾಲ್ಗೊಂಡಿದ್ದರು.

## ಜಲಾಶಯಗಳಿಂದ ಹೆಚ್ಚಿನ ನೀರು ಬಿಡುವ ಸಾಧ್ಯತೆ: ಡಿಸಿ ಸೂಚನೆ

ಚಾಮರಾಜನಗರ, ಮೇ 28– ಜಿಲ್ಲೆಯಾದ್ಯಂತ ಅತೀ ಹೆಚ್ಚು ಮಳೆಯಾಗುತ್ತಿದ್ದು, ಹೆಚ್ಚಿನ ಪ್ರಮಾಣದಲ್ಲಿ ಜಲಾಶಯಗಳಿಂದ ನೀರನ್ನು ಹೊರಬಿಡುವ ಸಾಧ್ಯತೆ ಇರುವುದರಿಂದ ಪ್ರವಾಸಿ ತಾಣಗಳಲ್ಲಿ ಸಾರ್ವಜನಿಕರು ಎಚ್ಚರಿಕೆ ವಹಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ತಿಳಿಸಿದ್ದಾರೆ.

ಕೆ.ಆರ್.ಎಸ್, ಕಬಿನಿ, ನುಗು ಜಲಾಶಯಗಳಿಗೆ ಒಳಹರಿವು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಯಾವುದೇ ಸಮಯದಲ್ಲಿ ಜಲಾಶಯಗಳಿಂದ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಹೊರಬಿಡುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಪ್ರವಾಸಿ ತಾಣಗಳಾದ ವೆಸ್ಲಿ ಸೇತುವೆ, ಹೊಗೇನೆಕಲ್ ಫಾಲ್ಸ್, ಶಿವನಸಮುದ್ರ, ಭರಚುಕ್ಕಿ ಜಲಪಾತ ಹಾಗೂ ಇನ್ನಿತರ ಪ್ರವಾಸಿ ತಾಣಗಳಲ್ಲಿ ಅವಘಡಗಳು ಸಂಭವಿಸಿ ಪ್ರಾಣಹಾನಿ ಉಂಟಾಗುವ ಸಾಧ್ಯತೆ ಇರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಸದರಿ ಪ್ರವಾಸಿ ತಾಣಗಳಲ್ಲಿ ಎಚ್ಚರಿಕೆ ವಹಿಸುವಂತೆ ಸೂಚಿಸಿದ್ದಾರೆ.

# ನೀರಿನ ತಾಣಗಳಲ್ಲಿ ಇಳಿಯದಿರಲು ಜಿಲ್ಲಾಧಿಕಾರಿ ಸೂಚನೆ



ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ತುರ್ತು ಸಭೆಯನ್ನು ಜಿಲ್ಲಾಧಿಕಾರಿಗಳು ನಡೆಸಿದರು.

ಚಾಮರಾಜನಗರ, ಮೇ 28 – ಜಿಲ್ಲೆಯಲ್ಲಿ ಹೆಚ್ಚು ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಜಲಪಾತ, ಜಲಾಶಯಗಳು, ಇನ್ನಿತರ ಅಪಾಯಕಾರಿ ಪ್ರವಾಸಿ ನೀರಿನ ತಾಣಗಳಲ್ಲಿ ಪ್ರವಾಸಿಗರು ಸಾರ್ವಜನಿಕರು ನೀರಿಗೆ ಇಳಿಯಬಾರದೆಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ತುರ್ತು ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಜಲಪಾತ ಇನ್ನಿತರ ಪ್ರವಾಸಿ ಸ್ಥಳಗಳಲ್ಲಿ ಪೊಲೀಸ್ ಇಲಾಖೆ ಗಸ್ತು ಹೆಚ್ಚಿಸಬೇಕು. ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಿ ಮಳೆ ಪ್ರವಾಹ ಸಂದರ್ಭದಲ್ಲಿ ಕಣ್ಗಾವಲು ತೀವ್ರಗೊಳಿಸಬೇಕು. ಪ್ರವಾಸಿಗರು ನೀರಿನ ಬಳಿ ತೆರಳದಂತೆ ಎಚ್ಚರಿಕೆಯ ಫಲಕಗಳನ್ನು ಮತ್ತಷ್ಟು ಎದ್ದು ಕಾಣುವಂತೆ ಅಳವಡಿಸಬೇಕು. ನೀರಿನ ರಭಸ ಹೆಚ್ಚಿನ ಗಾಳಿ, ಪ್ರತಿಕೂಲ ಸಂದರ್ಭದಲ್ಲಿ ಸಾರ್ವಜನಿಕರು ಪ್ರವಾಸಿಗರ ಸುರಕ್ಷತೆಗೆ ತುರ್ತು ಗಮನಹರಿಸಬೇಕು ಎಂದರು.

ಮುಂಬರುವ ದಿನಗಳಲ್ಲಿ ಮಳೆ ಹೆಚ್ಚಾಗಿ ಜಲಾಶಯದಿಂದ ಹೆಚ್ಚು ನೀರು ಬಿಡುವ ಸಂದರ್ಭ ಬಂದಲ್ಲಿ ಕೊಳ್ಳೇಗಾಲ ಭಾಗದ ಕೆಲವು ಗ್ರಾಮಗಳಲ್ಲಿ ಉಂಟಾಗಬಹುದಾದ ಪ್ರವಾಹ ಎದುರಿಸಲು ಕೈಗೊಳ್ಳಬೇಕಿರುವ ಮುನ್ನೆಚ್ಚರಿಕೆ ಕಾರ್ಯಗಳಿಗೆ ಸನ್ನದ್ದರಾಗಲು ಪೂರ್ವ ಸಿದ್ದತೆ ಮಾಡಿಕೊಳ್ಳಬೇಕು. ನಗರ, ಪಟ್ಟಣ, ಗ್ರಾಮಾಂತರ ಪ್ರದೇಶಗಳಲ್ಲಿ ಮಳೆ ಸಂದರ್ಭದಲ್ಲಿ ಚರಂಡಿಗಳ ಸ್ವಚ್ಚತೆ, ತಗ್ಗು ಪ್ರದೇಶಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು ಎಂದು ಅವರು ನಿರ್ದೇಶನ ನೀಡಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಉಪವಿಭಾಗಾಧಿಕಾರಿ ಬಿ.ಆರ್. ಮಹೇಶ್, ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಯೋಜನಾ ನಿರ್ದೇಶಕರಾದ ಕಿರಣ್ ಪಡ್ನೇಕರ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪನಿರ್ದೇಶಕರಾದ ರಾಜೇಶ್, ತಹಶೀಲ್ದಾರರು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಇದ್ದರು.

## ಚಿರತೆ ದಾಳಿಗೆ ಕರು ಬಲಿ



ಚಿರತೆ ದಾಳಿಯಿಂದ ಕರು ಬಲಿಯಾಗಿದೆ

**ಚಾಮರಾಜನಗರ:** ಚಿರತೆ ದಾಳಿಯಿಂದ ಕರು ಬಲಿಯಾಗಿರುವ ಘಟನೆ ತಾಲೂಕಿನ ಬಸವಾಪುರ ಗ್ರಾಮದ ಜಮೀನಿನಲ್ಲಿ ನಡೆದಿದೆ.

ಕೋಡಿಮೋಳೆ ಗ್ರಾಮದ ಗುಮಟಾಪುರ ನಾಗರಾಜು ಎಂಬವರಿಗೆ ಸೇರಿದ ಕರುವನ್ನು ಜಮೀನಿನಲ್ಲಿ ಮೇಯಲು ಬಿಡಲಾಗಿತ್ತು. ಈ ವೇಳೆ ದಿಢೀರನೇ ಚಿರತೆ ದಾಳಿ ನಡೆಸಿ ಕರುವನ್ನು ಕೊಂದು ಹಾಕಿದೆ. ವಿಷಯ ತಿಳಿದು ಸ್ಥಳಕ್ಕೆ ಅರಣ್ಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಚಿರತೆ ದಾಳಿಗೆ ಮೃತಪಟ್ಟಿರುವ ಕರುವಿನ ಮಾಲೀಕರಿಗೆ ಸೂಕ್ತ ಪರಿಹಾರ ಕೊಡಿಸುವಂತೆ ಅರಣ್ಯಾಧಿಕಾರಿಗಳಲ್ಲಿ ಗ್ರಾಮಸ್ಥರು ಮನವಿ ಮಾಡಿದ್ದಾರೆ.

## ಸಮಾಜದ ಪ್ರತಿಬಿಂಬದಂತೆ ಮಾಧ್ಯಮ ಕಾರ್ಯ ನಿರ್ವಹಿಸಲಿ: ಎ.ಆರ್.ಕೃಷ್ಣಮೂರ್ತಿ



ಹಿರಿಯ ಪತ್ರಕರ್ತ ಕೆ.ಎಸ್. ಫಾಲಲೋಚನ ಆರಾಧ್ಯರಿಗೆ ಈ ಬಾರಿಯ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ನೀಡಿ ಶಾಸಕ ಎ.ಆರ್. ಕೃಷ್ಣಮೂರ್ತಿ ಗೌರವಿಸಿದರು.

**ಚಾಮರಾಜನಗರ:** ಸಮಾಜದ ಹೊಣೆಗಾರಿಕೆ ಹೊತ್ತಿರುವ ಮಾಧ್ಯಮಗಳು ಸಮಾಜದ ಪ್ರತಿಬಿಂಬವಾಗಿ ಕಾರ್ಯನಿರ್ವಹಿಸಬೇಕು ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ತಿಳಿಸಿದ್ದಾರೆ.

ಜೆಎಸ್‌ಎಸ್ ಮಹಾವಿದ್ಯಾಪೀಠ ಮತ್ತು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಸಂಯುಕ್ತವಾಗಿ ಏರ್ಪಡಿಸಿದ್ದ 2023ನೇ ಸಾಲಿನ ಶ್ರೀಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಸಮಾಜದ ಪ್ರತಿಬಿಂಬವಾಗಿರುವ ಮಾಧ್ಯಮ ಕ್ಷೇತ್ರವೂ ಜನರಿಗೆ ಒಳ್ಳೆಯ ವಿಚಾರಗಳನ್ನು ಮುಟ್ಟಿಸುವ ಕೆಲಸವನ್ನು ಮಾಡಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಸಿ. ಪುಟ್ಟರಂಗಶೆಟ್ಟಿ ಮಾತನಾಡಿ, ಶೀಘ್ರವೇ ಪತ್ರಕರ್ತರಿಗೆ ನಿವೇಶನ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಯನ್ನು ಹಿರಿಯ ಪತ್ರಕರ್ತ ಫಾಲಲೋಚನಾ ಆರಾಧ್ಯ ಅವರಿಗೆ ನೀಡಿ ಸನ್ಮಾನಿಸಲಾಯಿತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಗೌರವ ಕಾರ್ಯದರ್ಶಿ ಶಿವಕುಮಾರಸ್ವಾಮಿ, ಜಿಲ್ಲಾಧಿಕಾರಿ ಶಿಲ್ಪಾನಾಗ್, ನಗರಸಭೆ ಸದಸ್ಯರಾದ ಕುಮುದಾ, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಜಿಲ್ಲಾಧ್ಯಕ್ಷ ದೇವರಾಜ್ ಕಪ್ಪಸೋಗೆ ಉಪಸ್ಥಿತರಿದ್ದರು.

ಕಾಡಂಚಿನ ಗ್ರಾಮಗಳ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗದ ಬಡವರಿಗೆಂದು ತಲಾ 4 ಎಕರೆ ಭೂಮಿಯನ್ನು ನನ್ನ ತಂದೆ ರಾಚಯ್ಯ ಅರಣ್ಯ ಮತ್ತು ಕಂದಾಯ ಸಚಿವರಾಗಿದ್ದಾಗ ನೀಡಿದ್ದರು. ಆದರೆ, ಅರಣ್ಯ ಇಲಾಖೆಯ ಹೊಸ ಕಾಯ್ದೆಗಳ ಅನ್ವಯ ಕಂದಾಯ ಭೂಮಿಯನ್ನು ಅರಣ್ಯ ಭೂಮಿಯಾಗಿ ಪರಿವರ್ತಿಸಿದ್ದರಿಂದ ಬಡವರಿಗೆ ಇಂದಿಗೂ ಭೂಮಿ ದೊರಕಿಲ್ಲ. ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಅವರಿಗೆ ಭೂಮಿ ಕೊಡಿಸಲು ಕ್ರಮ ಕೈಗೊಳ್ಳಬೇಕು.

–ಎ.ಆರ್. ಕೃಷ್ಣಮೂರ್ತಿ, ಶಾಸಕರು.

## ನನ್ನ ಮಗನನ್ನು ಕೊಲೆ ಮಾಡಿದ್ದಾರೆ, ಆತ ನೀರಿನಲ್ಲಿ ಮುಳುಗಿಲ್ಲ

**ಮೃತ ನಂದಕುಮಾರ್ ತಂದೆ ಪೊಲೀಸರಿಗೆ ದೂರು**

**ಕೊಳ್ಳೇಗಾಲ:** ನನ್ನ ಮಗನನ್ನು ಸ್ನೇಹಿತರು ಕೊಲೆ ಮಾಡಿದ್ದಾರೆ ಎಂದು ನಾಪತ್ತೆಯಾಗಿದ್ದ ವಿದ್ಯಾರ್ಥಿಯ ತಂದೆ ಪೊಲೀಸರಿಗೆ ದೂರು ನೀಡಿದ್ದು, ಘಟನೆ ಈಗ ಹೊಸ ತಿರುವನ್ನು ತೆಗೆದುಕೊಂಡಿದೆ.

ಬೆಂಗಳೂರು ಡೇರಿ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಶಿವಶಂಕರ್, ಇದು ಪೂರ್ವನಿಯೋಜಿತ ಕೊಲೆ ತಮ್ಮ ಮಗನನ್ನು ವೈದ್ಯಕೀಯ ಸ್ನೇಹಿತರು ಕರೆದುಕೊಂಡು ಬಂದು ಕೊಲೆ ಮಾಡಿದ್ದಾರೆ ಎಂದು ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಮೃತ ವಿದ್ಯಾರ್ಥಿ ನಂದಕುಮಾರ್, ರಾಮನಗರದ ನಿವಾಸಿ. ಹಾರೋಹಳ್ಳಿ ದಯಾನಂದ ಸಾಗರ್ ವೈದ್ಯಕೀಯ ಕಾಲೇಜಿನಲ್ಲಿ ಮೊದಲ ವರ್ಷದ ವಿದ್ಯಾರ್ಥಿಯಾಗಿದ್ದ ಈತ 7 ಮಂದಿ ವೈದ್ಯಕೀಯ ವಿದ್ಯಾರ್ಥಿಗಳೊಂದಿಗೆ ಶಿವನಸಮುದ್ರ ಪ್ರವಾಸಕ್ಕೆ ಆಗಮಿಸಿದ್ದರು. ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತ ವೀಕ್ಷಿಸಿ ನಂತರ ದರ್ಗಾ ಹಿಂಭಾಗದ ನದಿಗೆ ಹೋಗಿದ್ದರು. ಅಲ್ಲಿ ನಾಲ್ವರು ವಿದ್ಯಾರ್ಥಿಗಳು ನದಿಗೆ ಇಳಿದಾಗ, ನೀರಿನ ಸೆಳೆತ ಹೆಚ್ಚಾಗಿದ್ದರಿಂದ ಈಜಲು ಸಾಧ್ಯವಾಗದೆ ಮೂವರು ಬಂಡೆಯನ್ನು ಹಿಡಿದು ನೆರವಿಗಾಗಿ ಕಿರುಚಿದರು. ಸ್ಥಳೀಯರ ಸಹಾಯದಿಂದ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ತಲುಪಿ ಪ್ರಮೋದ್(23), ಪ್ರಫುಲ್ಲ(22), ತುಷಾರಾ (20) ಎಂಬವರನ್ನು ಹಗ್ಗದ ಸಹಾಯದಿಂದ ರಕ್ಷಿಸಿದರು. ಆದರೆ ನಂದಕುಮಾರ್ ನದಿಯಲ್ಲಿ ಕೊಚ್ಚಿ ಹೋಗಿದ್ದನು. ತಡರಾತ್ರಿ ತನಕ ಶೋಧ ನಡೆದರೂ ಅವನ ಶವ ಪತ್ತೆ ಆಗಿರಲಿಲ್ಲ. ಇಂದು ಬೆಳಗ್ಗೆ ಶೋಧ ಮುಂದುವರಿಸಿದ ಅಗ್ನಿಶಾಮಕ ದಳ ಮೃತದೇಹವನ್ನು ಪತ್ತೆಹಚ್ಚಿ ನದಿಯಿಂದ ಹೊರತೆಗೆದಿದ್ದಾರೆ.

ಗ್ರಾಮಾಂತರ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ ವಿದ್ಯಾರ್ಥಿಗಳಿಂದ ವಿವರಗಳನ್ನು ಸಂಗ್ರಹಿಸಿದ್ದು, ವಿದ್ಯಾರ್ಥಿಗಳ ಹೇಳಿಕೆಗಳು, ಸ್ಥಳದ ಪರಿಸ್ಥಿತಿ ಮತ್ತು ತಜ್ಞರ ವರದಿಗಳ ಮೇಲೆ ಇದು ಅಸಹಜ ಸಾವೊ ಅಥವಾ ಕೊಲೆಯೊ ಎಂಬುದು ತನಿಖೆಯಿಂದ ತಿಳಿದು ಬರಬೇಕಿದೆ.

## 2ನೇ ದಿನಕ್ಕೆ ಕಾಲಿಟ್ಟ ಪೌರ ನೌಕರರ ಮುಷ್ಕರ



ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿ ನಡೆಸುತ್ತಿರುವ ಮುಷ್ಕರ 2ನೇ ದಿನಕ್ಕೆ ಕಾಲಿಟ್ಟಿದೆ.

**ಚಾಮರಾಜನಗರ:** ಪೌರ ವೃಂದದ ನೌಕರರನ್ನು ಸರ್ಕಾರಿ ನೌಕರರೆಂದು ಘೋಷಿಸುವುದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜಿಲ್ಲಾದ್ಯಂತ ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿ ನಡೆಸುತ್ತಿರುವ ಮುಷ್ಕರ 2ನೇ ದಿನಕ್ಕೆ ಕಾಲಿಟ್ಟಿದೆ.

ಜಿಲ್ಲೆಯಲ್ಲಿ ಕುಡಿಯುವ ನೀರು, ಬೀದಿ ದೀಪ ಹೊರತುಪಡಿಸಿ ಉಳಿದೆಲ್ಲಾ ಕೆಲಸಗಳು ಸ್ಥಗಿತಗೊಂಡಿದೆ. ಚಾಮರಾಜನಗರ– ಕೊಳ್ಳೇಗಾಲ ನಗರಸಭೆ, ಯಳಂದೂರು– ಹನೂರು ಪಟ್ಟಣ ಪಂಚಾಯಿತಿ, ಗುಂಡ್ಲುಪೇಟೆ ಪುರಸಭೆಯ ಸಿಬ್ಬಂದಿ ಸೇವೆಗೆ ಗೈರಾಗಿ ಅನಿರ್ದಿಷ್ಟಾವಧಿ ಮುಷ್ಕರವನ್ನು ಮಂಗಳವಾರ ಬೆಳಗ್ಗೆಯಿಂದ ಆರಂಭಿಸಲಾಗಿದೆ. ಹೀಗಾಗಿ, ಜಿಲ್ಲಾದ್ಯಂತ ಸ್ಥಳೀಯ ಆಡಳಿತ ಸೇವೆ ಅಸ್ತವ್ಯಸ್ತವಾಗಿದೆ.

ಪ್ರತಿನಿತ್ಯ ನಗರಸಭೆ, ಪಟ್ಟಣ ಪಂಚಾಯಿತಿ, ಪುರಸಭೆಗಳಿಗೆ ಇ–ಸ್ವತ್ತು, ಖಾತೆ ಬದಲಾವಣೆ, ಜನನ– ಮರಣ ಪ್ರಮಾಣ ಪತ್ರ, ಕಂದಾಯ ಪಾವತಿ ಕೆಲಸಗಳಿಗೆಂದು ಗ್ರಾಮೀಣ ದೂರದ ಊರುಗಳಿಂದ ಬಂದಿದ್ದ ಸಾರ್ವಜನಿಕರು ಪರದಾಡುವಂತಾಯಿತು.

ಜಿಲ್ಲಾ ಕೇಂದ್ರ ಚಾಮರಾಜನಗರದ ನಗರಸಭೆಯ ಕಚೇರಿ ಮುಂಭಾಗ ನಡೆಯುತ್ತಿರುವ ಧರಣಿ ಸ್ಥಳಕ್ಕೆ ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕರಾದ ಪಿ. ಸುಧಾ, ಎಇಇ ರಾಮಚಂದ್ರ, ಭೇಟಿ ನೀಡಿ ಪ್ರತಿಭಟನಾ ನೌಕರರಿಂದ ಮನವಿ ಸ್ವೀಕರಿಸಿದರು.

ಮುಷ್ಕರದಲ್ಲಿ ವೆಂಕಟನಾಯಕ, ಮಂಜುನಾಥ್, ಜಯನಾಯಕ್, ಶಿವಶಂಕರ್ ಆರಾಧ್ಯ, ಸುಷ್ಮಾ, ಪುಷ್ಪ, ಮಂಗಳಗೌರಿ, ನಾಗರಾಜು, ನಿತಿನ್, ಸಂತೋಷ, ಜಿ. ರಾಜಪ್ಪ ಸೇರಿದಂತೆ ಇತರ ನೌಕರರು ಭಾಗವಹಿಸಿದ್ದರು.

## ಕನ್ನಡಿಗರ ಕ್ಷಮೆ ಕೇಳಲು ಕಮಲ್‌ಹಾಸನ್‌ಗೆ ಆಗ್ರಹ

ಗುಂಡ್ಲುಪೇಟೆ, ಮೇ–28 (ಸೋಮ್.ಜಿ) ತಮಿಳು ನಟ ಕಮಲ್‌ಹಾಸನ್ ಕಾರ್ಯಕ್ರಮದಲ್ಲಿ ಕನ್ನಡ ಹುಟ್ಟಿದ್ದು ತಮಿಳಿನಿಂದ ಎಂದು ವ್ಯಾಖ್ಯಾನಿಸಿರುವುದನ್ನು ಖಂಡಿಸಿರುವ ಕರ್ನಾಟಕ ರಕ್ಷಣಾ ವೇದಿಕೆ ಕಮಲ್ ತಮ್ಮ ಹೇಳಿಕೆಯನ್ನು ವಾಪಸ್ ಪಡೆದು ಕನ್ನಡಿಗರ ಕ್ಷಮೆ ಕೇಳಬೇಕೆಂದು ಒತ್ತಾಯಿಸಿದೆ.

ಕಮಲ್ ಒಬ್ಬ ಸ್ಟಾರ್ ನಟನಾಗಿ ಬೆಳೆಯಲು ಎಲ್ಲಾ ಭಾಷೆಗಳು ಸಹಕಾರ ನೀಡಿದೆ ಎಂಬುದನ್ನು ಮರೆಯಬಾರದು. ಇಂತಹ ವಿವಾದಿತ ಹೇಳಿಕೆಯನ್ನು ನೀಡಿ ಏಳು ಕೋಟಿ ಕನ್ನಡಿಗರ ಮನ ನೋಯಿಸಿದ್ದಾರೆ. ಈ ಕೂಡಲೇ ಕಮಲ್ ತಮ್ಮ ಹೇಳಿಕೆಯನ್ನು ವಾಪಸ್ ಪಡೆದು ಕನ್ನಡಿಗರ ಕ್ಷಮೆ ಕೇಳಬೇಕೆಂದು ಕರವೇ ಜಿಲ್ಲಾ ಅಧ್ಯಕ್ಷ ಆರ್. ಮೋಹನ್ ಪತ್ರಿಕಾ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

**ಕಾವಲು ಪಡೆ ಆಕ್ರೋಶ:** ತಮಿಳು ಚಲನ ಚಿತ್ರ ನಟ ಕಮಲಹಾಸನ್ ನೀಡಿರುವ ಹೇಳಿಕೆಯನ್ನು ವಾಪಸ್ ಪಡೆದು ಕನ್ನಡಿಗರ ಕ್ಷಮೆಯಾಚಿಸುವಂತೆ ಕರ್ನಾಟಕ ಕಾವಲು ಪಡೆಯ ತಾಲೂಕು ಅಧ್ಯಕ್ಷ ಎ.ಅಬ್ದುಲ್ ಮಾಲಿಕ್ ಆಗ್ರಹಿಸಿದ್ದಾರೆ.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

---

**ಬೇಕಾಗಿದ್ದಾರೆ**
PUC & ಡಿಗ್ರಿ ಪಾಸ್ / ಫೇಲ್ ಆದ ಹುಡುಗಿಯರು ಮತ್ತು ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
Mob: 7676841708

**SPACE AVAILABLE FOR RENT**
At Devegowda circle, Ringroad, Mysore.Very Auspicious Set Vastu Location, At North East Corner Builuding.Ground floor 900 sft First floor 950 sft, Second floor 950 sft spaces Available. Suitable for Cafeteria, corporate Office Space, co-working space, Boutique, fitness Center, Banks, Whosale and retail shops etc
Mob: 8147821168 / 7760968403

**WANTED**
ಫರ್ನಿಷಿಂಗ್ ಅಂಗಡಿಯಲ್ಲಿ ಅಕೌಂಟೆಂಟ್ ಕೆಲಸಕ್ಕೆ 1year experience ಇರುವವರು ಮಹಿಳೆಯರು ಬೇಕಾಗಿದ್ದಾರೆ. Near Ashoka Road.
Mob: 9916514950



ಸ್ಕೂಲ್, ಕಾಲೇಜ್ ಯೂನಿಫಾರಂ
ಬ್ಲೇಜರ್ ರೂ.1300
ಲ್ಯಾಬ್ ಏಪ್ರಾನ್ ರೂ. 300
ಭಾವಸಾರ್ **ಶ್ರೀಗಣೇಶ್**
ಅಗ್ರಹಾರ, ಬಸವೇಶ್ವರ ರಸ್ತೆ 5ನೇ ಕ್ರಾಸ್, ಮೈಸೂರು

**GODOWN FOR RENT**
1200 Sqft., attached to Ring Road in Hosahundi Circle, Opposite to APMC
Call: 9886386698

**DTCP SITES FOR SALE**
ಹುಣಸೂರಿನ ಕೋಟೆ ರಸ್ತೆಯ "VCR ದೇವಗಿರಿ" ಬಡಾವಣೆ ನಿವೇಶನಗಳು ಮಾರಾಟಕ್ಕಿವೆ.
9886048471, 9036291192

**ಮನೆ ಬಾಡಿಗೆಗೆ**
40 x 40 ಪೂರ್ವ ದಿಕ್ಕು, ಇಂಡಿಪೆಂಡೆಂಟ್, ಕಾರ್ನರ್, ಕಾರ್ ಪಾರ್ಕಿಂಗ್ ಸೌಲಭ್ಯ ಇರುವ ಮನೆ ಹಿನಕಲ್ ರಿಂಗ್ ರೋಡ್ ಸರ್ಕಲ್ ಹತ್ತಿರ , ಎಸ್.ಪಿ. ರೆಸಿಡೆನ್ಸಿ ಅಪಾರ್ಟ್‌ಮೆಂಟ್ ರಸ್ತೆ, ಮೈಸೂರು. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
9741534036 / 9148392414

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
9845000035, 9886430901

**ಮನೆ ಕೆಲಸಕ್ಕೆ ಹಾಗೂ ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ. ಮಹಿಳೆ ಮಾತ್ರ**
(ಕುವೆಂಪುನಗರ, ಮೈಸೂರು).
Mob: 9972805819

**MYSORU JOB'S**
Age (18-24) TRAINEE MANAGER ಗಳಾಗಿ 10th, ಮೇಲ್ಪಟ್ಟವರು Earn (10500/- ರಿಂದ 18500/-) pm *NO FEE* ಪರಸ್ಥಳವರಿಗೆ ಮಾತ್ರ ವಸತಿ ನೇರ ಸಂಪರ್ಕಿಸಿ
9342827788
9342238667

ಎಸ್.ಎಸ್.ಇ.ಟಿ(ರಿ)
**ಅಡುಗೆ ಭಟ್ಟರು**
ಹಾಗೂ ಸಹಾಯಕರು ಬೇಕಾಗಿದ್ದಾರೆ
ಉತ್ತಮ ವೇತನ ನೀಡಲಾಗುವುದು
ಪಾಂಡವಪುರ ತಾ, ಮಂಡ್ಯ
ದೂ: 7338138083

**ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ**
ವಯಸ್ಸಾದವರನ್ನು, ರೋಗಿಗಳನ್ನು ಅವರ ಮನೆಯಲ್ಲೇ ನೋಡಿಕೊಳ್ಳಲು ಗಂಡಸರು/ಹೆಂಗಸರು ಮೈಸೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ ನೀಡಲಾಗುವುದು.
9880102700

**ಬೋಳು ತಲೆಯ ಸಮಸ್ಯೆಯೇ?**

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
# 574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

**ಬಸವಮಾರ್ಗ ವ್ಯಸನಮುಕ್ತ ದೇವಸ್ಥಾನ**
10 ದಿನಗಳ ಸಂಪೂರ್ಣ ಉಚಿತ ಕುಡಿತ ಬಿಡಿಸುವ ಶಿಬಿರ ಜೂ.1 ರಿಂದ 10ರ ವರೆಗೆ
88033-44999
97429-19191

**GURUKRUPA**
Hand-writing Coaching Center
* Handwriting Analysis for personal development * Cursive * Calligraphy * Brain exercises for speed writing * Breathing Technique * Traits. All in 24 classes + hand holding for 3 months.
Call: 9164442156
Offline / Online
https: //linktr.ee/gurukrupa1

**ಶ್ರೀಷ್ಣವಿ ಸೆಕ್ಯೂರಿಟಿ & ಮ್ಯಾನ್‌ಪವರ್ ಸರ್ವೀಸ್**
ತಕ್ಷಣ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಪ್ರತಿಷ್ಠಿತ ಕಂಪನಿಗೆ ಕೆಲಸಕ್ಕೆ ಲೋಡರ್ಸ್ ಹಾಗೂ ಸೂಪರ್‌ವೈಸರ್ (Field Officer) ಬೇಕಾಗಿದ್ದಾರೆ. ಸೂಪರ್‌ವೈಸರ್ Salary: 15,000 to 18,000. ಲೋಡರ್ಸ್‌ಗೆ 15,000 ರಿಂದ 16,000. ESI & PF ಹಾಗೂ ಕ್ಯಾಂಟೀನ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
ಸಂದೀಪ್: 9880133815, ಉಮೇಶ್: 9900822342
ಪವನ್: 8123382012

**ಸುವರ್ಣಾ ಯಾತ್ರ**
10 ದಿನಗಳ ಅಯೋಧ್ಯಾ, ಪೋಕ್ರ, ಮುಕ್ತಿನಾಥ, ಮನೋಕಾಮನ, ಕಠ್ಮಂಡು, ಚಿತ್ವಾನ್, ಜನಕ್ ಪುರ ಪ್ರವಾಸ 18/6/26. 7 ದಿನಗಳ ಕಾಶಿ ವಿಶ್ವನಾಥ, ಗಯಾ, ಬುದ್ಧ ಗಯಾ, ಬಾಬಾ ಬೈದ್ಯನಾಥ, ಪ್ರಯಾಗ್ ರಾಜ್, ನೈಮಿಶರಣ್ಯ, ಅಯೋಧ್ಯಾ ಪ್ರವಾಸ 23/6/25. 5 ದಿನಗಳ ದೆಹಲಿ, ಆಗ್ರಾ, ಮಥುರಾ, ಬೃಂದಾವನ, ಜೈಪುರ ಪ್ರವಾಸ 24/7/25
8660233673,9019462508

**OLD AGE HOME**
We offer nursing and Medical Services to Bedridden and Senior Citizens with Veg. Food and Accomodation at Our Centre in Gokulam Mysore at a Reasonable Cost
9880102700

**ಉಚಿತ ತರಬೇತಿ**
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

**WANTED TEACHERS**
LITTLE STAR ABC MONTESSORI ANY DEGREE, FRESHERS CAN APPLY ENGLISH MANDATORY, FEMALE CANDIDATES ONLY VIJAYNAGAR IV STAGE, 1ST PHASE MYSORE
8884970282
0821-2955499

**ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ**
Mob: 8618373596

**ತಕ್ಷಣ ಬೇಕಾಗಿದ್ದಾರೆ**
ಅಡಕನಹಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ 45 ವರ್ಷದೊಳಗಿನ ಪುರುಷರು, ಬೈಕ್ ಇರುವಂತವರು ಬೇಕಾಗಿದ್ದಾರೆ. SSLC, PUC ವಿದ್ಯಾರ್ಹತೆ ಇರಬೇಕು. ಕಡಕೊಳ, ತಾಂಡವಪುರ, ಚಿಕ್ಕಯ್ಯನ ಛತ್ರ, ನಂಜನಗೂಡು ಹಾಗೂ ಸುತ್ತಮುತ್ತಲಿನವರು ಸಂಪರ್ಕಿಸಿ: Mob: 7259598615

**ಬೇಕಾಗಿದ್ದಾರೆ**
ಮೈಸೂರಿನಲ್ಲಿರುವ ಹೆಸರಾಂತ ದ್ವಿಚಕ್ರ ವಾಹನದ ಶೋರೂಂಗೆ ಕೂಡಲೇ ಬೇಕಾಗಿದ್ದಾರೆ, Mysore/Nanjangud/Hunsur. * Marketing sales Executive. (Qualification-Any degree- fresher or experienced) ನಿಮ್ಮ ಅರ್ಜಿಗಳನ್ನು ಶೀಘ್ರವೇ ಕಳಿಸಿ. ಮೇಲ್ ಐಡಿ:
d11263.sales@baldealer.com
ಕರೆ ಮಾಡಿ:- 9980751999

**ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ**
Mob: 7204494854

**WANTED**
FRESHER/ EXPERIENCED NTT-CERTIFIED TEACHERS FOR BACHPAN A PLAYSCHOOL, METAGALLI, MYSURU
Admissions Open for PG, Nursery, LKG, UKG
7829915258 / 7829914258

**ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ**
Mob: 7975101020

**ಸದ್ಗುರು ಮ್ಯಾರೇಜಸ್**
ಎಲ್ಲಾ ಜಾತಿಯ ವಧು-ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ
ಫೋಟೋ, ಬಯೋಡೇಟಾ ಮತ್ತು ಜಾತಕವನ್ನು ವಾಟ್ಸಾಪ್ ಮಾಡಿ
ಡಾ. ಹಿರೇಮಠ್ ಗುರೂಜಿ
94482 29184
78996 25268


V-GUARD
10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

**ಸೈಟು ಮಾರಾಟಕ್ಕಿದೆ**
30X50 DTCP 11A ಖಾತ ರೇರಾ ಅಪ್ರೂವ್ಡ್ ಸೈಟು ಮಾರಾಟಕ್ಕಿದೆ. 26 ಲಕ್ಷಗಳು (80 ಅಡಿ ಬಸ್ ರಸ್ತೆಗೆ ಹತ್ತಿರದಲ್ಲಿದೆ) ತಳೂರು ಹತ್ತಿರ, TVS ಫ್ಯಾಕ್ಟರಿ ಹತ್ತಿರ, ಮೈಸೂರು.
Mob: 9742198093

**ತಕ್ಷಣ ಬೇಕಾಗಿದ್ದಾರೆ**
ಮೈಸೂರಿನಲ್ಲಿರುವ "Action World Group of Company" ಗೆ Freshers & experience ಆದಂತಹ 225 ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, PUC, ITI, Dip. Any Degree etc. ವಯೋಮಿತಿ: 18 – 30 ವರ್ಷಗಳು. ತಿಂಗಳಿಗೆ: 20,000 - 26,000. (ಉಚಿತ ಊಟ + ವಸತಿ + Promotion). ಕನ್ನಡ ಬಲ್ಲವರಿಗೆ ಹೆಚ್ಚಿನ ಆದ್ಯತೆ.
ಸಂಪರ್ಕಿಸಿ: ಡಿಂಪಲ್
7349699460, 7090212014

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364795917

**ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ**
Mob: 8296341145

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕೆಲಸ ಮಾಡಲು ಸೂಪರ್‌ವೈಸರ್, ಕಾರ್ ಡ್ರೈವರ್, ಅಡುಗೆ ಕೆಲಸದವರು ಮತ್ತು ಮನೆ ಕೆಲಸದವರು ಬೇಕಾಗಿದ್ದಾರೆ. ಊಟ ವಸತಿ ಉಚಿತ
ಸಂಪರ್ಕಿಸಿ:
8951517993

**ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್**
8197383645, 9008711654

**ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ**
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

**ಬೇಕಾಗಿದ್ದಾರೆ**
ಮೈಸೂರು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಅನಿಮಲ್ ಫೀಡ್ ಕಂಪನಿಗೆ 18 ರಿಂದ 45 ವರ್ಷದ ಒಳಗಿನ ಪುರುಷರು ಲೋಡಿಂಗ್, ಅನ್‌ಲೋಡಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ: 19 ಸಾವಿರದಿಂದ ಓಟಿ ಸೇರಿ 23,000/– ಸಾವಿರದವರೆಗೆ ತೆಗೆದುಕೊಳ್ಳಬಹುದು. ವಸತಿ (ರೂಂ) ಸೌಲಭ್ಯವಿರುತ್ತದೆ. ಸಂಪರ್ಕಿಸಿ:
ಸಾಯಿಕೃಪ ಎಂಟರ್‌ಪ್ರೈಸಸ್
ರಕ್ಷಿತ್ಯ : 9900889325 ಪ್ರಕಾಶ್ : 8971460235

**House for Rent - 2 BHK**
Fully furnished (2 cot, fridge, washing machine, sofa, dining table) 1st Floor, opposite to SVEI School, Vijayanagar IV Stage.
Mob: 9591847851

**ದಾಖಲಾತಿ ಕಳೆದಿದೆ**
ಚಂದ್ರೇಗೌಡ ಬಿನ್ ಲೇ॥ ಅಂಕೇಗೌಡ, ಬಲಮುರಿ ರೋಡ್, ಬೆಳಗೊಳ ಗ್ರಾಮ ಮತ್ತು ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆಯ ಇವರಿಗೆ ಸೇರಿದ ಉಮಾ ಕೋಂ ರಮೇಶ್‌ರವರಿಂದ ಖರೀದಿಸಿದ್ದ ಬೆಳಗೊಳ ಸರ್ವೇ ನಂ. 6/6ರ ಜಮೀನಿನ ಮೂಲ ಕ್ರಯಪತ್ರ ದಿ. 03-06-2019 ರಂದು ಕಳೆದಿದ್ದು, ಯಾರಿಗಾದರೂ ಸಿಕ್ಕಿದಲ್ಲಿ ದಯವಿಟ್ಟು ಸಂಪರ್ಕಿಸಿ:
9008551569, 9380126497

**ನಿವೇಶನ ಮಾರಾಟಕ್ಕೆ ಇವೆ**
ಬನ್ನೂರು ರಸ್ತೆಯಲ್ಲಿ ಭುಗತಗಳ್ಳಿ ಚೆಕ್ ಪೋಸ್ಟ್ ಹತ್ತಿರ ಪರಶುರಾಮ ನಗರ 30x40 ಪೂರ್ವ, ಮತ್ತು ಬ್ಯಾಂಕರ್ಸ್ ಲೇಔಟ್ ನಲ್ಲಿ 30x50 ಉತ್ತರ ಮುಖದ ನಿವೇಶನಗಳು ಮಾರಾಟಕ್ಕೆ ಇವೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
Mob: 9108545854

**ಚಾಲ್ತಿಯಲ್ಲಿರುವ ಹೋಟೆಲ್ ಮಾರಾಟಕ್ಕಿದೆ**
ವಿಳಾಸ: 80 ಅಡಿ ರಸ್ತೆ, ವಿಜಯನಗರ, ಮೈಸೂರು.
Call: Raju
Mob: 8123278753

**SHOP FOR RENT**
400 sq.ft. in Panchamanthra Main Road, Kuvempunagar, Mysore.
Mob: 8147249040

**ಬೇಕಾಗಿದ್ದಾರೆ**
ಬನ್ನೂರಿನಲ್ಲಿ ನಿರ್ಮಾಣವಾಗುತ್ತಿರುವ ಕಲ್ಯಾಣ ಮಂಟಪಕ್ಕೆ ವಾಚ್ಮ್ಯಾನ್ (Watchman) ಬೇಕಾಗಿದ್ದಾರೆ. ಸಂಪರ್ಕಿಸಿ:
9880902733
+91 8310327008

**SITE FOR SALE**
26x40 E/F site Janthagalli, near Marasettihalli, Mysore. Sq.ft. 1,700/-
Mob: 9739422143

**WANTED**
* Civil Engineer. Exp:(Dip / BE)
* Driver
CADD Forum
#195/B, 17th Main, 13th Cross, Behind Devaru Petrol Bunk, Saraswathipuram, Mysore.
9916266181, 9945621188

**WANTED- ಬೇಕಾಗಿದ್ದಾರೆ**
ಮೈಸೂರು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕಂಪನಿಗೆ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: ITI ವಯಸ್ಸು 18 ರಿಂದ 30 ಸಮಯ 9am to 5:30 ಸಂಬಳ 16500+Allowance. ಸಂಪರ್ಕಿಸಿ
7892725603 ಸುಷ್ಮಾ
8971460235 ಪ್ರಕಾಶ್

**ಸುವರ್ಣಾವಕಾಶ**
ಪ್ರಸಿದ್ಧ ಶೋರೂಂ ಮತ್ತು ಕಂಪನಿ & ವರ್ಕ್ ಫ್ರಮ್ ಹೋಂ ಕೆಲಸಕ್ಕೆ ಯುವಕರು ಮತ್ತು ಯುವತಿಯರು, 22,000/- salary. 100% ಗ್ಯಾರಂಟಿ ಕೆಲಸ.
9482369816 / 9482360136

**ತಕ್ಷಣ ಬೇಕಾಗಿದ್ದಾರೆ**
ಮೈಸೂರಿನ ಬನ್ನೂರು ರಸ್ತೆಯ ಹೆಸರಾಂತ ಕಾಲೇಜಿಗೆ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು ಸಂಬಳ: 20,000/– (10 hours). ESI & PF ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9620777819 / 9880727819

**ತಕ್ಷಣ ಬೇಕಾಗಿದ್ದಾರೆ**
ಚಾಮರಾಜನಗರದ ಬದನಗುಪ್ಪೆ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಮತ್ತು ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & PUC. ಸಂಬಳ: S/Sup - 20,000/- ; S/G - 19,000 (26 days). ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9620667819 / 9880727819

**SITES FOR SALE 30x40, S/F**
Yashodara Nagara, Telecom Layout, Bogadi. 30x40 S/F, 4th Stage, Vijayanagar. Contact:
Mob: 7019769205

**ವರನಿಗೆ ವಧು ಬೇಕಾಗಿದೆ**
ಜಾತಿ: ಒಕ್ಕಲಿಗ ಗೌಡ ; ವಯಸ್ಸು: 36 ; ಅವರ ತಂದೆ ತಾಯಿಗೆ ಒಬ್ಬನೆ ಮಗ, ಒಳ್ಳೆಯ ಆಸ್ತಿವಂತರು. ಮದುವೆ ಮಾಡಿಕೊಳ್ಳದೆ ಇರುವವರು, ವಿಧವೆಯರು, ವಿಚ್ಛೇದನ ಪಡೆದವರು ಹಾಗೂ ವಧುವಿಗೆ ಯಾವ ಖರ್ಚು ಇಲ್ಲದೆ ನಾವೇ ಮದುವೆ ಮಾಡಿಕೊಳ್ಳುತ್ತೇವೆ. ಸಂಪರ್ಕಿಸಿ:
ಬಾಬು: 9845019678

**WANTED**
For Delivery ಮೈಸೂರು ಪುಟ್ಟಾಳ್
Job Role: Delivery Executives (Delivery Boy). ಸಂಬಳ: ಮಾಸಿಕ ಪಾವತಿ ಮತ್ತು ಪರ್ ಶಿಪ್‌ಮೆಂಟ್ ಪಾವತಿ 18,000 – 25,000 ರೂ. ಪೆಟ್ರೋಲ್ ಭತ್ಯೆ ಮೊಬೈಲ್ ರೀಚಾರ್ಜ್ ಮತ್ತು ESI + PF ಸೌಲಭ್ಯಗಳು. ಅಗತ್ಯ: ಬೈಕ್ & ಸ್ಮಾರ್ಟ್ ಮೊಬೈಲ್
Hurry up & join today
8073831098, 9618396811, 6361112097

**ಬೇಕಾಗಿದ್ದಾರೆ**
ಬಿಜಿನೆಸ್ ನೋಡಿಕೊಳ್ಳಲು ಕಂಪ್ಯೂಟರ್ ಅನುಭವವುಳ್ಳ ಲೇಡೀಸ್ ಮ್ಯಾನೇಜರ್ ಮತ್ತು ಮಂಡ್ಯ ಸಿಟಿಯಲ್ಲಿರುವ ಲೇಡೀಸ್ ಪಿಜಿಯಲ್ಲಿ ಅಡುಗೆ ಕೆಲಸ ಮಾಡಲು ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ ಆಕರ್ಷಕ ಸಂಬಳ ವಸತಿ ಸೌಲಭ್ಯವಿರುತ್ತದೆ ಸಂಪರ್ಕಿಸಿ:
Mob: 9844794242

**ಜಮೀನು ಮಾರಾಟಕ್ಕಿದೆ**
ಮೈಸೂರು ತಾಲ್ಲೂಕು, ಜಯಪುರ ಹೋಬಳಿಯಲ್ಲಿ 20 ಗುಂಟೆ ಜಮೀನು ಮಾರಾಟಕ್ಕಿದೆ. ನೇರ ಸಂಪರ್ಕಿಸಿ:
9731937223 / 8892581231

**WANTED**
Computer Operator / Office Assistant:
(Minimum 2 years experience)
(Attractive salary with ESI and EPF)
Mob: 9164608888 / 9844299888
#17/2, 1st Floor, 5th Main, 8th Cross, Saraswathipuram, Mysore

**ತಕ್ಷಣ ಬೇಕಾಗಿದ್ದಾರೆ**
Sri Sapthagiri Builders & Developers, Mysuru
* Marketing Executives - 2
Experience - Executives Salary 20 + incentive.
Fresher salary 16 + incentive.
* Telecallers - 2
Basic salary 10 + incentive.
9980524644 / 9591828444

**WANTED**
PFM. Pvt.Ltd., Mysore
* Field Officer * Field Manager
* Operation Manager
* Marketing Manager
* Office Assistant & HR Assistant.
1 to 2 years experience in security & housekeeping services. Send resume
PFM.Mysore@gmail.com
Ph: 7975066539

**ತಕ್ಷಣ ಬೇಕಾಗಿದ್ದಾರೆ**
ಮೈಸೂರು ನಗರ ಹಾಗೂ ಚಿಕ್ಕಳ್ಳಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಸೆಕ್ಯೂರಿಟಿ ಗಾರ್ಡ್ (ಪುರುಷ) ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 8971367078

**WANTED**
1) Car Driver
2) Farm Supervisor
3) Truck Driver
Mob: 6366042375
Send your resume in whatsapp

**House For Sale**
20/40 EAST
Ground 2 BHK + 1st floor Room
MUDA with Clear Documents
Own Borewell & Vastu
Police layout 2nd Stage
9380284276

**OFFICE SPACE**
1. Suitable for Call Centre
2. Coaching Institute
3. Meeting Schedules
Time Available: 8am to 5pm only
Location @ Sharada Devi Nagar, Hootagalli
9916777925 / 9900617600

**WANTED**
Part time /full-time female candidates for an academy Training will be given. College students also can apply. WhatsApp your resume/message to
9480505931

**ಬೇಕಾಗಿದ್ದಾರೆ**
ಹೆಚ್.ಡಿ. ಕೋಟೆ ತಾಲ್ಲೋಕಿನಾದ್ಯಂತ ಕೆಲಸ ಮಾಡಲು SSLC PUC ಓದಿರುವ ಮಹಿಳಾ ಕ್ಷೇತ್ರ ಅಧಿಕಾರಿ
Ph: 6362255945

**DOCUMENT LOST**
Lost report No. 162635/2025, K.P. Chandrashekar, #779, 10th Main, 7th Cross, K.H. Road, Mysore-570 023. Allotment letter and related documents (MUDA) has been lost. Finders contact:
Mob: 9448188447

**ಸೈಟು ಮಾರಾಟಕ್ಕಿದೆ**
30x40 ಪ್ರಕೃತಿ ಎನ್‌ಕ್ಲೇವ್ ಏರ್‌ಪೋರ್ಟ್ ಹಿಂಭಾಗ, ಊಟಿ ರಸ್ತೆ, ಗುಡ್ ಲೊಕೇಶನ್, ಮೈಸೂರು. ಸಂಪರ್ಕಿಸಿ:
Mob: 9900372013

**ಬೇಕಾಗಿದ್ದಾರೆ**
ಕರುಣ ಟ್ರಸ್ಟ್, ಮೈಸೂರು
(ಪುರುಷರಿಗೆ ಮಾತ್ರ) ನಿರಾಶ್ರಿತರ ಮಾನಸಿಕ ಅಸ್ವಸ್ಥ, ವಸತಿ ತಾಣ, ಕೇರ್‌ಟೇಕರ್ (ವಿದ್ಯಾರ್ಹತೆ SSLC ಪಾಸ್ ಅಥವಾ ಫೇಲ್. ಊಟ, ವಸತಿ ಸೌಲಭ್ಯ ಇರುತ್ತದೆ. ಸಂಪರ್ಕಿಸಿ:
9449599562 / 9141470575

**PRAKRUTHI PROPERTIES**
FOR SALE
Near Jayanagar 40x50 Corner 4 Houses
30x45/27x60 Commercial Plots
30x40 MUDA Approved Sites@ KHB Kenchalgud
Residential & Commercial Plots in & around Mysore
20x57 Commercial Plot @ Saraswati Puram
40x63 New House Near Hari Vidyalaya, Bogadi
95386 90359, 90359 90359

**ಕಂಕಣ ಭಾಗ್ಯ**
ವಧು-ವರರಿಗೆ ಕೂಡಲೇ ಸಂಪರ್ಕಿಸಿ ಕುರುಬ, ಒಕ್ಕಲಿಗ, ಲಿಂಗಾಯತ, ಈಡಿಗ, ಆಚಾರ್ಯ, ನಾಯಕ, SC ಎಲ್ಲಾ ಜಾತಿಯ ವಧು-ವರರು ವಿಚ್ಛೇದಿತರು, ವಿಧುರ-ವಿಧವೆಯರು ಸಂಪರ್ಕಿಸಿ
9071577131

ನಮ್ಮಲ್ಲಿ ಬಾದಾಮಿ, ಗೋಡಂಬಿ, ಪಿಸ್ತಾ, ಅಂಜೂರ, ಒಣದ್ರಾಕ್ಷಿ, ಖರ್ಜೂರ, ಮುಂತಾದ ಡ್ರೈಫ್ರೂಟ್ಸ್ ದೊರೆಯುತ್ತದೆ. (5 ಕಿ.ಮೀ ವರೆಗೂ ಉಚಿತ ಡೆಲಿವರಿ) ಸಂಪರ್ಕಿಸಿ:
**ರಾಜ್ ಗುರು ಡ್ರೈಫ್ರೂಟ್,**
ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
7022293342
9845460211

**NSE Nypunya** School of Excellence MYSURU
DATTAGALLI & R.T. NAGAR
ಬೇಕಾಗಿದ್ದಾರೆ
1. ಶಾಲಾ ಬಸ್ ಚಲಾಯಿಸಲು ಹೆವಿ ಲೈಸನ್ಸ್ ಉಳ್ಳ ಅನುಭವಿ ಚಾಲಕರು ಬೇಕಾಗಿದ್ದಾರೆ. ಸಂಪರ್ಕ ಸಂಖ್ಯೆ : 70228 49856
2. ಶಾಲೆಯಲ್ಲಿ ಕೆಲಸ ಮಾಡಲು ಮಹಿಳಾ ಆಯಾ/ ಅಟೆಂಡರ್ ಬೇಕಾಗಿದ್ದಾರೆ. ಸಂಪರ್ಕ ಸಂಖ್ಯೆ
Mob: 96069 59451

**40x50 Corner Site**
Roopa Nagar
Call: 9880273834

**ಬೇಕಾಗಿದ್ದಾರೆ**
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವವಿರುವ ಮಹಿಳೆಯರು, ಯುವತಿಯರು ಬೇಕಾಗಿದ್ದಾರೆ. ಅನುಭವವಿಲ್ಲದವರಿಗೆ ಉಚಿತವಾಗಿ ಊಟ ಹಾಗೂ ವಸತಿಯನ್ನು ಕೊಟ್ಟು ತರಬೇತಿಯನ್ನು ಸಹ ನೀಡಿ ನಾವೇ ಅತ್ಯಾಕರ್ಷಕವಾದ ಸಂಬಳವನ್ನು ನೀಡುತ್ತೇವೆ.
Mob: 8951190340

**WANTED**
Lab Technician
Male or Female
1 year experience.
Part time or full time.
Kumbarakoppal Arch, Hebbal, Mysuru.
Mob: 8951735041

**30x40 North**
Gayathri Layout, Near R.T. Nagar
Call: 9880273834

**ಬೇಕಾಗಿದ್ದಾರೆ**
ಕೇಟರಿಂಗ್ ಹಾಗೂ ಹೋಟೆಲ್ ನಡೆಸುವವರು ಬೇಕಾಗಿದ್ದಾರೆ. ಪಿ. ರಾಜಪ್ಪ ಕಲ್ಯಾಣ ಮಂಟಪ, ಮೈಸೂರು.
Mob: 9141614633

**WANTED**
TEACHING STAFF
for reputed institution (Experience Preferred) for Social Science, Mathematics and Hindi. Transport facilities available. Drop your resume through WhatsApp Contact no:
8971577685, 9980631121

**ಮೈಸೂರು ಮಿತ್ರ** 46
**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

# ನಂಜನಗೂಡಲ್ಲಿ ಬೃಹತ್ ತಿರಂಗ ಯಾತ್ರೆ


ನಂಜನಗೂಡಲ್ಲಿ ಬೃಹತ್ ತಿರಂಗ ಯಾತ್ರೆ ನಡೆಯಿತು.

ನಂಜನಗೂಡು, ಮೇ 28– ಕಾಶ್ಮೀರದ ಪಹಲ್ಗಾಮ್‌ನಲ್ಲಿ 26 ಭಾರತೀಯರ ಹತ್ಯೆಗೈದ ಉಗ್ರಗಾಮಿಗಳನ್ನು ಸದೆ ಬಡಿದು, ಭಯೋತ್ಪಾದನೆ ನಿರ್ಮೂಲನೆಗೆ ಪಣತೊಟ್ಟು ಗಡಿಯಿಂದಾಚೆ ಅಡಗಿ ಕುಳಿತ ಉಗ್ರಗಾಮಿಗಳು ಮತ್ತು ಅವರ ಅಡಗು ತಾಣಗಳನ್ನು ಧ್ವಂಸಗೊಳಿಸುವ ಮೂಲಕ ಪರಾಕ್ರಮ ಮೆರೆದ ದೇಶದ ಸೈನಿಕರಿಗೆ ಗೌರವ ಸಮರ್ಪಿಸುವ ಸಲುವಾಗಿ ಬೃಹತ್ ತಿರಂಗ ಯಾತ್ರೆ ನಡೆಸಲಾಗುತ್ತಿದೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಗರದ ಚಿಂತಾಮಣಿ ಗಣಪತಿ ದೇವಾಲಯದ ಬಳಿ ಬಿಜೆಪಿ ಪಕ್ಷದಿಂದ ಏರ್ಪಡಿಸಿದ್ದ ಬೃಹತ್ ತಿರಂಗ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಕಾಶ್ಮೀರದ ಪೆಹಲ್ಗಾಮ್‌ಗೆ ಪ್ರವಾಸಕ್ಕೆ ತೆರಳಿದ್ದ ಪ್ರವಾಸಿಗರನ್ನು ಉಗ್ರಗಾಮಿಗಳು ಧರ್ಮ ಕೇಳಿ ಗುಂಡಿಕ್ಕಿ 26 ಜನರನ್ನು ಬಲಿ ತೆಗೆದುಕೊಂಡಿದ್ದರು. ಅದರಲ್ಲಿ ಆದಿಲ್ ಶಾ ಎಂಬ ಮುಸ್ಲಿಂ ಯುವಕ ಸಾವನ್ನಪ್ಪಿದ್ದ. ಈ ಘಟನೆಯೊಂದಿಗೆ ಉಗ್ರಗಾಮಿಗಳು ಹಿಂದೂ ಮುಸ್ಲಿಂ ಎಂಬ ಭೇದ ಭಾವವಿಲ್ಲದೆ ಹೇಯ ಕೃತ್ಯವನ್ನು ನಡೆಸಿದ್ದಾರೆ. ಇದಕ್ಕೆ ಪ್ರತ್ಯುತ್ತರವಾಗಿ ಭಾರತದ ಸೈನಿಕರು ಆಪರೇಷನ್ ಸಿಂಧೂರದ ಮೂಲಕ ಗಡಿಯಿಂದ ಆಚೆಗೆ ತೆರಳಿ ಉಗ್ರಗಾಮಿಗಳ ಅಡಗು ತಾಣಗಳು ಮತ್ತು ಅವರಿಗೆ ತರಬೇತಿ ನೀಡುತ್ತಿದ್ದ ಕೇಂದ್ರಗಳನ್ನು ಧ್ವಂಸ ಮಾಡಿದ್ದಲ್ಲದೆ ಉಗ್ರಗಾಮಿಗಳು ಮತ್ತು ಸ್ಲೀಪರ್ ಸೆಲ್‌ಗಳ ಹುಟ್ಟಡಗಿಸಿ ತಮ್ಮ ಪರಾಕ್ರಮ ಮೆರೆದು ಭಾರತದ ಕೀರ್ತಿ ಹೆಚ್ಚಿಸಿದ್ದಾರೆ. ನಮ್ಮ ಸೈನಿಕರ ಪರಾಕ್ರಮ ಗೌರವಿಸುವ ಸಲುವಾಗಿ ಬಿಜೆಪಿ ಕರೆ ನೀಡಿದ್ದ ಬೃಹತ್ ತಿರಂಗ ಯಾತ್ರೆ ಕಾರ್ಯಕ್ರಮ ನಂಜನಗೂಡಿನಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿದ್ದು ಜನರು ಪಕ್ಷಾತೀತ, ಜಾತ್ಯಾತೀತ, ಧರ್ಮಾತೀತವಾಗಿ ಭಾಗವಹಿಸಿದ್ದಾರೆ ಎಂದರು.

ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ಮಾತನಾಡಿ, ಪಾಕಿಸ್ತಾನದಲ್ಲಿರುವ ಭಯೋತ್ಪಾದಕ ಅಡಗುತಾಣಗಳನ್ನು ಆಪರೇಷನ್ ಸಿಂಧೂರ್ ಮೂಲಕ ಭಾರತ ಯಶಸ್ವಿಯಾಗಿ ನಾಶಮಾಡಿದೆ. ಅಲ್ಲದೆ ಭಯೋತ್ಪಾದನೆಯನ್ನು ಪೋಷಣೆ ಮಾಡುತ್ತಿದ್ದ ಪಾಕಿಸ್ತಾನದ ಮುಖವಾಡವನ್ನು ವಿಶ್ವಸಂಸ್ಥೆ ಎದುರು ಕಳಚಿದೆ. ತಮ್ಮ ಪಾರಾಕ್ರಮದ ಮೂಲಕ ಭಾರತದ ಕೀರ್ತಿ ಹೆಚ್ಚಿಸಿದ ಭಾರತೀಯ ಸೈನಿಕರ ಸೇವೆ ಶ್ಲಾಘನೀಯ. ದೇಶದ ಸೈನಿಕರಿಗೆ ಬೆಂಬಲ ಸೂಚಿಸಲು ಇಡೀ ದೇಶದಲ್ಲಿ ತಿರಂಗ ಯಾತ್ರೆ ಜರುಗುತ್ತಿದ್ದು ನಂಜನಗೂಡಿನಲ್ಲಿ ಯಶಸ್ವಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜ ಹಿಡಿದ ನೂರಾರು ಬಿಜೆಪಿ ಕಾರ್ಯಕರ್ತರು ಮತ್ತು ಸಾರ್ವಜನಿಕರು ನಗರದ ಚಿಂತಾಮಣಿ ಗಣಪತಿ ದೇವಾಲಯದಿಂದ ಆರ್‌ಪಿ ರಸ್ತೆ ಮೂಲಕ ಸಾಗಿ ಶ್ರೀಕಂಠೇಶ್ವರ ದೇವಾಲಯ ಮುಖಾಂತರ ಎಂಜಿಎಸ್ ರಸ್ತೆಯಲ್ಲಿ ಬೃಹತ್ ಯಾತ್ರೆ ನಡೆಸಿದರು. ಬೃಹತ್ ತಿರಂಗ ಯಾತ್ರೆಯು ನಗರದ ಹುಲ್ಲಹಳ್ಳಿ ವೃತ್ತದಲ್ಲಿ ಕೊನೆಗೊಂಡಿತು.

ಈ ವೇಳೆ ಬಿಜೆಪಿ ತಾಲೂಕು ಅಧ್ಯಕ್ಷ ಕೆಂಡಗಣ್ಣಪ್ಪ, ನಗರಾಧ್ಯಕ್ಷ ಸಿದ್ದರಾಜು, ಜಿಪಂ ಮಾಜಿ ಸದಸ್ಯರಾದ ಸಿ.ಚಿಕ್ಕರಂಗನಾಯಕ, ಎಸ್.ಎಂ.ಕೆಂಪಣ್ಣ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ಜಿಲ್ಲಾ ಹಿಂದುಳಿದ ಮೋರ್ಚಾ ಅಧ್ಯಕ್ಷ ಬಾಲಚಂದ್ರ, ಮುಖಂಡರಾದ ಪರಶಿವಮೂರ್ತಿ, ಮಹೇಶ್, ಪುಟ್ಟಸ್ವಾಮಿ, ಸೋಮಣ್ಣ, ಮಂಜುನಾಥ್, ಮಹೇಶ್, ರಾಜು, ಉಮೇಶ್ ಮೋದಿ, ಅಬ್ದುಲ್ ರಜಾಕ್, ಶ್ರೀಕಂಠ, ಶೇಖರ್, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ನಂದಿನಿ, ನಗರಸಭಾ ಸದಸ್ಯರಾದ ಮಹದೇವ ಪ್ರಸಾದ್, ಖಾಲಿದ್ ಅಹಮದ್ ಸೇರಿದಂತೆ ಹಲವರಿದ್ದರು.

# ಸಾಮಾಜಿಕ ಕ್ರಾಂತಿಯ ಹರಿಕಾರ ಬಸವಣ್ಣ


ನಿಲಸೋಗೆ ಗ್ರಾಮದಲ್ಲಿ ಬಸವೇಶ್ವರ ಜಯಂತಿ ನಡೆಯಿತು.

ತಿ.ನರಸೀಪುರ, ಮೇ 28– ತಾಲೂಕಿನ ನಿಲಸೋಗೆ ಗ್ರಾಮದಲ್ಲಿ ಶ್ರೀಬಸವೇಶ್ವರ ಯುವಕರ ಬಳಗ ಹಾಗೂ ಶ್ರೀಗುರುಮಲ್ಲೇಶ್ವರ ವೀರಶೈವ ಬಳಗದ ವತಿಯಿಂದ ಜಗಜ್ಯೋತಿ ಬಸವೇಶ್ವರ ಜಯಂತಿ ವಿಜೃಂಭಣೆಯಿಂದ ನಡೆಯಿತು.

ಗ್ರಾಮದಲ್ಲಿ ಶ್ರೀಬಸವೇಶ್ವರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ನಿಲಸೋಗೆ ಗ್ರಾಮದ ಗುರುಮಲ್ಲೇಶ್ವರ ದಾಸೋಹ ಮಠದ ಮಲ್ಲಪ್ಪ ಸ್ವಾಮೀಜಿ, ಕಾಯಕವೇ ಕೈಲಾಸ ತತ್ವದಡಿ ಎಲ್ಲರೂ ಸಮಾನರು. ಯಾವುದೇ ಕೆಲಸದಲ್ಲಿ ಮೇಲು–ಕೀಳಿಲ್ಲ ಎಂದು ಸಾರಿದ ಬಸವಣ್ಣ ಅವರು ಸಾಮಾಜಿಕ ಕ್ರಾಂತಿಯ ಹರಿಕಾರರು ಹೌದು. ದೇಶದಲ್ಲಿ ಅನುಭವ ಮಂಟಪದ ಮೂಲಕ ಸಾಮೂಹಿಕ ಶಿಕ್ಷಣಕ್ಕೆ ಚಾಲನೆ ನೀಡಿದವರಲ್ಲಿ ಬಸವಣ್ಣ ಮೊದಲಿಗರು. ಅಲ್ಲಿ ವಿದ್ಯೆಯಿಂದ ವಂಚಿರಾದವರಿಗೆ, ಮಹಿಳೆಯರಿಗೆ ಶಿಕ್ಷಣ ಹಾಗೂ ಅಭಿಪ್ರಾಯ ವ್ಯಕ್ತಪಡಿಸಲು ಮುಕ್ತ ಅವಕಾಶ ಮಾಡಿಕೊಟ್ಟು ಸಾಮಾಜಿಕ ಬದಲಾವಣೆಗೆ ಕಾರಣರಾದರು. 12ನೇ ಶತಮಾನದ ಅಂದಿನ ಸಮಾಜ ತಾರತಮ್ಯದಿಂದ ಕೂಡಿತ್ತು. ಶೋಷಿತರು, ದೀನದಲಿತರು ಹಾಗೂ ಮಹಿಳೆಯರು ಅಭಿವ್ಯಕ್ತಿ ಸ್ವಾತಂತ್ರ್ಯವಿಲ್ಲದೆ ತಮ್ಮ ದನಿಯನ್ನೇ ಕಳೆದುಕೊಂಡಿದ್ದರು. ಅಂತಹ ಸಂದರ್ಭ ಬಸವಣ್ಣನವರು ಅನುಭವ ಮಂಟಪದ ಮೂಲಕ ಸಮಾಜದ ಕಟ್ಟಕಡೆಯವರನ್ನು ಒಂದೆಡೆ ಕಲೆಹಾಕಿ ತಮ್ಮ ಸರಳ ವಚನ ಸಾಹಿತ್ಯದ ಮೂಲಕ ಎಲ್ಲರನ್ನು ಜಾಗೃತಗೊಳಿಸಿದರು. ಆ ಮೂಲಕ ಸಮಾನತೆಯ ತತ್ವ ವಿಚಾರಗಳಿಗೆ ಮುನ್ನುಡಿ ಬರೆದ ಬಸವಣ್ಣ ಅವರು ಶ್ರೇಷ್ಠ ಸಮಾಜ ಸುಧಾರಕರಾದರು ಎಂದರು.

ಬಸವ ಜಯಂತಿ ಹಿನ್ನೆಲೆಯಲ್ಲಿ ಗ್ರಾಮಸ್ಥರಿಗೆ ದಾಸೋಹ ವ್ಯವಸ್ಥೆ ಕಲ್ಪಿಸಲಾಗಿತ್ತು. ಸಂಜೆ ವೀರಗಾಸೆ ಕುಣಿತ ಸೇರಿದಂತೆ ಸ್ತಬ್ಧ ಚಿತ್ರಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಬಸವೇಶ್ವರ ಮೂರ್ತಿ ಮೆರವಣಿಗೆ ನಡೆಯಿತು.

ಈ ವೇಳೆ ಹೊಸೂರುಹುಂಡಿ ಮಠದ ರಾಜಶೇಖರ ಸ್ವಾಮೀಜಿ, ಬಿಲಿಗೆರೆಹುಂಡಿ ಮಠದ ಗುರುಸ್ವಾಮೀಜಿ, ಕುಂದೂರು ಮಠದ ನಂಜುಂಡ ಸ್ವಾಮೀಜಿ, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ಉಪಾಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ, ಪುರಸಭೆ ಸದಸ್ಯ ಎಸ್.ಕೆ.ಕಿರಣ್, ಬಸವ ಬಳಗದ ಅಧ್ಯಕ್ಷ ಪರಮೇಶ್ ಪಟೇಲ್, ನಂಜುಂಡಸ್ವಾಮಿ, ಸುಗಂಧರಾಜು, ಡಿ.ಎಲ್.ಮಹದೇವಪ್ಪ, ಧರ್ಮಯ್ಯನಹುಂಡಿ ಪ್ರಭು, ಹಿರಿಯೂರು ನವೀನ್, ವೀರಶೈವ ಬಳಗದ ಯುವ ಮುಖಂಡರು ಹಾಗೂ ಗ್ರಾಮಸ್ಥರು, ಯಜಮಾನರು ಹಾಜರಿದ್ದರು.

# ಕೆರೆ ಪುನಶ್ಚೇತನಕ್ಕೆ ಗ್ರಾಮಸ್ಥರು ಸಹಕರಿಸಿ

ಮೂಗೂರು, ಮೇ 28– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ನಮ್ಮೂರು ನಮ್ಮ ಕೆರೆ ಯೋಜನೆಯಡಿ ಗ್ರಾಮದ ಹಳೇ ಕೆರೆಯನ್ನು ಪುನಶ್ಚೇತನಗೊಳಿಸಿ ಅದರ ಅಂದ ಹೆಚ್ಚಿಸಲು ಗ್ರಾಮಸ್ಥರು ಸಹಕರಿಸಬೇಕು ಎಂದು ಧರ್ಮಸ್ಥಳ ಸಂಸ್ಥೆ ತಾಲೂಕು ಯೋಜನಾಧಿಕಾರಿ ಶಕುಂತಲಾ ತಿಳಿಸಿದರು.


ಕಾರ್ಯಕ್ರಮವನ್ನು ಮುಖಂಡ ಎಂ.ಪಿ.ಶಿವರುದ್ರಸ್ವಾಮಿ ಉದ್ಘಾಟಿಸಿದರು.

ಮೂಗೂರಿನ ಶ್ರೀತ್ರಿಪುರ ಸುಂದರಿ ಅಮ್ಮನವರ ದೇವಾಲಯದ ಆವರಣದಲ್ಲಿ ನಡೆದ ಕೆರೆ ಅಭಿವೃದ್ಧಿ ಸಮಿತಿ ರಚನೆ ಹಾಗೂ ಸಮಾಲೋಚನೆ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಕೆರೆಕಟ್ಟೆಗಳು ಗ್ರಾಮದ ಸಂಪತ್ತು. ಅವುಗಳಿಗೆ ಕಾಯಕಲ್ಪ ನೀಡಲು ಪೂಜ್ಯರು ಮುಂದಾಗಿದ್ದಾರೆ. ತಾಲೂಕಿನಾದ್ಯಂತ 100ಕ್ಕೂ ಹೆಚ್ಚು ಕೆರೆಗಳ ಹೂಳು ತೆಗೆದು ಅಭಿವೃದ್ಧಿಪಡಿಸಲಾಗಿದೆ. ಹೀಗಾಗಿ ನಮ್ಮೂರು ನನ್ನ ಕೆರೆ ಎಂಬ ಭಾವನೆ ಎಲ್ಲರಲ್ಲೂ ಮೂಡಬೇಕು. ಇದರಲ್ಲಿ ಜನರ ಪಾಲು ಇರಬೇಕು. ಕೆರೆಗಳು ಒಬ್ಬ ವ್ಯಕ್ತಿಗೆ ಸೇರದೇ ಸಮಾಜಕ್ಕೆ ಸೇರಬೇಕು ಎಂಬುದು ಪೂಜ್ಯರ ಆಶಯವಾಗಿದೆ. ಅದರಂತೆ ಕೆರೆಗಳ ಪುನಶ್ಚೇತನಕ್ಕೆ ತಾವೆಲ್ಲರೂ ಕೈ ಜೋಡಿಸಿ ಕೆರೆ ಅಭಿವೃದ್ಧಿ ಯೋಜನೆ ಫಲಪ್ರದವಾಗಲು ಗ್ರಾಮದ ಮುಖಂಡರು, ಗ್ರಾಮಸ್ಥರು ಸಹಕಾರ ನೀಡಬೇಕು ಎಂದರು.

ಈ ವೇಳೆ ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ಎಂ.ಪಿ.ಶಿವರುದ್ರಸ್ವಾಮಿ, ಉಪಾಧ್ಯಕ್ಷ ಎಂ.ಎಂ.ಬಸವಣ್ಣ, ಕೃಷಿ ಅಧಿಕಾರಿ ಶಿವಶಂಕರ್, ವಲಯಾಧಿಕಾರಿ ಕುಮಾರಿ, ಚಂದ್ರಮ್ಮ, ಸತೀಶ್, ಎಂ.ಎಂ.ಮಹದೇವಸ್ವಾಮಿ, ರೇಣುಕಾ ಪ್ರಸಾದ್, ಪ್ರಕಾಶ್, ಚಿದಂಬರ ಮೂರ್ತಿ, ನಟರಾಜು ಇತರರಿದ್ದರು.

## ಮಳೆಯಿಂದಾಗುವ ಪ್ರಕೃತಿ ವಿಕೋಪ ತಡೆಗಟ್ಟುವ ಸಂಬಂಧ

# ತಹಸೀಲ್ದಾರ್ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ಸಭೆ

ಹೆಚ್.ಡಿ.ಕೋಟೆ, ಮೇ 28– ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಮಳೆಯಿಂದ ಸಂಭವಿಸಬಹುದಾದ ಪ್ರಕೃತಿ ವಿಕೋಪ ತಡೆಗಟ್ಟುವ ಸಂಬಂಧ ತಹಸೀಲ್ದಾರ್ ಶ್ರೀನಿವಾಸ್ ಅವರ ಅಧ್ಯಕ್ಷತೆಯಲ್ಲಿ ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ಅಧಿಕಾರಿಗಳನ್ನು ಒಳಗೊಂಡ ಟಾಸ್ಕ್‌ಫೋರ್ಸ್ ಸಭೆ ಬುಧವಾರ ನಡೆಯಿತು.


ತಹಸೀಲ್ದಾರ್ ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ಸಭೆ ನಡೆಯಿತು.

ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, ಕಬಿನಿ, ತಾರಕ, ಜಲಾಶಯಗಳ ಹೊರ ಹಾಗೂ ಒಳ ಹರಿವಿನ ಬಗ್ಗೆ ನೀರಾವರಿ ಇಲಾಖೆ ಅಧಿಕಾರಿಗಳು ಹೆಚ್ಚು ಗಮನ ಹರಿಸಬೇಕು. ಹೆಚ್ಚು ಮಳೆಯಿಂದಾಗಿ ಕಬಿನಿ ಜಲಾಶಯದ ಹಿನ್ನೀರಿನಲ್ಲಿರುವ ಡಿ.ಬಿ.ಕುಪ್ಪೆ ಮಚ್ಚೂರು, ಆನೆಮಾಳ, ಮುಳ್ಳೂರು, ಕಡೆಗದ್ದೆ ಗ್ರಾಮಗಳು ಮುಳುಗಡೆಯಾಗುವುದರಿಂದ ಜನರನ್ನು ಸ್ಥಳಾಂತರಿಸಲು ಡಿ.ಬಿ.ಕುಪ್ಪೆ ಸರ್ಕಾರಿ ಶಾಲೆಯಲ್ಲಿ ಕಾಳಜಿ ಕೇಂದ್ರ ತೆರಯಬೇಕು. ಮನೆ, ಬೆಳೆ, ಪ್ರಾಣಿ ಹಾನಿ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಹೋಬಳಿವಾರು ನೋಡಲ್ ಅಧಿಕಾರಿಗಳನ್ನು ನೇಮಿಸ ಲಾಗುವುದು ಎಂದರು.

ಕಬಿನಿ ಜಲಾಶಯ ಮುಂಭಾಗದ ಸೇತುವೆ ಹಾಗೂ ಇತರೆ ಮುಳುಗಡೆ ಆಗುವ ಸೇತುವೆಗಳಿಗೆ ಪೊಲೀಸ್ ಭದ್ರತೆ ಒದಗಿಸಬೇಕು. ಅಲ್ಲದೇ ವಿದ್ಯುತ್ ಸಮಸ್ಯೆ, ರಸ್ತೆಗಳಲ್ಲಿ ಮರಗಳು ಬೀಳುವ ಸಾಧ್ಯತೆ ಇರುವುದರಿಂದ ಅಗತ್ಯ ಕ್ರಮ ವಹಿಸಲು ಚೆಸ್ಕಾಂ ಹಾಗೂ ಅರಣ್ಯ ಇಲಾಖೆಗೆ ಸೂಚಿಸಲಾಯಿತು. ಅಲ್ಲದೇ ಎಲ್ಲಾ ಇಲಾಖೆ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು, ತಮ್ಮ ಕೆಲಸ ನಿರ್ವಹಿಸಬೇಕು ಎಂದರು.

ಸಭೆಯಲ್ಲಿ ಸರಗೂರು ತಹಸೀಲ್ದಾರ್, ಮೋಹನ್ ಕುಮಾರಿ, ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಕೋಟೆ, ಸರಗೂರು ಇಓಗಳಾದ ಧರಣೇಶ್, ಪ್ರೇಮ್ ಕುಮಾರ್, ಕೃಷಿ ಅಧಿಕಾರಿ ಜಯರಾಮಯ್ಯ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮಸ್ವಾಮಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ಮಹೇಶ್, ಅಧಿಕಾರಿಗಳಾದ ಚಂದು ಕುಮಾರ್, ವಸಂತ್ ಕುಮಾರ್, ಮಂಜುನಾಥ್, ಉಷಾ, ಪ್ರಸನ್ನ, ಗೋವಿಂದ ನಾಯಕ, ವಿಶ್ವನಾಥ್, ರವಿಚಂದ್ರ, ವೈ.ಡಿ.ರಾಜಣ್ಣ ಸೇರಿದಂತೆ ಎರಡೂ ತಾಲೂಕಿನ ಅಧಿಕಾರಿಗಳು ಭಾಗವಹಿಸಿದ್ದರು.

# ಮಳೆಗಾಳಿ ಸಂದರ್ಭ ವಿದ್ಯುತ್ ವ್ಯತ್ಯಯವಾದಲ್ಲಿ ಸಂಪರ್ಕಿಸಿ

ನಂಜನಗೂಡು, ಮೇ 28– ಉಪವಿಭಾಗ ವ್ಯಾಪ್ತಿ ಈಗಾಗಲೇ ಮಳೆಗಾಲ ಆರಂಭವಾಗಿದ್ದು, ಮಳೆಗಾಳಿ ಸಂದರ್ಭ ವಿದ್ಯುತ್ ವಿಫಲವಾದಲ್ಲಿ ಹಾಗೂ ವಿದ್ಯುತ್ ಮಾರ್ಗಗಳ ಜಾಲದಲ್ಲಿ ವ್ಯತ್ಯಯಗಳು ಸಂಭವಿಸಿದಲ್ಲಿ ಸಂಬಂಧಿಸಿದ ದೂರುಗಳಿಗೆ ಪರಿಹಾರ ಕಂಡುಕೊಳ್ಳಲು ಸಾರ್ವಜನಿಕರು ಈ ಕೆಳಕಂಡ ಆಯಾ ವ್ಯಾಪ್ತಿಯ ನಿಗಮದ ಸೇವಾ ಕೇಂದ್ರಗಳು ಮತ್ತು ಅಧಿಕಾರಿಗಳನ್ನು ಸಂಪರ್ಕಿಸಲು ನಿಗಮದ ಪ್ರಕಟಣೆ ತಿಳಿಸಿದೆ.

ಸಹಾಯಕ ಇಂಜಿನಿಯರ್ ನಂಜನಗೂಡು ನಗರಶಾಖೆ ಮೊ.9448994798, ಸರ್ವೀಸ್ ಸ್ಟೇಷನ್ ದೂ:08221–226242, ಮೊ.9449598522, 9449598523, ಸಹಾಯಕ ಇಂಜಿನಿಯರ್ ಸಿಂಧೂವಳ್ಳಿಪುರ ಶಾಖೆಯ ಸಿಂಧುವಳ್ಳಿ, ನವಿಲೂರು, ಕೂಡ್ಲಾಪುರ, ಕಸುವಿನಹಳ್ಳಿಯವರು ಮೊ. 9448994801, ತಾಂಡವಪುರ ಶಾಖೆಯ ತಾಂಡವಪುರ, ಮರಳೂರು, ಹುಳಿಮಾವು, ಕೆಂಪಿಸಿದ್ದನಹುಂಡಿಯವರು ಮೊ.9448994799, ಸುತ್ತೂರು ಶಾಖೆಯ ಸುತ್ತೂರು, ತಾಯೂರು, ಬಿಳಿಗೆರೆ, ನಗರ್ಲೆ, ಹೊರಳವಾಡಿಯವರು ಮೊ.9449598551, ಕಳಲೆ ಶಾಖೆಯ ಕಳಲೆ, ದೇಬೂರು, ದೇವರಸನಹಳ್ಳಿ, ದೇವಿರಮ್ಮನಹಳ್ಳಿಯವರು ಮೊ.9448289551, ಹದಿನಾರು ಶಾಖೆಯ ಹದಿನಾರು, ತುಂಬನೇರಳೆ, ಹೊಸಕೋಟೆಯವರು ಮೊ.9448283396, ಬದನವಾಳು ಶಾಖೆಯ ಬದನವಾಳು, ಎಡತಲೆ, ನೇರಳೆ, ಹೆಮ್ಮರಗಾಲ, ಕವಲಂದೆ, ದೇವನೂರು, ಕೋಣನೂರು ಮೊ.9448994803, ತಗಡೂರು ಶಾಖೆಯ ತಗಡೂರು, ದಾಸನೂರು, ಕಾರ್ಯ, ಬಿಳಿಗೆರೆ, ತಾಯೂರು, ಮಲ್ಲೂಪುರ ಮೊ. 9448994804, ಹುರ ಶಾಖೆಯ ಹುರ, ಹಾಡ್ಯ, ಹಲ್ಲರೆ, ದೇವರಾಯಶೆಟ್ಟಿಪುರ, ಹೆಡಿಯಾಲ, ಹಗಿನವಾಳು ಮೊ.9449598631, ಹುಲ್ಲಹಳ್ಳಿ ವ್ಯಾಪ್ತಿಯ ಹುಲ್ಲಹಳ್ಳಿ, ಹಗಿನವಾಳು, ಹೆಗ್ಗಡಹಳ್ಳಿ, ಶಿರಮಳ್ಳಿ ಮೊ.9448994802, ಸರ್ವೀಸ್ ಸ್ಟೇಷನ್ ಮೊ.9480816907, ಚಂದ್ರವಾಡಿ ಶಾಖೆಯ ನೆಲ್ಲಿತಾಳಪುರ, ಅರಗನಹಳ್ಳಿ, ಕುರಿಹುಂಡಿ, ದುಗ್ಗಳ್ಳಿ ಮೊ.9449598583ಗೆ ಕರೆಮಾಡಿ ದೂರು ನೀಡಬಹುದಾಗಿದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

## ಜಿಂಕೆ ಸಾವು, ಕಾಡಾನೆ ದಾಳಿಗೆ ಫಸಲು ನಾಶ ಖಂಡಿಸಿ

# ಅರಣ್ಯಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ

ಮಲ್ಕುಂಡಿ, ಮೇ 28– ಬೀದಿ ನಾಯಿ ದಾಳಿಗೆ ಜಿಂಕೆ ಸಾವನ್ನಪ್ಪಿರುವುದು ಹಾಗೂ ಕಾಡಾನೆ ದಾಳಿಗೆ ರೈತರು ಬೆಳೆದ ಫಸಲು ನಾಶವಾಗುತ್ತಿರುವುದು ಖಂಡಿಸಿ ರೈತರು ಓಂಕಾರ್ ವಲಯ ಅರಣ್ಯಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.


ರೈತರು ಓಂಕಾರ್ ವಲಯ ಅರಣ್ಯಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಓಂಕಾರ್ ವಲಯ ವ್ಯಾಪ್ತಿಯ ಕೂತ್ತನಹಳ್ಳಿ ಗ್ರಾಮದ ದಾಸೇಗೌಡ ಎಂಬುವರ ಜಮೀನಿನಲ್ಲಿ ಬೀದಿ ನಾಯಿ ದಾಳಿಗೆ 6 ತಿಂಗಳ ಜಿಂಕೆ ಸಾವನ್ನಪ್ಪಿತ್ತು. ಆದರೆ ಅರಣ್ಯಾಧಿಕಾರಿಗಳು ಸ್ಥಳಕ್ಕಾಗಮಿಸಿರಲಿಲ್ಲ. ಇದರಿಂದ ಆಕ್ರೋಶಗೊಂಡ ಗ್ರಾಮಸ್ಥರು ಕಾಡಂಚಿನ ಗ್ರಾಮಗಳಾದ ಕೂತ್ತನಹಳ್ಳಿ, ದೇವರಾಯಶೆಟ್ಟಿಪುರ ಗ್ರಾಮಗಳಲ್ಲಿ ಕಾಡಾನೆ ಹಾವಳಿಯಿಂದ ರೈತರು ಕಷ್ಟಪಟ್ಟು ಬೆಳೆದ ಫಸಲು ನಾಶವಾಗುತ್ತಿವೆ. ಅರಣ್ಯ ಅಧಿಕಾರಿಗಳು ಕಾಡಾನೆ ಹಾವಳಿ ತಡೆಗಟ್ಟಲು ವಿಫಲರಾಗಿದ್ದಾರೆ ಎಂದು ಆರೋಪಿಸಿ ರೈತರು ಅರಣ್ಯ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ರೈತ ಮುಖಂಡ ಕೆಂಪಣ್ಣ ಮಾತನಾಡಿ, ಕಾಡಂಚಿನ ಗ್ರಾಮಗಳಲ್ಲಿ 3 ದಿನಕ್ಕೊಮ್ಮೆ ಬೀದಿ ನಾಯಿ ದಾಳಿಯಿಂದ ಜಿಂಕೆಗಳು ಸಾವನ್ನಪ್ಪುತ್ತಿವೆ. ಯಾವುದೇ ಪ್ರಾಣಿ ಸಾವನ್ನಪ್ಪಿದರೂ ಸ್ಥಳಕ್ಕೆ ಭೇಟಿ ನೀಡುವಂತೆ ಸರ್ಕಾರದ ಆದೇಶವಿದೆ. ಆದರೆ ಓಂಕಾರ ವಲಯದ ಅರಣ್ಯಾಧಿಕಾರಿಗಳು ತಮಗಿಷ್ಟ ಬಂದಂತೆ ಸಮವಸ್ತ್ರ ಧರಿಸದೇ ಜಿಂಕೆ ಕಳೇಬರ ಸಾಗಿಸುತ್ತಿದ್ದಾರೆ ಎಂದು ಆರೋಪಿಸಿದರು.

ವಿಷಯ ತಿಳಿದು ಸ್ಥಳಕ್ಕಾಮಿಸಿದ ಓಂಕಾರ ಉಪ ವಲಯಾಧಿಕಾರಿ ಸುರೇಶ್ ಮಾತನಾಡಿ, ಈ ಬಗ್ಗೆ ಸೂಕ್ತ ತನಿಖೆ ನಡೆಸಲಾಗುವುದು. ಮುಂದಿನ ದಿನಗಳಲ್ಲಿ ರೈತರಿಗೆ ಯಾವುದೇ ಸಮಸ್ಯೆ ಬಾರದಂತೆ ನೋಡಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಇದೇ ವೇಳೆ ಕಾಡಂಚಿನ ಗ್ರಾಮಗಳಲ್ಲಿ ಕಾಡಾನೆ ಹಾವಳಿ ಹೆಚ್ಚಾಗಿದ್ದು, ಫಸಲು ನಾಶ ಮಾಡುತ್ತಿವೆ ಎಂದು ರೈತರು ತಮ್ಮ ಅಳಲು ತೋಡಿಕೊಂಡರು. ಇದೇವೇಳೆ ಕಾಡಾನೆ ಹಾವಳಿ ತಪ್ಪಿಸಲು ಕ್ರಮ ಕೈಗೊಳ್ಳುವುದಾಗಿ ಸುರೇಶ್ ತಿಳಿಸಿದರು.

ಈ ವೇಳೆ ಗ್ರಾಮದ ಮುಖಂಡರಾದ ವಸಂತಕುಮಾರ್, ಮಂಜುನಾಥ್, ಜಗದೀಶ ಪಾಟೀಲ್, ಗ್ರಾಪಂ ಸದಸ್ಯ ಪಾಂಡು, ಮಂಜು ಪಾಟೀಲ್, ಲೋಕೇಶ್, ಮಹೇಶ್, ರಘು, ಸಿದ್ದರಾಜು ಸೇರಿದಂತೆ ಹಲವರಿದ್ದರು.

# ಕಂಪಲಾಪುರ ಪಿಎಸಿಎಸ್‌ಗೆ ಮಹದೇವ್ ಅಧ್ಯಕ್ಷ

ಕಂಪಲಾಪುರ, ಮೇ 28– ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಸದಸ್ಯ ಎಸ್.ಟಿ.ಮಹದೇವ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.




ಆಂತರಿಕ ಒಪ್ಪಂದದಂತೆ ಈ ಹಿಂದಿನ ಅಧ್ಯಕ್ಷ ಸಂತೋಷ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಅವರಿಂದ ತೆರವಾದ ಸ್ಥಾನಕ್ಕೆ ಬುಧವಾರ ನಡೆದ ಚುನಾವಣೆಯಲ್ಲಿ ಮಹದೇವ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಜೆ.ಜಿತೇಂದ್ರ ಘೋಷಿಸಿದರು. ಈ ವೇಳೆ ಉಪಾಧ್ಯಕ್ಷ ಬಿ.ಕೆ.ತಮ್ಮಯ್ಯ, ನಿರ್ದೇಶಕರಾದ ಕೆ.ಕುಮಾರ್, ನಾಗೇಗೌಡ, ಕೆ.ಆರ್.ಸಂತೋಷ್, ಕೆ.ಎಂ.ಲಕ್ಷ್ಮಣ್, ಕೆ.ಎನ್.ಗಿರೀಶ್, ಮಹದೇವ್, ರವಿ, ಮಣಿ ಮಹೇಶ್, ಭಾಗ್ಯರಾಜೇಗೌಡ, ಸಿಇಓ ಕೆ.ಎನ್.ಹರ್ಷ, ಮಾಜಿ ಅಧ್ಯಕ್ಷ ಕಟ್ಟೆ ಜಯಣ್ಣ, ಲೋಕೇಶ್, ಕೃಷ್ಣೇಗೌಡ, ಸುಂಡವಾಳು ವೆಂಕಟೇಶ್ ಇತರರಿದ್ದರು.

## ಒಳ ಮೀಸಲಾತಿ ಜಾರಿಗೊಳಿಸದೆ ಬ್ಯಾಕ್‌ಲಾಗ್ ಹುದ್ದೆಗಳ ನೇಮಕ

# ಸರ್ಕಾರದಿಂದ ಮಾದಿಗ ಸಮುದಾಯಕ್ಕೆ ಅನ್ಯಾಯ

## ಒಳ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಬಿ.ಆರ್.ಭಾಸ್ಕರ್ ಪ್ರಸಾದ್ ಆಕ್ರೋಶ

ತಿ.ನರಸೀಪುರ ಮೇ 28– ಸರ್ಕಾರ ಒಳ ಮೀಸಲಾತಿ ಜಾರಿಗೊಳಿಸದೆ ಹೊಸ ನೇಮಕಾತಿ, ಬಡ್ತಿ ಮೀಸಲಾತಿ ಮತ್ತು ಬ್ಯಾಕ್‌ಲಾಗ್ ಹುದ್ದೆಗಳ ನೇಮಕ ಮಾಡಿ ಮಾದಿಗ ಸಮುದಾಯಕ್ಕೆ ಅನ್ಯಾಯವೆಸಗುತ್ತಿದೆ ಎಂದು ಒಳ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಬಿ.ಆರ್.ಭಾಸ್ಕರ್ ಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದರು.


ಒಳ ಮೀಸಲಾತಿ ಹೋರಾಟ ಸಮಿತಿಯಿಂದ ಪಾದಯಾತ್ರೆ ನಡೆಯಿತು

ತಾಲೂಕಿನ ಬನ್ನೂರು ಸಂತೆಮಾಳದಲ್ಲಿ ಒಳ ಮೀಸಲಾತಿ ಹೋರಾಟ ಸಮಿತಿಯಿಂದ ನಡೆದ ಪಾದಯಾತ್ರೆಯಲ್ಲಿ ಮಾತನಾಡಿದ ಅವರು, ಸಂವಿಧಾನ ಜಾರಿಯಾದ ದಿನದಿಂದ ಮಾದಿಗ ಸಮುದಾಯಕ್ಕೆ ಸಮರ್ಪಕ ಮೀಸಲಾತಿ ಸೌಲಭ್ಯ ಸಿಗದೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಔದ್ಯೋಗಿಕವಾಗಿ ತೀರಾ ಹಿಂದೆ ಉಳಿದಿದ್ದು, ಒಳ ಮೀಸಲಾತಿ ಜಾರಿಗಾಗಿ ಕಳೆದ 35 ವರ್ಷಗಳಿಂದ ಹೋರಾಟ ನಡೆಸಿದ್ದರೂ ರಾಜ್ಯದಲ್ಲಿ ಆಡಳಿತ ನಡೆಸಿದ ರಾಜಕೀಯ ಪಕ್ಷಗಳು ಒಳ ಮೀಸಲಾತಿ ಜಾರಿಗೊಳಿಸದೆ ಮುಗ್ಧ ಮಾದಿಗ ಜನಾಂಗವನ್ನು ವಂಚಿಸುತ್ತಲೇ ಬರುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಒಳ ಮೀಸಲಾತಿಗಾಗಿ ನ್ಯಾ.ನಾಗಮೋಹನ್ ದಾಸ್ ಏಕಸದಸ್ಯ ವಿಚಾರಣಾ ಆಯೋಗ ಪ.ಜಾತಿಯಲ್ಲಿ ಪಂಗಡವಾರು ಜನಸಂಖ್ಯೆ ಸಮೀಕ್ಷೆಗೆ ಶಿಫಾರಸ್ಸು ಮಾಡಿದ್ದರೂ ಈ ನಡುವೆ ರಾಜ್ಯ ಸರ್ಕಾರ 36,000 ಬ್ಯಾಕ್ ಲಾಗ್ ಹುದ್ದೆಗಳ ನೇಮಕಕ್ಕೆ ಮುಂದಾಗಿರುವುದು ನಾಚಿಕೆಗೇಡಿನ ಸಂಗತಿ. ಒಳ ಮೀಸಲಾತಿ ಜಾರಿಯಾದ ನಂತರವಷ್ಟೇ ಹೊಸ ನೇಮಕಾತಿ, ಬಡ್ತಿ ಮೀಸಲಾತಿ ಮತ್ತು ಬ್ಯಾಕ್ ಲಾಗ್ ಹುದ್ದೆಗಳಿಗೆ ನೇಮಕ ಮಾಡಬೇಕು. ಇಲ್ಲದಿದ್ದರೇ ಒಳ ಮೀಸಲಾತಿ ಹೋರಾಟ ಸಮಿತಿ ಸರ್ಕಾರದ ವಿರುದ್ಧ ಉಗ್ರ ಹೋರಾಟ ನಡೆಸುತ್ತದೆ ಎಂದು ಎಚ್ಚರಿಕೆ ನೀಡಿದರು.

ಜೂ.9ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ ಒಳ ಮೀಸಲಾತಿ ಸಮಾವೇಶದಲ್ಲಿ ಮಾದಿಗ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಇದು ಒಳ ಮೀಸಲಾತಿ ಅಂತಿಮ ಹೋರಾಟವಾಗಿದ್ದು, ಮೀಸಲಾತಿ ಜಾರಿಯಾದಲ್ಲಿ ನಗು ಮುಖದಿಂದ ಮನೆಗೆ ಹಿಂದಿರುಗುತ್ತೇವೆ. ಇಲ್ಲವಾದಲ್ಲಿ ಶವವಾಗಿ ಸ್ಮಶಾನ ಸೇರುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಬನ್ನೂರು ಪಟ್ಟಣದ ಸುಭಾಷ್ ನಗರದಿಂದ ಆರಂಭಗೊಂಡ ಪಾದಯಾತ್ರೆ ಸಂತೆಮಾಳ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ರಸ್ತೆತಡೆ ನಡೆಸಿ ಒಳ ಮೀಸಲಾತಿಗಾಗಿ ಆಗ್ರಹಿಸಿದರು.

ಈ ವೇಳೆ ಸಾಮಾಜಿಕ ನ್ಯಾಯ ಸಮಿತಿ ಮುಖಂಡ ಮರಡೀಪುರ ರವಿಕುಮಾರ್, ಭೀಮಪುತ್ರಿ ವಿಜಯಲಕ್ಷ್ಮಿ, ಸ್ವಾಮಿ, ಸಿದ್ದನಹುಂಡಿ ಗೋಪಿ, ಕೆಬ್ಬೆ ಭಾಸ್ಕರ್, ತಾಲೂಕು ಜಗಜೀವನ್ ರಾಂ ಸಂಘದ ಅಧ್ಯಕ್ಷ ಹುಣಸೂರು ಪುಟ್ಟಯ್ಯ, ಮಲಿಯೂರು ಪ್ರಸನ್ನ, ಸುನೀಲ್, ಸಾತಗಳ್ಳಿ ಹನುಮಂತ, ದಸಂಸ ಜಿಲ್ಲಾ ಸಂಚಾಲಕ ಹಲಗಯ್ಯನಹುಂಡಿ ಶಂಕರ್, ಸಮಾಜ ಸೇವಕ ಗೋಪಾಲಪುರ ಮಂಜುನಾಥ್, ಕಳ್ಳಿಪುರ ನಾರಾಯಣ, ಹುಣಸೂರು ರಾಚಪ್ಪ, ಗ್ರಾಪಂ ಸದಸ್ಯ ಬಾಬು, ರಾಜು, ರಾಜೇಶ್, ಮಾಜಿ ಗ್ರಾಪಂ ಸದಸ್ಯ ದೊಳ್ಳಯ್ಯ, ಲಿಡ್ಕರ್ ನಾಗೇಶ್, ಮಹೇಶ್, ಶಿವು, ಕೇಬಲ್ ರಾಜು, ಶಿವಪ್ರಕಾಶ್, ಯ.ಶಿವಣ್ಣ, ಹೆಗ್ಗೂರು ಕೆಂಪಯ್ಯ ಇತರರಿದ್ದರು.

**ಪೊಲೀಸ್ ಠಾಣೆಗೆ ಹಾಜರು:** ಏಪ್ರಿಲ್‌ನಲ್ಲಿ ನಡೆದ ಒಳ ಮೀಸಲಾತಿ ರಥಯಾತ್ರೆ ವೇಳೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದರೆಂದು ಭಾಸ್ಕರ್ ಪ್ರಸಾದ್ ವಿರುದ್ಧ ಬನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಸಂಬಂಧ ಬಿ.ಆರ್.ಭಾಸ್ಕರ್ ಪ್ರಸಾದ್ ಅವರು ಇಂದು ಬನ್ನೂರು ಪೊಲೀಸ್ ಠಾಣೆಗೆ ಹಾಜರಾಗಿ ಪೊಲೀಸರು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಿ ತನಿಖೆಗೆ ಸಹಕರಿಸಿದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

# ಮಳೆ ಹಾನಿ, ಕುಡಿಯುವ ನೀರಿನ ಸಮಸ್ಯೆಗೆ ತ್ವರಿತವಾಗಿ ಸ್ಪಂದಿಸಿ

## ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೂಚನೆ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಬುಧವಾರ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಸಭೆ ನಡೆಸಿದರು.

ಮೈಸೂರು, ಮೇ 28(ಆರ್‌ಕೆ)– ಮುಂಗಾರು ಮಳೆ ಹಾನಿ ಹಾಗೂ ಕುಡಿಯುವ ನೀರಿನ ಸಮಸ್ಯೆ ಉಂಟಾದಲ್ಲಿ ತಕ್ಷಣ ಸ್ಪಂದಿಸಿ ಪರಿಹಾರೋಪಾಯ ಕ್ರಮ ವಹಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸಭೆ ನಡೆಸಿದ ಅವರು, ಜಿಲ್ಲೆಯಾದ್ಯಂತ ಅವಧಿಗೂ ಮುನ್ನ ಮುಂಗಾರು ಮಳೆಯಾಗುತ್ತಿದ್ದು, ಜಲಾಶಯಗಳ ನೀರಿನ ಮಟ್ಟ ಜಾಸ್ತಿಯಾಗುತ್ತಿದೆ. ಅಲ್ಲಲ್ಲಿ ಮನೆ, ವಿದ್ಯುತ್ ಕಂಬಗಳು ಬಿದ್ದು ಹಾನಿಯಾಗುತ್ತಿರುವ ಬಗ್ಗೆ ವರದಿ ಪಡೆದು ಪರಿಹಾರ ಒದಗಿಸಬೇಕು ಎಂದರು.

ಮಳೆಯಿಂದಾಗಿ ರೈತರ ಬೆಳೆ ಹಾನಿಯಾದರೆ, ಕೃಷಿ ಅಧಿಕಾರಿಗಳು ಸ್ಥಳ ಪರಿಶೀಲಿಸಿ ವರದಿ ಸಲ್ಲಿಸುವಂತೆ ಸೂಚಿಸಿದ ಡಾ. ಮಹದೇವಪ್ಪ, ಮಳೆ ನೀರು ಕೊಳವೆ ಬಾವಿಗಳಿಗೆ ಹರಿಯದಂತೆ ತಡೆಗಟ್ಟಬೇಕು. ಮುಂಜಾಗ್ರತೆಯಾಗಿ ಜಿಲ್ಲಾಡಳಿತ ಮಳೆ ಅವಾಂತರ ನಿರ್ವಹಣೆಗೆ ಸಜ್ಜಾಗಬೇಕು ಎಂದು ಸಲಹೆ ನೀಡಿದರು.

ನಿರೀಕ್ಷೆಗಿಂತ ಅಧಿಕ ಮಳೆಯಾಗುತ್ತಿರುವುದರಿಂದ ಕೃಷಿ ಚಟುವಟಿಕೆಗಳು ಗರಿಗೆದರಿದ್ದು, ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕವನ್ನು ರೈತರಿಗೆ ಪೂರೈಸಬೇಕು. ಕೃಷಿ ಅಧಿಕಾರಿಗಳು ಫೀಲ್ಡ್ ವಿಸಿಟ್ ಮಾಡಿ ರೈತರಿಗೆ ಏನು ಬೇಕೆಂಬುದನ್ನು ತಿಳಿದು ತ್ವರಿತವಾಗಿ ಸ್ಪಂದಿಸಬೇಕು ಎಂದು ತಿಳಿಸಿದರು.

ವಾಜಮಂಗಲ, ಸಿಂಧುವಳ್ಳಿ ಹಾಗೂ ಹುಲ್ಲಹಳ್ಳಿಯಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಅಪಮಾನ ಮಾಡಿದಂತಹ ಅಹಿತಕರ ಘಟನೆಗಳು ಸಂಭವಿಸಬಾರದು. ಈ ಸಂಬಂಧ ಪೊಲೀಸ್ ಇಲಾಖೆಯು ಕಟ್ಟೆಚ್ಚರ ವಹಿಸಬೇಕು. ಮಹನೀಯರನ್ನು ಪ್ರತಿಯೊಬ್ಬರೂ ಗೌರವದಿಂದ ಕಾಣುವಂತೆ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು. ಯಾರಿಂದಲೂ ಕಾನೂನು–ಸುವ್ಯವಸ್ಥೆ ಹಾಳಾಗದಂತೆ ಕ್ರಮ ವಹಿಸಬೇಕು. ಹೋರಾಟ, ಪ್ರತಿಭಟನೆಗಳು ಕಾನೂನಿನ ಪ್ರಕಾರ ಶಾಂತಿಯುತವಾಗಿ ನಡೆಯಬೇಕು. ಅನಗತ್ಯವಾಗಿ ಕಾನೂನು ಉಲ್ಲಂಘಿಸುವ ಘಟನೆಗಳು ಜರುಗಬಾರದು ಎಂದು ಸೂಚಿಸಿದರು.

ಜಿಲ್ಲೆಯಲ್ಲಿ ಅಲ್ಪ ಪ್ರಮಾಣದಲ್ಲಿ ಕೋವಿಡ್–19 ಪ್ರಕರಣಗಳ ದಾಖಲಾಗುತ್ತಿವೆ. ಅಗತ್ಯವಿರುವ ಮುಂಜಾಗ್ರತಾ ಕ್ರಮಗಳನ್ನು ಸಾರ್ವಜನಿಕರು ಅನುಸರಿಸಬೇಕು. ಕೋವಿಡ್ ಲಕ್ಷಣಗಳು ಕಂಡು ಬಂದ ಕೂಡಲೇ ಹತ್ತಿರದ ಆಸ್ಪತ್ರೆಯಲ್ಲಿ ಪರೀಕ್ಷೆಗೆ ಒಳಗಾಗಿ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು. ಇಂತಹ ಸಂದರ್ಭದಲ್ಲಿ ಅಧಿಕಾರಿಗಳು ಕಚೇರಿಯಲ್ಲಿ ಕೂರಬಾರದು. ಸಮಸ್ಯೆ ಕಾಣಿಸಿಕೊಂಡ ಸ್ಥಳಕ್ಕೆ ಭೇಟಿ ನೀಡಬೇಕು. ಜನರ ನಡುವೆ ಇದ್ದುಕೊಂಡು ಸರ್ಕಾರವು ನಿಮ್ಮ ಜೊತೆ ಇದೆ ಎಂದು ಧೈರ್ಯ ತುಂಬಬೇಕು ಎಂದು ಸಚಿವರು ತಿಳಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ನಗರ ಪಾಲಿಕೆ ಉಪ ಆಯುಕ್ತ ಸೋಮಶೇಖರ್, ಡಿಸಿಪಿ ಕೆ.ಎಸ್.ಸುಂದರ್ ರಾಜ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರ ಎ.ಎಸ್. ರಂಜಿತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಪಿ.ಸಿ.ಕುಮಾರಸ್ವಾಮಿ, ಸೆಸ್ಕ್ ಅಧೀಕ್ಷಕ ಎಂಜಿನಿಯರ್ ಸುನೀಲ್ ಸೇರಿದಂತೆ ಇತರ ಅಧಿಕಾರಿಗಳು ಹಾಜರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | (ದೂ: 2521923) |
| ಮಾಮನ್ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | (ದೂ: 2422871) |
| ಏಸ್ (ತ) | 4 ಪ್ರದರ್ಶನಗಳು |
| **ಬಾಲಾಜಿ** | (ದೂ: 2497199) |
| ಧಡ್ಕನ್ (ಹಿಂ) | 3 ಪ್ರದರ್ಶನಗಳು |
| **ಮಹದೇಶ್ವರ** | (ಮೊ:9900820093) |
| ಕಿರಿಕ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಟಕೀಲಾ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಡೆವಿಲ್ಸ್ ಡಬಲ್ ನೆಕ್ಸ್ಟ್ ಲೆವಲ್ (ತ) | 4 ಪ್ರದರ್ಶನಗಳು |
| **ಸಂಗಂ** | |
| ಸೈನೈಡ್ (ಕ) | 4 ಪ್ರದರ್ಶನಗಳು |
| **ಲಿಡೋ** | |
| ಯುದ್ಧಕಾಂಡ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| – | – |
| **ಪ್ರಭಾ** | |
| ಭಗೀರಥ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ. |
| ಸ್ಕ್ರೀನ್ 2 | ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ. |
| ಸ್ಕ್ರೀನ್ 3 | ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ. |
| ಸ್ಕ್ರೀನ್ 4 | ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ. |
| ಸ್ಕ್ರೀನ್ 2 | ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ. |
| ಸ್ಕ್ರೀನ್ 3 | ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ. |
| ಸ್ಕ್ರೀನ್ 4 | ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ. |

### ಪಿವಿಆರ್ ಸಿನಿಮಾಸ್
PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ಒಲಿಂಪಿಯಾಡ್ ಪರೀಕ್ಷೆಯಲ್ಲಿ ಮೈಸೂರು ವಿದ್ಯಾರ್ಥಿಗಳ ಸಾಧನೆ



ಒಲಂಪಿಯಾಡ್ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ವಿದ್ಯಾರ್ಥಿಗಳ ತೇರ್ಗಡೆ

ಮೈಸೂರು, ಮೇ 28– ಸೈನ್ಸ್ ಒಲಿಂಪಿಯಾಡ್ ಫೌಂಡೇಶನ್ ನಡೆಸಿದ 2024–25ನೇ ಸಾಲಿನ ಒಲಿಂಪಿಯಾಡ್ ಪರೀಕ್ಷೆಯಲ್ಲಿ ಮೈಸೂರಿನ ಮೂವರು ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಕೆಎನ್‌ಸಿ ಇನ್ನೋವೇಟಿವ್ ಗ್ಲೋಬಲ್ ಶಾಲೆಯ ವಿದ್ಯಾರ್ಥಿ ವಿ ಸಿದ್ದಿಕ್ ಅಂತರಾಷ್ಟ್ರೀಯ ಗಣಿತ ಒಲಿಂಪಿಯಾಡ್‌ನಲ್ಲಿ ಪ್ರಥಮ ರ್‍ಯಾಂಕ್ ಪಡೆದು ಚಿನ್ನದ ಪದಕ ಮತ್ತು ಮೆರಿಟ್ ಪ್ರಮಾಣಪತ್ರವನ್ನು ಗಳಿಸಿದ್ದಾರೆ. ರೋಟರಿ ಮಿಡ್‌ಟೌನ್ ಅಕಾಡೆಮಿಯ ತನ್ಮಯಿ ಎ ಆರ್ ಅಂತರಾಷ್ಟ್ರೀಯ ಹಿಂದಿ ಒಲಿಂಪಿಯಾಡ್‌ನಲ್ಲಿ ಎರಡನೇ ರ್‍ಯಾಂಕ್ ಪಡೆದು ಬೆಳ್ಳಿಯ ಪದಕ ಮತ್ತು ಮೆರಿಟ್ ಪ್ರಮಾಣ ಪತ್ರವನ್ನು ಪಡೆದರು. ಸೇಂಟ್ ಜೋಸೆಫ್ ಸೆಂಟ್ರಲ್ ಶಾಲೆಯ ಮೌರ್ಯ ಗೌತಮ್ ಸಮಾಜ ಅಧ್ಯಯನ ಶಾಲಾ ಒಲಿಂಪಿಯಾಡ್‌ನಲ್ಲಿ ಮೂರನೇ ರ್‍ಯಾಂಕ್ ಪಡೆದು ಕಂಚಿನ ಪದಕ ಮತ್ತು ಮೆರಿಟ್ ಪ್ರಮಾಣಪತ್ರವನ್ನು ಗಳಿಸಿದ್ದಾರೆ.

ಈ ವರ್ಷದ ಎಸ್‌ಓಎಫ್ ಒಲಿಂಪಿಯಾಡ್‌ನಲ್ಲಿ ಮೈಸೂರಿನ 30300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸೇರಿದಂತೆ 72 ದೇಶಗಳ ಲಕ್ಷಾಂತರ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕೆ ಎನ್ ಸಿ ಇನ್ನೋವೇಟಿವ್ ಗ್ಲೋಬಲ್ ಶಾಲೆ; ಪೂರ್ಣ ಚೇತನ ಪಬ್ಲಿಕ್ ಸ್ಕೂಲ್, ಸೇಂಟ್ ಜೋಸೆಫ್ ಸ್ಕೂಲ್, ರೋಟರಿ ಮಿಡ್‌ಟೌನ್ ಅಕಾಡೆಮಿ ಸೇರಿದಂತೆ ಮೈಸೂರಿನ ಪ್ರಮುಖ ಶಾಲೆಗಳು ಎಸ್‌ಓಎಫ್ ಒಲಿಂಪಿಯಾಡ್‌ನಲ್ಲಿ ಭಾಗವಹಿಸಿದ್ದವು.

## ಅಪ್ರೆಂಟಿಸ್ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 28– ಹಿಂದೂಸ್ಥಾನ್ ಏರೋನಾಟಿಕ್ಸ್(ಲಿ) ಟೆಕ್ನಿಕಲ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಅವರಿಂದ ಫಿಟ್ಟರ್, ಟರ್ನರ್, ಮೇಷಿನಿಸ್ಟ್, ಎಲೆಕ್ಟ್ರೀಷಿಯನ್, ವೆಲ್ಡರ್, COPA, ಕಾರ್‌ಪೆಂಟರ್, ಫೌಂಡ್ರಿಮ್ಯಾನ್, ಶೀಟ್ ಮೆಟಲ್ ವರ್ಕರ್, ಟೂಲ್ & ಡೈ ಮೇಕರ್, ಸಿ.ಎನ್.ಸಿ. ಪ್ರೋಗ್ರಾಮ್ ಕಂ ಆಪರೇಟರ್, ಎಂ.ಆರ್.ಎ.ಸಿ. ಟ್ರೇಡ್‌ಗಳಿಗೆ ಫುಲ್ ಟರ್ಮ್ ಅಪ್ರೆಂಟಿಸ್ ಟ್ರೈನಿಂಗ್ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅರ್ಹ ಅಭ್ಯರ್ಥಿಗಳು ಸಹಾಯಕ ನಿರ್ದೇಶಕರು, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಆವರಣ ಎನ್.ಆರ್. ಮೊಹಲ್ಲಾ, ಮೈಸೂರು, ಇವರ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಅರ್ಜಿ ನಮೂನೆಯನ್ನು ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಈ ಕಚೇರಿಗೆ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಜೂ.6 ಕೊನೆಯ ದಿನಾಂಕ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಐಟಿಐ ತೇರ್ಗಡೆ ಹೊಂದಿರಬೇಕು, ಕಡ್ಡಾಯವಾಗಿ apprenticeshipindia.org /candidate-registration ನಲ್ಲಿ ನೋಂದಾಯಿಸಿ ಅರ್ಜಿ ನಮೂನೆಯಲ್ಲಿ ಅಪ್ರೆಂಟಿಸ್ ನೋಂದಣಿ ಸಂಖ್ಯೆ ನಮೂದಿಸಬೇಕು, ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ಸ್ಟೈಫಂಡ್ (ಸರ್ಕಾರ ನಿಗದಿಪಡಿಸಿದಂತೆ) ನೀಡಲಾಗುತ್ತದೆ.

ಅಭ್ಯರ್ಥಿಯು ಅರ್ಜಿಯೊಂದಿಗೆ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ, ಎಸ್.ಎಸ್.ಎಲ್.ಸಿ ಅಂಕಪಟ್ಟಿ ಪ್ರತಿ, ಐಟಿಐ ಅಂಕಪಟ್ಟಿಗಳ ಪ್ರತಿ, NTC ನಕಲು(ನ್ಯಾಷನಲ್ ಟ್ರೇಡ್ ಸರ್ಟಿಫಿಕೆಟ್), ಜಾತಿ/ವಿಕಲಚೇತನ/ಮಾಜಿ ಸೈನಿಕ ಅವಲಂಬಿತ ಪ್ರಮಾಣ ಪತ್ರದ ಪ್ರತಿ, ಆಧಾರ್ ಕಾರ್ಡ್, ಮತ್ತು ಪ್ಯಾನ್ ಕಾರ್ಡ್/ಇ–ಪ್ಯಾನ್ ಪ್ರತಿ, Copy of NCVT MIS portal Registration_ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಮೈಸೂರು, ಇವರನ್ನು ಕಛೇರಿ ವೇಳೆಯಲ್ಲಿ ಅಥವಾ ದೂ. ಸಂ: 0821–2489972 ನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ


## ಐದು ಎಂ.ಟೆಕ್ ಕೋರ್ಸ್‌ಗಳಿಗೆ ಪ್ರವೇಶ ಪರೀಕ್ಷೆ ಇಲ್ಲ–ಕೆಇಎ

ಬೆಂಗಳೂರು, ಮೇ 28– ಲಭ್ಯವಿರುವ ಸೀಟುಗಳಿಗಿಂತ ಕಡಿಮೆ ಸಂಖ್ಯೆಯ ಅಭ್ಯರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿರುವ ಕಾರಣ ಎಂ.ಇ/ಎಂ.ಟೆಕ್‌ನ ಈ ಕೆಳಗಿನ ಐದು ಕೋರ್ಸ್‌ಗಳಿಗೆ ಪಿಜಿಸಿಇಟಿ–25 ನಡೆಸದಿರಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತೀರ್ಮಾನಿಸಿದೆ. ಬಯೋ–ಟೆಕ್ನಾಲಜಿ, ಕೆಮಿಕಲ್ ಎಂಜಿನಿಯರಿಂಗ್, ಎನ್ವಿರಾನ್ಮೆಂಟ್ ಎಂಜಿನಿಯರಿಂಗ್, ಪಾಲಿಮರ್ ಸೈನ್ಸ್ ಮತ್ತು ಟೆಕ್ಸ್‌ಟೈಲ್ ಟೆಕ್ನಾಲಜಿ ಕೋರ್ಸ್‌ಗಳ ಪ್ರವೇಶ ಪರೀಕ್ಷೆಗೆ ಲಭ್ಯವಿರುವ ಸೀಟುಗಳಿಗಿಂತ ಕಡಿಮೆ ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಹೀಗಾಗಿ ಅರ್ಹದಾಯಕ ಪದವಿ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಗಳಿಸಿರುವ ಅಂಕಗಳ ಆಧಾರದ ಮೇಲೆ ಮೆರಿಟ್ ಪಟ್ಟಿ ಸಿದ್ಧಪಡಿಸಿ, ಪ್ರಕಟಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಮೇಲಿನ ಕೋರ್ಸ್‌ಗಳನ್ನು ಹೊರತುಪಡಿಸಿ, ಸಿವಿಲ್ ಎಂಜಿನಿಯರಿಂಗ್, ಮೆಕಾನಿಕಲ್ ಸೈನ್ಸ್ ಮತ್ತು ಎಲೆಕ್ಟ್ರಿಕಲ್ ಸೈನ್ಸ್ ವಿಷಯಗಳಿಗೆ ಇದೇ 31ರಂದು ವೇಳಾಪಟ್ಟಿ ಪ್ರಕಾರ ಪರೀಕ್ಷೆ ನಡೆಯಲಿದೆ. ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ವಿಷಯಕ್ಕೆ ಸಂಬಂಧಿಸಿದಂತೆ ಕಂಪ್ಯೂಟರ್ ಆಧಾರಿತ ಪರೀಕ್ಷೆಯನ್ನು ಜೂನ್ 2ರಂದು ನಡೆಸಲಾಗುವುದು ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಜೂ.4, ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ

ಮೈಸೂರು, ಮೇ 28– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯನ್ನು ಹಮ್ಮಿಕೊಂಡಿದ್ದು, ಜೂನ್ 4 ರಂದು ಬೆಳಗ್ಗೆ 8.30 ಗಂಟೆಗೆ ಅರಮನೆ ಆವರಣದಲ್ಲಿನ ಖಿಲ್ಲೆ ವೆಂಕಟರಮಣಸ್ವಾಮಿ ದೇವಸ್ಥಾನದಿಂದ ಮೆರವಣಿಗೆ ಹೊರಟು ಕೆ.ಆರ್. ವೃತ್ತದಲ್ಲಿರುವ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಮೆರವಣಿಗೆ ಕಲಾಮಂದಿರ ತಲುಪುವುದು. ನಂತರ ವೇದಿಕೆ ಕಾರ್ಯಕ್ರಮವನ್ನು 11.30 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ.



ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಸಚಿವರಾದ ನಿರ್ಮಲ ಸೀತಾರಾಮನ್, ಎಚ್.ಡಿ. ಕುಮಾರಸ್ವಾಮಿ, ಪ್ರಲ್ಹಾದ ಜೋಶಿ, ವಿ. ಸೋಮಣ್ಣ, ಶೋಭಾ ಕರಂದ್ಲಾಜೆ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸಚಿವರಾದ ಕೆ.ವೆಂಕಟೇಶ್, ಶಿವರಾಜ ಎಸ್. ತಂಗಡಗಿ ಅವರ ಘನ ಉಪಸ್ಥಿತಿಯಲ್ಲಿ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದು, ಚಾಮರಾಜ ವಿಧಾನ ಸಭೆ ಕ್ಷೇತ್ರದ ಶಾಸಕ ಕೆ. ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ರವಿಶಂಕರ್ ಡಿ., ಜಿ.ಡಿ. ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್. ಶ್ರೀವತ್ಸ ವಿಧಾನ ಪರಿಷತ್ತಿನ ಶಾಸಕರಾದ ಎಚ್. ವಿಶ್ವನಾಥ್, ಡಾ. ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ.ಮಾದೇಗೌಡ, ಡಾ. ಯತೀಂದ್ರ ಎಸ್., ಕೆ. ವಿವೇಕಾನಂದ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಅಯೂಬ್ ಖಾನ್ ಹಾಗೂ ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಮರಿಸ್ವಾಮಿ ಸಮಾರಂಭದ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ವಿಜಯನಗರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ಪ್ರಾಧ್ಯಾಪಕರಾದ ಡಾ. ಅನಿತಾ ಎಂ ಎಸ್. ಉಪನ್ಯಾಸ ಮಾಡಲಿದ್ದಾರೆ. ದಾರ್ಶನಿಕ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕುರಿತು ಸಾಕ್ಷ್ಯಚಿತ್ರ ಪ್ರದರ್ಶನವನ್ನು ಕರ್ನಾಟಕ ಕಲಾಮಂದಿರದಲ್ಲಿ ಹಾಗೂ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜೀವನ ಕುರಿತಾದ ಸಂಗ್ರಹಿಸಿದ ಭಾವಚಿತ್ರಗಳನ್ನು ಕರ್ನಾಟಕ ಕಲಾಮಂದಿರ ಆವರಣದ ಸುಚಿತ್ರಾ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶನ ಮಾಡಲಾಗುತ್ತದೆ.

ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜೀವನ ಮತ್ತು ಸಾಧನೆ ಕುರಿತು ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಕರ್ನಾಟಕ ಕಲಾಮಂದಿರ ಆವರಣದಲ್ಲಿ ಬೆಳಗ್ಗೆ 8.30 ಗಂಟೆಗೆ ಏರ್ಪಡಿಸಲಾಗಿದ್ದು, 6 ರಿಂದ 13 ವರ್ಷ ಮತ್ತು 14 ರಿಂದ 18 ವರ್ಷ ವಯೋಮಿತಿಗೆ ಒಳಪಟ್ಟಂತೆ ಎರಡು ವಿಭಾಗಗಳಲ್ಲಿ ನಡೆಸಲಾಗುತ್ತದೆ.

## ರಸ್ತೆ ಸುರಕ್ಷತೆ ಕುರಿತ ಹಾಡು ಶೀಘ್ರವೇ 22 ಭಾಷೆಗಳಲ್ಲಿ ಬಿಡುಗಡೆ

ನವದೆಹಲಿ, ಮೇ 28– ರಸ್ತೆ ಸುರಕ್ಷತೆ ಕುರಿತು ಅರಿವು ಮೂಡಿಸುವ ಹಾಡಿಗೆ ಹಿನ್ನೆಲೆ ಗಾಯಕ ಶಂಕರ್ ಮಹದೇವನ್ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ. ಶೀಘ್ರವೇ ಈ ಹಾಡನ್ನು 22 ಭಾಷೆಗಳಲ್ಲೂ ಬಿಡುಗಡೆ ಮಾಡಲಾಗುವುದು ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಾಮಾಜಿಕ ಜಾಲತಾಣಗಳಲ್ಲಿ ಈ ಹಾಡನ್ನು ಹಂಚಿಕೊಳ್ಳುವ ಮೂಲಕ ರಸ್ತೆ ಸುರಕ್ಷತೆ ಬಗ್ಗೆ ಜನರಲ್ಲಿ ಹೆಚ್ಚಿನ ಅರಿವು ಮೂಡಿಸಬೇಕಿದೆ' ಎಂದರು.

ಕಾರು ಚಾಲನೆ ವೇಳೆ ಕಡ್ಡಾಯವಾಗಿ ಸೀಟ್ ಬೆಲ್ಟ್ ಧರಿಸಬೇಕಿದೆ. ರಸ್ತೆ ಸುರಕ್ಷತಾ ನಿಯಮಾವಳಿಗಳನ್ನು ಉಲ್ಲಂಘಿಸಬಾರದು ಎಂದು ಹೇಳಿದರು.



### ಸಂಗೀತ ಕಾರ್ಯಕ್ರಮ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 83ನೇ ಜನ್ಮದಿನಾಚರಣೆ ಅಂಗವಾಗಿ ಬುಧವಾರ ಆಶ್ರಮದ ನಾದಮಂಟಪದಲ್ಲಿ ಕರ್ನಾಟಕ ಗಾಯನ ಗೋಷ್ಠಿ ವಿದ್ವಾನ್ ಶ್ರೀರಾಮ ಜೊನ್ನಲಗಡ್ಡ ಮತ್ತು ಬಳಗದಿಂದ ಸಂಗೀತ ಕಾರ್ಯಕ್ರಮ ನಡೆಯಿತು.

## ಖಾಸಗಿ ಆಸ್ಪತ್ರೆಗಳ ಆಯುಷ್ಮಾನ್ ಆರೋಗ್ಯ ಸೇವಾ ದರ ಹೆಚ್ಚಿಸಲು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ



ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರನ್ನ ಖಾಸಗಿ ಆಸ್ಪತ್ರೆಗಳ ಸಂಘದ ಪದಾಧಿಕಾರಿಗಳು, ಅಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ ನೇತೃತ್ವದಲ್ಲಿ ಭೇಟಿಯಾಗಿ ತಮ್ಮ ನಾನಾ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿದರು.

ಮೈಸೂರು, ಮೇ 28– ಸರ್ಕಾರಿ ಯೋಜನೆಗಳ ಅನುಷ್ಠಾನಿತ ಖಾಸಗಿ ಆಸ್ಪತ್ರೆಗಳ ಸಂಘದ ಪದಾಧಿಕಾರಿಗಳು ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣನವರ ನೇತೃತ್ವದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರನ್ನು ವಿಕಾಸ ಸೌಧದಲ್ಲಿ ಭೇಟಿ ಮಾಡಿ ಖಾಸಗಿ ಆಸ್ಪತ್ರೆಗಳ ಸಮಸ್ಯೆಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿದರು.

ಆಯುಷ್ಮಾನ್ ಭಾರತ್ ಯೋಜನೆಯಡಿ ಸೇವೆ ಸಲ್ಲಿಸುತ್ತಿರುವ ಖಾಸಗಿ ಆಸ್ಪತ್ರೆಗಳ ಸೇವಾ ದರಗಳನ್ನು ಕಳೆದ 14 ವರ್ಷಗಳಿಂದ ಹೆಚ್ಚಿಸಿಲ್ಲ ಎಂಬುದನ್ನು ಮನಗಂಡ ಆರೋಗ್ಯ ಸಚಿವರು, ಶೀಘ್ರದಲ್ಲಿಯೇ ದರಗಳನ್ನು ಹೆಚ್ಚಿಸಲಿದೆ ಎಂದು ಆಶ್ವಾಸನೆ ನೀಡಿದರು.

ಸಾಸ್ತ್ ಟ್ರಸ್ಟ್‌ನಲ್ಲಿ ಸರ್ಕಾರಿ ಯೋಜನೆಗಳ ಅನುಷ್ಠಾನಿತ ಖಾಸಗಿ ಆಸ್ಪತ್ರೆಗಳ ಸಂಘದ ಪದಾಧಿಕಾರಿಗಳನ್ನು ಪದನಿಮಿತ್ತ ಟ್ರಸ್ಟಿಗಳನ್ನಾಗಿ ನೇಮಿಸಬೇಕೆಂಬ ಸಲಹೆಯನ್ನು ಪರಿಶೀಲಿಸಲಾಗುವುದು ಮತ್ತು ಇನ್ನು ಮುಂದೆ ಕನಿಷ್ಠ 3 ತಿಂಗಳಿಗೊಮ್ಮೆ ಖಾಸಗಿ ಆಸ್ಪತ್ರೆಗಳೊಡನೆ ಸಭೆ ನಡೆಸಿ ಸಮಸ್ಯೆಗಳನ್ನು ಪರಿಹರಿಸಲಾಗುವುದೆಂದು ಭರವಸೆಯಿತ್ತರು. ಈ ಎಲ್ಲ ಸಮಸ್ಯೆಗಳ ಬಗ್ಗೆ ಚರ್ಚಿಸಲು ನಿಯೋಜಿತ ಆಸ್ಪತ್ರೆಗಳ ಸಂಘದ ಪದಾಧಿಕಾರಿಗಳನ್ನು ಶೀಘ್ರದಲ್ಲಿಯೇ ಆಹ್ವಾನಿಸಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭ ಸಂಘದ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಆರೋಗ್ಯ ಇಲಾಖೆಯ ಸೇವಾ ಗುಣಮಟ್ಟವನ್ನು ಹೆಚ್ಚಿಸಲು ಅವಿರತವಾಗಿ ಶ್ರಮಿಸುತ್ತಿರುವ ಆರೋಗ್ಯ ಮಂತ್ರಿ ದಿನೇಶ್ ಗುಂಡೂರಾವ್ ಅವರನ್ನು ಸಂಘದ ಪರವಾಗಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಸುರಕ್ಷಾ ಟ್ರಸ್ಟ್‌ನ ಕಾರ್ಯ ನಿರ್ವಾಹಕ ನಿರ್ದೇಶಕ ಉಜ್ವಲ್ ಕುಮಾರ್ ಘೋಷ್, ಸರ್ಕಾರಿ ಯೋಜನೆಗಳ ಅನುಷ್ಠಾನಿತ ಖಾಸಗಿ ಆಸ್ಪತ್ರೆಗಳ ಸಂಘದ ಕಾರ್ಯದರ್ಶಿ ಡಾ. ಜಿ.ಆರ್. ಸುಭಾಶ್ ಕೆ. ರೆಡ್ಡಿ, ಡಾ.ಜಗದೀಶ್ ಮತ್ತು ಸಂಘಟನಾ ಕಾರ್ಯದರ್ಶಿ ಡಾ.ನಿರಂಜನ ಶೆಟ್ಟಿ ಉಪಸ್ಥಿತರಿದ್ದರು.

# ಮೈಸೂರು ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ 1.16 ಲಕ್ಷ ಸಸಿ ನೆಡಲು ಅರಣ್ಯ ಇಲಾಖೆ ನಿರ್ಧಾರ

## ರೈತರಿಗೆ ರಿಯಾಯ್ತಿ ದರದಲ್ಲಿ 2.80 ಲಕ್ಷ ಸಸಿ ವಿತರಣೆಗೆ ಸಿದ್ಧತೆ





ಮೈಸೂರಿನ ಕುಕ್ಕರಹಳ್ಳಿ ಕೆರೆ ಸಸ್ಯಕ್ಷೇತ್ರದಲ್ಲಿ ಜನರಿಗೆ ರಿಯಾಯಿತಿ ದರದಲ್ಲಿ ಮಾರಾಟ ಮಾಡಲು ಸಿದ್ಧವಾಗಿರುವ ಗಿಡಗಳು.

ಮೈಸೂರು, ಮೇ 28(ಎಂಟಿವೈ)– ಪರಿಸರದ ಸಮತೋಲನ ಕಾಪಾಡುವ ನಿಟ್ಟಿನಲ್ಲಿ ಪ್ರಸಕ್ತ ಸಾಲಿನಲ್ಲಿ ಮೈಸೂರು ಜಿಲ್ಲೆಯಲ್ಲಿ ವಿವಿಧೆಡೆ 1.16 ಲಕ್ಷ ಗಿಡ ನೆಡಲು ಅರಣ್ಯ ಇಲಾಖೆ ಉದ್ದೇಶಿಸಿದ್ದು, ರೈತರಿಗೆ ರಿಯಾಯಿತಿ ದರದಲ್ಲಿ 2.80 ಲಕ್ಷ ಗಿಡ ವಿತರಿಸಲು ಮುಂದಾಗಿದೆ.

ಮೈಸೂರು ಜಿಲ್ಲೆಯಲ್ಲಿ ಮುಂಗಾರು ಆರಂಭವಾಗಿರುವ ಹಿನ್ನೆಲೆಯಲ್ಲಿ ವನ ಮಹೋತ್ಸವ ನಡೆಸಲು ಸಜ್ಜಾಗುತ್ತಿರುವ ಅರಣ್ಯ ಇಲಾಖೆ ಜಿಲ್ಲೆಯ ಆರು ನರ್ಸರಿಗಳಲ್ಲಿ ಪರಿಸರಕ್ಕೆ ಪೂರಕವಾಗಿರುವ ವಿವಿಧ ತಳಿಗಳ 1.16 ಲಕ್ಷ ಗಿಡ ಬೆಳೆಸಿದೆ. ಈಗಾಗಲೇ ತಾಲೂಕುವಾರು ಸಾರ್ವಜನಿಕ ಸ್ಥಳ, ರಸ್ತೆ ಬದಿ, ಶಾಲಾ–ಕಾಲೇಜು ಆವರಣ, ಗೋಮಾಳ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಗಿಡ ನೆಡಲು ಸ್ಥಳ ಗುರುತಿಸಲಾಗಿದ್ದು, ಆಯಾ ವಲಯವಾರು ಸಿಬ್ಬಂದಿಗೆ ವನಮಹೋತ್ಸವ ಕಾರ್ಯಕ್ರಮ ನಡೆಸಲು ಸಿದ್ಧತೆ ಮಾಡಿಕೊಳ್ಳುವಂತೆ ಸೂಚನೆ ನೀಡಲಾಗಿದೆ.


**ರಿಯಾಯಿತಿ ದರದಲ್ಲಿ 2,80,644 ಗಿಡ ಮಾರಾಟ:** ಒಂದೆಡೆ ವಿವಿಧೆಡೆ ವನ ಮಹೋತ್ಸವ ನಡೆಸಿ ಲಕ್ಷಕ್ಕೂ ಅಧಿಕ ಗಿಡ ನೆಡಲು ಕ್ರಮ ಕೈಗೊಂಡಿರುವ ಬೆನ್ನಲ್ಲೇ ಆರ್‌ಎಸ್‌ಪಿಡಿ ಯೋಜನೆಯಡಿ ರೈತರಿಗೆ ರಿಯಾಯಿತಿ ದರದಲ್ಲಿ ಗಿಡ ವಿತರಿಸಲು 2,80,644 ಗಿಡ ಬೆಳೆಸಿದೆ. ತೇಗ, ಬೆಟ್ಟದ ನೆಲ್ಲಿ, ಬೇವು, ಹಲಸು, ಹೊಂಗೆ, ಮಹಾಘನಿ, ನೇರಳೆ, ರಕ್ತಚಂದನ, ಶ್ರೀಗಂಧ, ಸಿಲ್ವರ್ ಸೇರಿದಂತೆ ವಿವಿಧ ಜಾತಿಯ ಗಿಡಗಳನ್ನು ಬೆಳೆಸಿದೆ.

6X9 ಇಂಚು ಅಳತೆಯ ಪ್ಲಾಸ್ಟಿಕ್ ಕವರ್‌ನಲ್ಲಿ ಬೆಳೆಸಿರುವ ಗಿಡಕ್ಕೆ 3 ರೂ., 8X12 ಇಂಚು ಕವರ್‌ನಲ್ಲಿನ ಗಿಡಕ್ಕೆ 6 ರೂ., 10X16 ಇಂಚು ಅಳತೆಯ ಬ್ಯಾಗ್‌ನಲ್ಲಿ ಬೆಳೆಸಿರುವ ಗಿಡಕ್ಕೆ 75.50 ರೂ. ದರ ನಿಗದಿ ಮಾಡಲಾಗಿದೆ. ಆಸಕ್ತರು ನರ್ಸರಿಗಳಲ್ಲಿ ಗಿಡ ಖರೀದಿಸಬಹುದಾಗಿದೆ.

**ಎಲ್ಲೆಲ್ಲಿ ಲಭ್ಯ:** ನಾಗವಾಲ ಸಸ್ಯಕ್ಷೇತ್ರ, ಪಡುವಾರಹಳ್ಳಿಯ ಕುಕ್ಕರಹಳ್ಳಿ ಸಸ್ಯಕ್ಷೇತ್ರ, ತಿ.ನರಸೀಪುರದ ತಲಕಾಡು ರಸ್ತೆಯಲ್ಲಿರುವ ಸಸ್ಯಕ್ಷೇತ್ರ, ನಂಜನಗೂಡಿನ ಹುಲ್ಲಹಳ್ಳಿ ರಸ್ತೆ ಬಸವೇಶ್ವರ ಸಸ್ಯಕ್ಷೇತ್ರ, ಕಬಿನಿ ಜಲಾಶಯ ಸಮೀಪವಿರುವ ಹೆಚ್.ಡಿ.ಕೋಟೆ ಬೀಚನಹಳ್ಳಿ ಸಸ್ಯಕ್ಷೇತ್ರ, ಸರಗೂರು ವ್ಯಾಪ್ತಿಯ ಬೀಚನಹಳ್ಳಿ ಸಸ್ಯಕ್ಷೇತ್ರದಲ್ಲಿ ಗಿಡಗಳನ್ನು ಖರೀದಿಸಬಹುದಾಗಿದೆ.

ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ: ಅರಣ್ಯ ಇಲಾಖೆ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಜಿಲ್ಲೆಯ ರೈತರಿಗೆ ಗಿಡ ನೆಟ್ಟು ಪ್ರೋತ್ಸಾಹಿಸಲು ಕ್ರಮ ಕೈಗೊಂಡಿದೆ. ರಿಯಾಯಿತಿ ದರದಲ್ಲಿ ಖರೀದಿಸಿದ ಗಿಡಗಳಿಗೆ ಮೌಲ್ಯಮಾಪನ ಮಾಡಿ, ಬದುಕುಳಿದ ಗಿಡಗಳಿಗೆ ಮೂರು ವರ್ಷ ಪ್ರೋತ್ಸಾಹಧನ ನೀಡಲಿದೆ. ನೆಟ್ಟು ಪೋಷಿಸಿದ ಗಿಡವೊಂದಕ್ಕೆ ಅರಣ್ಯ ಇಲಾಖೆ ಮೊದಲ ವರ್ಷ 35 ರೂ., ಎರಡನೇ ವರ್ಷ 40 ರೂ., ಹಾಗೂ ಮೂರನೇ ವರ್ಷ 50 ರೂ. ಸೇರಿದಂತೆ ಒಂದು ಗಿಡ ನೆಟ್ಟು ಪೋಷಿಸಿದರೆ ಮೂರು ವರ್ಷದಲ್ಲಿ 125 ರೂ. ಪ್ರೋತ್ಸಾಹ ಧನ ನೀಡುತ್ತದೆ ಈ ಯೋಜನೆಯ ಸದುಪಯೋಗ ಮಾಡಿಕೊಂಡು, ಕೃಷಿ ಭೂಮಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗಿಡನೆಟ್ಟು ಪೋಷಿಸುವಂತೆ ಡಿಸಿಎಫ್ ಡಾ.ಕೆ.ಎನ್.ಬಸವರಾಜು ತಿಳಿಸಿದ್ದಾರೆ.

# ರಸ್ತೆ ಕಾಮಗಾರಿ ನೆನೆಗುದಿಗೆ; ವಾಹನ ಸವಾರರ ಪರದಾಟ



ಮೈಸೂರಿನ ಶ್ರೀರಾಂಪುರ ಎರಡನೇ ಹಂತದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಮುಂಭಾಗದಿಂದ ಹಳೆ ಮಾನಂದವಾಡಿ ರಸ್ತೆಗೆ ಸಂಪರ್ಕಿಸುವ ರಸ್ತೆಯು ದುಸ್ಥಿತಿ.

ಮೈಸೂರು,ಮೇ 28(ಎಸ್‌ಪಿಎನ್)– ಮೈಸೂರಿನ ಶ್ರೀರಾಂಪುರ 2ನೇ ಹಂತದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ (ನಾಯ್ಡು ಸ್ಟೋರ್ ಮುಂಭಾಗ) ಮುಂಭಾಗದಿಂದ ಹಳೆ ಮಾನಂದವಾಡಿ ರಸ್ತೆಗೆ ಸಂಪರ್ಕಿಸುವ ರಸ್ತೆ ಕಾಮಗಾರಿ ಅರ್ಧಕ್ಕೆ ನಿಂತು 4 ತಿಂಗಳು ಕಳೆದಿವೆ. ಇದರಿಂದ ಈ ಮಾರ್ಗದಲ್ಲಿ ವಾಹನ ಸವಾರರು, ರೈಲ್ವೆ ಪ್ರಯಾಣಿಕರ ಓಡಾಟಕ್ಕೆ ತೀವ್ರ ತೊಂದರೆಯಾಗುತ್ತಿದೆ ಎಂಬ ಆರೋಪ ಸಾರ್ವಜನಿಕರಿಂದ ಕೇಳಿ ಬರುತ್ತಿದೆ.

ಈ ರಸ್ತೆಯು ಜೆ.ಪಿ.ನಗರ, ಕುವೆಂಪುನಗರ, ಸರಸ್ವತಿಪುರಂ, ವಿವೇಕಾನಂದನಗರ ಸೇರಿದಂತೆ ಇತರೆ ಬಡಾವಣೆಗಳಿಗೆ ಸಂಪರ್ಕಿಸುವ ಪ್ರಮುಖ ಜೋಡಿ (ಹೈ ಟೆನ್ಷನ್ ಲೈನ್‌ರಸ್ತೆ)ರಸ್ತೆಯಾಗಿದೆ. ಈ ರಸ್ತೆಯಲ್ಲಿ ಆಳುದ್ದ ಗುಂಡಿಗಳು ಬಿದ್ದು ಸಾರ್ವಜನಿಕರ ಓಡಾಟಕ್ಕೆ ತೀವ್ರ ತೊಂದರೆಯಾಗಿತ್ತು. ಹಾಗಾಗಿ ಈ ರಸ್ತೆಗೆ ಡಾಂಬರೀಕರಣ ಮಾಡುವಂತೆ ಮುಡಾ ಮತ್ತು ಈ ಭಾಗದ ಶಾಸಕರ ಗಮನಕ್ಕೆ ತಂದು ಕಾಮಗಾರಿ ಆರಂಭಿಸಲಾಗಿತ್ತು. ಆದರೆ, ಕೆಲವರ ಚಿತಾವಣೆಯಿಂದ ಈ ಕಾಮಗಾರಿ ಅರ್ಧಕ್ಕೆ ನಿಂತು ನಾಲ್ಕು ತಿಂಗಳಾಗಿವೆ ಎನ್ನುತ್ತಾರೆ ಶ್ರೀರಾಂಪುರ 2ನೇ ಹಂತದ ನಿವಾಸಿ ಸುರೇಂದ್ರ.

ಈ ರಸ್ತೆಯಲ್ಲಿ ದಿನನಿತ್ಯ, ಹೆಚ್.ಡಿ.ಕೋಟೆ, ನಂಜನಗೂಡು, ಚಾಮರಾಜನಗರ ಸೇರಿದಂತೆ ಇತರೆ ದೂರದ ಸ್ಥಳಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ಶಿಕ್ಷಕರು, ವಿವಿಧ ಅಧಿಕಾರಿಗಳು ಸಂಚಾರಕ್ಕೆ ಈ ರಸ್ತೆ ಅವಲಂಬಿಸಿದ್ದಾರೆ. ಆದರೆ, ಈ ರಸ್ತೆ ಕಾಮಗಾರಿ ಅರ್ಧಕ್ಕೆ ನಿಂತಿರುವ ಹಿನ್ನಲೆಯಲ್ಲಿ ಮೈಸೂರು–ಮಾನಂದವಾಡಿ ಹೆದ್ದಾರಿ ತಲುಪಲು ಸುತ್ತಿ ಬಳಸಿ ಹೋಗುವ ಪರಿಸ್ಥಿತಿ ಎದುರಾಗಿದೆ ಎಂದು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

**ಚಿಕ್ಕರಸ್ತೆಗಳ ಮೇಲೆ ಒತ್ತಡ:** ಈ ರಸ್ತೆ ಕಾಮಗಾರಿ ಅರ್ಧಕ್ಕೆ ನಿಂತಿರುವುದರಿಂದ ಈ ರಸ್ತೆಯಲ್ಲಿ ವಾಹನ ಸವಾರರು ಬಡಾವಣೆಯ ಚಿಕ್ಕಪುಟ್ಟ ರಸ್ತೆಗಳ ಮೇಲೆ ಅವಲಂಭಿತರಾಗಿದ್ದಾರೆ. ಈ ಓಡಾಟಕ್ಕೂ ಇಲ್ಲಿನ ನಿವಾಸಿಗಳು ಅಲ್ಲಲ್ಲಿ ಕಲ್ಲಿಟ್ಟು ಅಡ್ಡಿಪಡಿಸುತ್ತಿದ್ದಾರೆ. ಮಾನಂದವಾಡಿ ಹೆದ್ದಾರಿ ತಲುಪಲು ದೇವಯ್ಯನ ಹುಂಡಿ ರಸ್ತೆ ಅವಲಂಭಿಸಿದ್ದು, ಈ ರಸ್ತೆಯಲ್ಲಿ ಬೆಳಗ್ಗೆ–ಸಂಜೆ ಟ್ರಾಫಿಕ್ ಜಾಮ್ ಆಗುತ್ತಿದೆ ಎಂಬುದು ಇಲ್ಲಿನ ನಿವಾಸಿಗಳ ಅಳಲು.


**8 ಪ್ರಮುಖ ರೈಲುಗಳ ಓಡಾಟ:** ಮಾಜಿ ಸಂಸದ ಪ್ರತಾಪಸಿಂಹ, ತಮ್ಮ ಅಧಿಕಾರಾವಧಿಯಲ್ಲಿ ಅಶೋಕಪುರಂ ರೈಲ್ವೆ ನಿಲ್ದಾಣ ಮೇಲ್ದರ್ಜೆಗೇರಿಸಲು ಶ್ರಮಿಸಿದರು. ಈ ನಿಲ್ದಾಣದಿಂದ ಚೆನ್ನೈ, ತಿರುಪತಿ ಎಕ್ಸ್‌ಪ್ರೆಸ್, ಚಾಮರಾಜನಗರ, ನಂಜನಗೂಡು ಹಾಗೂ ಎರಡು ಮೆಮೊ ರೈಲುಗಳ ಓಡಾಟವಿದೆ. ಹಾಗಾಗಿ ಈ ರೈಲ್ವೆ ನಿಲ್ದಾಣಕ್ಕೆ ಬಂದು–ಹೋಗುವ ಪ್ರಯಾಣಿಕರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಈ ಪ್ರಯಾಣಿಕರೂ ಹದಗೆಟ್ಟ ರಸ್ತೆಯಲ್ಲಿ ಓಡಾಡುವಾಗ ಬಿದ್ದು, ಸಣ್ಣಪುಟ್ಟ ಗಾಯಗಳಾಗಿವೆ. ಈ ತಿಂಗಳಲ್ಲಿ ಸುಮಾರು ನಾಲ್ಕೈದು ಅವಘಡಗಳು ಸಂಭವಿಸಿವೆ ಎನ್ನುತ್ತಾರೆ ಹಿರಿಯ ವಕೀಲ ಉಮೇಶ್.

**ಸಮಸ್ಯೆ ಬಗೆಹರಿದಿದೆ:** ನಾಯ್ಡು ಸ್ಟೋರ್ ಮುಂಭಾಗದ ರಸ್ತೆ ಹಾಗೂ ಸಾ.ರಾ. ಬಡಾವಣೆಯಲ್ಲಿನ ರಸ್ತೆಗಳ ಡಾಂಬರೀಕರಣಕ್ಕೆ ಒಬ್ಬರೇ ಗುತ್ತಿಗೆದಾರರಿಗೆ ಮುಡಾ ವತಿಯಿಂದ ಟೆಂಡರ್ ನೀಡಲಾಗಿತ್ತು. ಈ ನಡುವೆ, ಖಾಸಗಿ ವ್ಯಕ್ತಿಯೊಬ್ಬರು ಈ ರಸ್ತೆಗೆ ನನ್ನ ಜಾಗದಲ್ಲಿ ಒತ್ತುವರಿಯಾಗಿದೆ ಎಂದು ತಕರಾರು ತೆಗೆದಿದ್ದರು. ಈ ವಿವಾದವನ್ನು ಮುಡಾ ಇಂಜಿಯನಿಯರ್ ಹಾಗೂ ಆಯುಕ್ತರು ಖುದ್ದು ಸ್ಥಳಕ್ಕೆ ಭೇಟಿ ನೀಡಿ ಬಗೆಹರಿಸಿದ್ದಾರೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

> “ ಹಳೆ ಮಾನಂದವಾಡಿ ರಸ್ತೆ ಸಂಪರ್ಕಿಸುವ ಅರ್ಧ ಕಿ.ಮೀ ರಸ್ತೆ ಸಂಪೂರ್ಣ ಹಾಳಾಗಿತ್ತು. ಇದಕ್ಕೆ ಡಾಂಬರೀಕರಣ ಕಾಮಗಾರಿಯನ್ನು ಮುಡಾ ವತಿಯಿಂದ ಆರಂಭಿಸಲಾಗಿತ್ತು. ಆದರೆ, ಮುಡಾ ಇಂಜಿನಿಯರ್–ಗುತ್ತಿಗೆದಾರರ ನಡುವೆ ವೈಮನಸ್ಸು ಹಾಗೂ ಖಾಸಗಿ ವ್ಯಕ್ತಿಯ ತಕರಾರಿಂದ ಈ ಕಾಮಗಾರಿ ಫೆಬ್ರವರಿಯಲ್ಲಿ ಅರ್ಧಕ್ಕೆ ನಿಂತಿತ್ತು. ಈ ಸಮಸ್ಯೆಯನ್ನು ಮುಡಾ ಅಧಿಕಾರಿಗಳ ಸಮ್ಮುಖದಲ್ಲಿ ಮಾತುಕತೆ ಮೂಲಕ ಬಗೆಹರಿಸಲಾಗಿದೆ. ಹಾಗಾಗಿ ಬರುವ ಸೋಮವಾರ (ಜೂ.2ರಿಂದ)ದಿಂದ ಅರ್ಧಕ್ಕೆ ನಿಂತಿರುವ ರಸ್ತೆ ಕಾಮಗಾರಿ ಆರಂಭವಾಗಲಿದೆ.
>
> –ಟಿ.ಎಸ್.ಶ್ರೀವತ್ಸ, ಶಾಸಕ

## ರಾಜ್ಯದಲ್ಲಿ 40 ಜನರಿಗೆ ಕೊರೊನಾ ಸೋಂಕು ದೃಢ

### ಒಟ್ಟು ಪ್ರಕರಣಗಳ ಸಂಖ್ಯೆ 211ಕ್ಕೆ ಏರಿಕೆ



ಬೆಂಗಳೂರು, ಮೇ 28– ರಾಜ್ಯದಲ್ಲಿ ಮತ್ತೆ ಕೊರೊನಾ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಕಳೆದ 24 ಗಂಟೆಯಲ್ಲಿ 40 ಮಂದಿಗೆ ಕೋವಿಡ್–19 ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 211ಕ್ಕೆ ಏರಿಕೆಯಾಗಿದೆ. ಇಂದು ಯಾವುದೇ ಕೋವಿಡ್ ಸಾವು ವರದಿಯಾಗಿಲ್ಲ. ಕೊರೊನಾ ಸಕ್ರಿಯ ಪ್ರಕರಣಗಳ ಸಂಖ್ಯೆ 126 ಆಗಿದ್ದು, 14 ಮಂದಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಜನವರಿ 1ರಿಂದ ಇಲ್ಲಿವರೆಗೂ ಒಟ್ಟಾರೇ 84 ಮಂದಿ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ. ಕಳೆದ 24 ಗಂಟೆಯಲ್ಲಿ ಒಟ್ಟು 395 ಪರೀಕ್ಷೆ ಮಾಡಲಾಗಿದೆ. ಈ ಪೈಕಿ 344 RTPCR ಹಾಗೂ 51 RAT ಪರೀಕ್ಷೆ ಆಗಿದ್ದು, ಪಾಸಿಟಿವಿಟಿ ದರ ಶೇ. 10. 12 ರಷ್ಟಿದ್ದು, ಸಾವಿನ ದರ ಶೂನ್ಯವಾಗಿದೆ.

## ನಿಮ್ಮ ನಿಮ್ಮ ಜಿಲ್ಲೆಗೆ ಹೋಗಿ ಮಳೆ ಹಾನಿಗೆ ಪರಿಹಾರ ಕಲ್ಪಿಸಲು ಕ್ರಮ ಕೈಗೊಳ್ಳಿ

### ಸಚಿವ ಸಹೋದ್ಯೋಗಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಾಕೀತು



ಬೆಂಗಳೂರು, ಮೇ 28(ಕೆಎಂಶಿ)– ಬೆಂಗಳೂರು ಹಾಗೂ ತಮ್ಮ ಕ್ಷೇತ್ರಗಳ ಕೇಂದ್ರ ಸ್ಥಾನದಿಂದ ಹೊರಬಂದು ಮಳೆಯಿಂದ ಉಂಟಾಗಿರುವ ಪ್ರವಾಹ ಮತ್ತು ಹಾನಿ ಪ್ರದೇಶಗಳಿಗೆ ತಕ್ಷಣ ತೆರಳಿ ಎಂದು ತಮ್ಮ ಸಹೋದ್ಯೋಗಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಆದೇಶಿಸಿದ್ದಾರೆ.

ರಾಜ್ಯಾದ್ಯಂತ ಭಾರಿ ಮಳೆಯಿಂದ ಉಂಟಾಗಿರುವ ಪ್ರವಾಹ ಮತ್ತು ಹಾನಿ ಪ್ರದೇಶಗಳಿಗೆ ತಕ್ಷಣ ತೆರಳಿ ಪರಿಹಾರ ಉಸ್ತುವಾರಿ ನೋಡಿಕೊಳ್ಳಿ ಎಂದು ಸೂಚಿಸಿದ್ದಾರೆ. ಮಳೆಯಿಂದ ಉಂಟಾಗಿರುವ ಹಾನಿ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ನಂತರ ಈ ಆದೇಶ ಹೊರಡಿಸಿರುವ ಮುಖ್ಯಮಂತ್ರಿ ಅವರು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಮ್ಮ ತಮ್ಮ ಕೇಂದ್ರ ಸ್ಥಾನಕ್ಕೆ ತೆರಳಿ ಸಮರೋಪಾದಿಯಲ್ಲಿ ಪರಿಹಾರ ಕಾಮಗಾರಿ ಕೈಗೊಳ್ಳಿ ಎಂದಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಜಿಲ್ಲೆಯಲ್ಲಿ ತಕ್ಷಣವೇ ಅಧಿಕಾರಿಗಳ ಸಭೆ ಕರೆದು ಮಳೆ ಅನಾಹುತಗಳ ಬಗ್ಗೆ ಮಾಹಿತಿ ಪಡೆದು ಪರಿಹಾರ ಕ್ರಮ ಕೈಗೊಳ್ಳಿ. ಜಿಲ್ಲಾಧಿಕಾರಿಗಳ ಖಾತೆಯಲ್ಲಿನ ಹಣವನ್ನು ತುರ್ತು ಪರಿಹಾರ ಕಾರ್ಯಗಳಿಗೆ ಬಳಸಿಕೊಳ್ಳಿ, ಯಾವುದೇ ಅನುಮತಿಗೆ ಕಾಯಬೇಡಿ. ಇಡೀ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಪರಿಸ್ಥಿತಿ ಅವಲೋಕಿಸಿ ಮತ್ತು ಕೈಗೊಂಡ ಪರಿಹಾರ ಕಾಮಗಾರಿಗಳ ಬಗ್ಗೆ ಈ ತಿಂಗಳ 30ರೊಳಗೆ ವರದಿ ನೀಡುವಂತೆಯೂ ಸೂಚಿಸಿದ್ದಾರೆ.

ಸಚಿವರು ಮತ್ತು ಕಾರ್ಯದರ್ಶಿಗಳಿಗೆ ಆದೇಶಿಸಿದ ಬೆನ್ನಲ್ಲೇ ಮುಖ್ಯಮಂತ್ರಿ ಅವರು, ಮೇ 30 ಹಾಗೂ 31ರಂದು ಎಲ್ಲಾ ಜಿಲ್ಲಾಧಿಕಾರಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಸಭೆ ಕರೆದಿದ್ದಾರೆ. ಮುಂಗಾರು ಪೂರ್ವದಲ್ಲೇ ಭಾರಿ ಮಳೆಯಾಗಿ ಕೆಲವೆಡೆ ಅನಾಹುತಗಳು ಸಂಭವಿಸಿವೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಮಳೆಯಾಗುವ ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.

ಈ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮ ಹಾಗೂ ಕೃಷಿ ಚಟುವಟಿಕೆಗೆ ಅಗತ್ಯ ಸೌಲಭ್ಯ ಒದಗಿಸುವ ಕುರಿತಂತೆ ಚರ್ಚಿಸಲು ಮುಖ್ಯಮಂತ್ರಿ ಜಿಲ್ಲಾಡಳಿತಗಳ ಸಭೆ ಕರೆದಿದ್ದಾರೆ. ರಾಜ್ಯದ 170 ತಾಲೂಕುಗಳನ್ನು ಪ್ರವಾಹ ಮತ್ತು ಭೂಕುಸಿತಕ್ಕೆ ಗುರಿಯಾಗುವ ತಾಲೂಕುಗಳೆಂದು ಗುರುತಿಸಲಾಗಿದೆ, ಈ ತಾಲೂಕುಗಳಲ್ಲಿ ಮುಂಜಾಗ್ರತೆಯಾಗಿ 2,296 ಕಾಳಜಿ ಕೇಂದ್ರ ಅಥವಾ ಆಶ್ರಯ ತಾಣಗಳನ್ನು ಆರಂಭಿಸಲಾಗುವುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ 201 ಸ್ಥಳಗಳನ್ನು ಪ್ರವಾಹ ಪೀಡಿತ ಪ್ರದೇಶಗಳಾಗಿ ಗುರುತಿಸಲಾಗಿದೆ. ಇತ್ತೀಚೆಗೆ ಸುರಿದ ಭಾರಿ ಮಳೆಗೆ ರಾಜ್ಯದಲ್ಲಿ 45 ಮನೆಗಳು ಹಾನಿಗೊಂಡಿವೆ, 1,385 ಮನೆಗಳಿಗೆ ಭಾಗಶಃ ಹಾನಿಯಾಗಿವೆ, ಶೇ.99ರಷ್ಟು ಪ್ರಕರಣಗಳಲ್ಲಿ ಸಹಾಯಧನ ಪಾವತಿಸಲಾಗಿದೆ. ವಿಪತ್ತು ನಿರ್ವಹಣೆಗೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಪಿ.ಡಿ. ಖಾತೆಯಲ್ಲಿ 97,351.95 ಲಕ್ಷ ರೂ. ಅನುದಾನ ಲಭ್ಯವಿದೆ ಎಂದಿದ್ದಾರೆ.



**PUBLIC NOTICE**

Notice is hereby given that my client Sri. Ravi, Having Office at No. 116/1, 2 Floor, Union bank of India Building, 11 Cross, Malleshwaram, Bangalore-560003, (9019577364,9945232655) intending to purchase the schedule mentioned property from its owner partners in Sri. Ranganatha Infrastructure Sri. Murulidhar Puttaswamy son of Sri. Puttaswamy. G.R, and Sri.Achyuthamurthy son of Rangaswamy.G.R.

Any person/s having or claiming any right, title, estate or interest by way of inheritance, mortgage, sale, lease lien, charge, trust, maintenance, easements, transfer, license, possession, gift, encumbrance or in whatsoever manner are hereby required to give notice of the same to the undersigned in the address mentioned below within 1 Week(7 days) from the date of publication thereof, together with the copies of all documents on the basis of which such claims are made, failing which any such right, title, interest or claim, if any will be deemed to have been waived and not binding on my client and my client will proceed to conclude the transaction of purchase without reference to the same, if any.

**SCHEDULE 'A' PROPERTY**

All that piece and parcel of Agricultural lands bearing Sy. No. 7/6 totally measuring 1 Acre 20 guntas situated at Ilwala Village, Ilwala Hobli, Mysuru Taluk and bounded on: North by : Road, South by : Property bearing Sy No. 10, West by : Property bearing Sy No. 7/5, East by : Property bearing Sy No. 7/7.

**SCHEDULE 'B' PROPERTY**

All that piece and parcel of Agricultural lands bearing Sy. No. 7/7 totally measuring 2 Acre 20 guntas situated at Ilwala Village, Ilwala Hobli, Mysuru Taluk and bounded on: North by : Road. South by : Property bearing Sy No. 10. West by : Property bearing Sy No. 7/6 East by : Property bearing Sy No. 7/1

Sd/-J.M. AIYANNA,B.Sc., LL.B.
ADVOCATE ,KAR 1635/1995:
#1143/1E, 1st Floor, Chanakya Circle, Geetha Road,
Chamarajapuram, Mysuru - 570 005
Mobile: 9845113628

**Place: Mysore, Date: 27-05-2025**



**ಕರ್ನಾಟಕ ಸರ್ಕಾರ**
**ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ**
**ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ**
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 04/2025–26 । ದಿನಾಂಕ: 23–05–2025

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು ಲೆಕ್ಕ ಶೀರ್ಷಿಕೆ: ಶಿಕ್ಷಣ ಇಲಾಖೆ ಯೋಜನೆಯಡಿ ಕರೆದಿರುವ ಕಾಮಗಾರಿಗಳನ್ನು **KW-1 & KW-2 (Standard Tender Document)** ಪ್ರಕಾರ **KPPP** ಮುಖಾಂತರ ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮಗಳು **KTPP Act 1999 and KTPP Rule** 2000 ರಲ್ಲಿ ಸಿವಿಲ್ ಗುತ್ತಿಗೆದಾರರುಗಳಂದ ಏಕ ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಅಂದಾಜು ಮೊತ್ತ ರೂ. 52.00 ಲಕ್ಷಗಳ ಒಟ್ಟು 03 ಟೆಂಡರ್ ಆಹ್ವಾನಿಸಲಾಗಿದೆ. ಆನ್‌ಲೈನ್ ಟೆಂಡರ್ ಅಪ್‌ಲೋಡ್ ಮಾಡುವ ದಿನಾಂಕ : 26–05–2025 ಕೊನೆಯ ದಿನಾಂಕ: 03–06–2025 ಸಂಜೆ 17.00 ಗಂಟೆಯವರೆಗೆ, ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05–06–2025 ಇನ್ನುಳಿದ ಹೆಚ್ಚಿನ ಮಾಹಿತಿಗಳನ್ನು **KPPP website www.kppp.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಚೇರಿ ದೂರವಾಣಿ ಸಂಖ್ಯೆ: 08226–223019ಕ್ಕೆ ಸಂಪರ್ಕಿಸುವುದು.

ಸಂ:ವಾಸಾಸಂಇ:ಚಾನಗರ: 109: 2025–26

ಸಹಿ/– ಕಾರ್ಯಪಾಲಕ ಇಂಜಿನಿಯರ್
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಚಾಮರಾಜನಗರ







**ಪುರಸಭಾ ಕಾರ್ಯಾಲಯ, ಬನ್ನೂರು**
www.bannurtown.mrc.gov.in |Email: itsatff_ulb_bannur@yahoo.com
ಫೋನ್: 08227–276058, 08227–276111
ಮೈಸೂರು ಮಳವಳ್ಳಿ ರಸ್ತೆ, ಬನ್ನೂರು 571101 ತಿ.ನರಸೀಪುರ ತಾ|| ಮೈಸೂರು ಜಿಲ್ಲೆ

**ಆಸಕ್ತಿ ಅಭಿವ್ಯಕ್ತಿ (EXPRESSION OF INTEREST)**

ಬನ್ನೂರು ಪುರಸಭೆ ವ್ಯಾಪ್ತಿಯ 23 ವಾರ್ಡ್‌ಗಳಲ್ಲಿ 03 ವರ್ಷಗಳ ಅವಧಿಗೆ ಪೂರ್ಣ ಸಮಯದ ಪಾತ್ರದ ಅಡಿಯಲ್ಲಿ IEC ಚಟುವಟಿಕೆಗಳನ್ನು ಕೈಗೊಳ್ಳಲು ಡೇ–ನಲ್ಮ್ ಯೋಜನೆಯಡಿ ನೋಂದಾಯಿತ SHG ಸದಸ್ಯರಿಂದ 'ಆಸಕ್ತಿ ಅಭಿವ್ಯಕ್ತಿ'ಯನ್ನು ಆಹ್ವಾನಿಸಿದ್ದು, Day-NULM ನಲ್ಲಿ ನೋಂದಾಯಿಸಿಕೊಂಡಿರುವ ಆಸಕ್ತ SHG ಸದಸ್ಯರು ತಮ್ಮ ಆಸಕ್ತಿಯ ಅಭಿವ್ಯಕ್ತಿಯನ್ನು www.bannurtown.mrc.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುವ ನಿಗದಿತ ನಮೂನೆಯಲ್ಲಿ ದಿನಾಂಕ: 22.05.2025ರ ಸಂಜೆ 5:00ಗಂಟೆಯ ಒಳಗಾಗಿ ಇಮೇಲ್ ವಿಳಾಸ itsatff_ulb_bannur@yahoo.com/ka.bannur.tmc.gmail.com ಗೆ ಕಳುಹಿಸತಕ್ಕದು. ಆಸಕ್ತ SHG ಸದಸ್ಯರು 1. ಗುರುತಿನ ಪುರಾವೆ 2. ವಿಳಾಸ ಪುರಾವೆ 3. ಎಂಪನೇಲ್ಡ್ ದಾಖಲೆಗಳು 4. ಶೈಕ್ಷಣಿಕ ಅರ್ಹತೆ 5. Day-NULM ದೃಢೀಕರಣ ಪತ್ರದ ನಮೂನೆಯನ್ನು ಸಹ ಲಗತ್ತಿಸಬೇಕು ಆಯ್ಕೆಯಾದ ಅಭ್ಯರ್ಥಿಗಳನ್ನು ಅವರ ಕೌಶಲ್ಯವನ್ನು ನಿರ್ಣಯಿಸಲು ವಿಷಯದ ಬಗ್ಗೆ ತಿಳುವಳಿಕೆಗಾಗಿ ಸಂದರ್ಶನಕ್ಕೆ ಕರೆಯಲಾಗುವುದು.

| ಕ್ರ.ಸಂ | ವಿವರ | ಅರ್ಜಿ ಸಲ್ಲಿಸಲು ಅರ್ಹತೆ |
|---|---|---|
| 1. | ಕಮ್ಯುನಿಟಿ (COMMUNITY MOBILIZER) | 1) ಎಸ್.ಎಸ್.ಎಲ್.ಸಿ. / 10ನೇ ತರಗತಿಯಲ್ಲಿ ಪಾಸ್ ಆಗಿರಬೇಕು ಕಡ್ಡಾಯವಾಗಿ ಕನ್ನಡ ಮಾಧ್ಯಮದಲ್ಲಿ ಕೆಲಸ ನಿರ್ವಹಿಸುವವರಿಗೆ ಆದ್ಯತೆ 2) ಬನ್ನೂರು ಪುರಸಭೆ Day-NULM ಶಾಖೆಯಲ್ಲಿ ನೋಂದಾಯಿತ ಸ್ವ–ಸಹಾಯ ಗುಂಪಿನ ಸದಸ್ಯರು (SHG) |

ಸಹಿ/–ಮುಖ್ಯಾಧಿಕಾರಿ, ಪುರಸಭೆ, ಬನ್ನೂರು